ಕರ್ನಾಟಕ ವಿಧಾನ ಪರಿಷತ್ತು

# ನೂರ ಐವತ್ತೈದನೆಯ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ದಿನಾಂಕ: 03.03.2025 ರಿಂದ
21.03.2025ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001

# ನೂರ ಐವತ್ತೈದನೆಯ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ದಿನಾಂಕ: 03.03.2025 ರಿಂದ 21.03.2025ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ವಿಧಾನ ಸೌಧ, ಬೆಂಗಳೂರು-560 001

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ – 1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಸೋಮವಾರ, ದಿನಾಂಕ:03.03.2025**

**(01)**

ದಿನಾಂಕ:03.03.2025 ರಂದು ಮಧ್ಯಾಹ್ನ 1.00 ಗಂಟೆಗೆ ಸದನವು ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

'ವಂದೇ ಮಾತರಂ' ಗೀತೆಯೊಂದಿಗೆ ಗೌರವ ಸೂಚಿಸುವ ಮೂಲಕ ಸದನದ ಕಾರ್ಯಕಲಾಪಗಳು ವಿದ್ಯುಕ್ತವಾಗಿ ಆರಂಭಗೊಂಡಿತು.

### ಭಾರತದ ಸಂವಿಧಾನ

### ಪೀಠಿಕೆ

ಮಾನ್ಯ ಸಭಾಪತಿಯವರು ಎಲ್ಲಾ ಶಾಸಕರಿಗೂ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು.

ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸದನದ ಮುಂದೆ ಮಂಡಿಸಿದರು.

### 1. ಸಂತಾಪ ಸೂಚನೆಗಳು

ಕಳೆದ ಅಧಿವೇಶನದ ನಂತರ ನಿಧನ ಹೊಂದಿದ ಈ ಕೆಳಕಂಡ ಗಣ್ಯರುಗಳಿಗೆ ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು.

01. ಪಟೇಲ್ ಶಿವರಾಮ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರು
02. ಡಾ: ಮನಮೋಹನ್ ಸಿಂಗ್, ಭಾರತದ ಮಾಜಿ ಪ್ರಧಾನಿ, ಅರ್ಥಕ್ರಾಂತಿಯ ರಾಜನೀತಿಜ್ಞ ಹಾಗೂ ಶಿಕ್ಷಣತಜ್ಞರು
03. ನಾ. ಡಿ'ಸೋಜಾ, ಖ್ಯಾತ ಹಿರಿಯ ಸಾಹಿತಿ
04. ಎಸ್. ಸೋಮಸುಂದರಂ, ಖ್ಯಾತ ಸುಗಮ ಸಂಗೀತ ಗಾಯಕ, ಪ್ರದರ್ಶಕ ಮತ್ತು ಸಂಯೋಜಕ
05. ಆರ್. ವಿಜಯಕುಮಾರ್, ನಟ, ಬರಹಗಾರ ಮತ್ತು ನಿರ್ದೇಶಕರು
06. ಸುಕ್ರಿ ಬೊಮ್ಮ ಗೌಡ, ಪದ್ಮಶ್ರೀ ಪುರಸ್ಕೃತ ಕಾಡಿನ ಹಕ್ಕಿ, ಜಾನಪದ ಕೋಗಿಲೆ

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರುಗಳು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸಂತಾಪ ಸೂಚನಾ ನಿರ್ಣಯ ಅನುಮೋದಿಸಿ ಮಾತನಾಡಿದರು.

ಶ್ರೀಯುತರುಗಳಾದ:

1. ಡಾ: ತಳವಾರ್ ಸಾಬಣ್ಣ
2. ಬಿ.ಕೆ. ಹರಿಪ್ರಸಾದ್
3. ಅಡಗೂರ್ ಹೆಚ್. ವಿಶ್ವನಾಥ್
4. ಐವನ್ ಡಿ'ಸೋಜಾ
5. ಸಲೀಂ ಅಹಮದ್
6. ಶರವಣ ಟಿ.ಎ.
7. ಉಮಾಶ್ರೀ
8. ಎಸ್.ಎಲ್. ಭೋಜೇಗೌಡ
9. ಎಂ. ನಾಗರಾಜು

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತ ಗಣ್ಯರುಗಳ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 2. ಪ್ರಕಟಣೆ

ಮಾನ್ಯ ಸಭಾಪತಿಯವರು ಈ ಕೆಳಕಂಡ ಪ್ರಕಟಣೆಯನ್ನು ಪ್ರಕಟಿಸಿದರು.

ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ(ತಿದ್ದುಪಡಿ) ಅಧಿನಿಯಮ 2009ರ ಪ್ರಕರಣ 3(ಸಿಸಿಸಿ)ರ ರೀತ್ಯಾ ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್ ಎನ್ ರವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ಹೆಸರಿಸಿರುತ್ತಾರೆ. ಆದುದರಿಂದ, ದಿನಾಂಕ:03.03.2025 ರಿಂದ ಜಾರಿಗೆ ಬರುವಂತೆ ಶ್ರೀ ರವಿಕುಮಾರ್ ಎನ್ ರವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

ಸದನವನ್ನು ಮಧ್ಯಾಹ್ನ 2.40 ಗಂಟೆಯಲ್ಲಿ ಮುಂದೂಡಿ ದಿನಾಂಕ:04.03.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**

**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ – 1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:04.03.2025**

**(02)**

ದಿನಾಂಕ:04.03.2025 ರಂದು ಬೆಳಗ್ಗೆ 11.10 ಗಂಟೆಗೆ ಸದನವು ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಸಂತಾಪ ಸೂಚನೆ

**ವಿಧಾನ ಪರಿಷತ್ತಿನ ಮಾಜಿ ಶಾಸಕರಾಗಿದ್ದ ಖಾಜಿ ಅರಶದ ಅಲಿ** ಅವರು ದಿನಾಂಕ:03.03.2025ರಂದು ನಿಧನ ಹೊಂದಿದ್ದು, ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 2. ಪ್ರಶ್ನೋತ್ತರ

ದಿನಾಂಕ:04.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 1ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 1(94) | |
| 2. | 2(111) | |
| 3. | 3(52+93) | ಕಾಲಾವಕಾಶ |
| 4. | 4(32) | |
| 5. | 5(36) | |
| 6. | 6(02) | ಕಾಲಾವಕಾಶ |
| 7. | 7(44) | |
| 8. | 8(82) | ವರ್ಗಾವಣೆ |
| 9. | 9(81) | ಅರ್ಧಗಂಟೆ ಕಾಲಾವಧಿ ಚರ್ಚೆ |
| 10. | 10(7) | |
| 11. | 11(98) | ವರ್ಗಾವಣೆ |
| 12. | 12(84) | ಮಾನ್ಯ ಶಾಸಕರಾದ ಶ್ರೀ ಕೆ. ಅಬ್ದುಲ್ ಜಬ್ಬರ್ ಅವರ ಪರವಾಗಿ ಶ್ರೀ ಐವನ್ ಡಿ'ಸೋಜಾ |
| 13. | 13(56) | |
| 14. | 14(10) | |
| 15. | 15(08) | |

ದಿನಾಂಕ:04.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 1ನೇ ಪಟ್ಟಿಯ ಒಟ್ಟು 88 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

### 3. ಪ್ರಕಟಣೆ

ಮಾನ್ಯ ಸಭಾಪತಿಯವರು ಈ ಕೆಳಕಂಡ ಪ್ರಕಟಣೆಯನ್ನು ಪ್ರಕಟಿಸಿದರು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಮಾನ್ಯ ಶಾಸಕರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

**ಶ್ರೀಮತಿ/ಶ್ರೀಯುತರುಗಳಾದ:**

1. ಬಿ.ಕೆ. ಹರಿಪ್ರಸಾದ್
2. ಭಾರತಿ ಶೆಟ್ಟಿ
3. ಎಸ್.ಎಲ್. ಭೋಜೇಗೌಡ
4. ಮಂಜುನಾಥ್ ಭಂಡಾರಿ

## 4. ಶುಭಾಶಯ/ಅಭಿನಂದನೆ

ಡಾ: ಡಿ. ತಿಮ್ಮಯ್ಯ ಅವರಿಗೆ ಜನುಮ ದಿನದ ಅಂಗವಾಗಿ ಶುಭ ಹಾರೈಸಲಾಯಿತು ಹಾಗೂ ಶ್ರೀ ಎನ್. ರವಿಕುಮಾರ್ ಅವರು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಆಯ್ಕೆಯಾಗಿರುವುದಕ್ಕೆ ಮಾನ್ಯ ಸಭಾಪತಿಯವರು ಸದನದ ಪರವಾಗಿ ಅಭಿನಂದಿಸಿದರು.

## 5. ಶೂನ್ಯ ವೇಳೆ ಪ್ರಸ್ತಾವಗಳು

1. **ಶ್ರೀ ಸಿ.ಟಿ. ರವಿ ಹಾಗೂ ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನೀರು ಪೂರೈಕೆಗೆ ಬೋರ್‌ವೆಲ್ ಕೊರೆಸಲು ಹಾಗೂ ಜಾನುವಾರುಗಳಿಗೆ ಮೇವು ಪೂರೈಕೆಗೆ ಗೋಶಾಲೆ ತೆರೆಯುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ನಿರಾಣಿ ಹಣಮಂತ ರುದ್ರಪ್ಪ** ಅವರು ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 09 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಎಂ. ನಾಗರಾಜು** ಅವರು ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಭೂಕುಸಿತ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕ ಕಾಮಗಾರಿಗಳನ್ನು ತಡೆಗಟ್ಟುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)** ಅವರು ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಚಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಲೋಕಾರ್ಪಣೆಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು ವಿಶ್ವವಿದ್ಯಾಲಯಗಳು, ಸಹಕಾರ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಸಿ.ಎನ್. ಮಂಜೇಗೌಡ** ಅವರು ರಾಜ್ಯದಲ್ಲಿ ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ ಹಣ ದುರ್ಬಳಕೆ ಆಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಡಾ:ಧನಂಜಯ ಸರ್ಜಿ** ಅವರು ಸಾರ್ವಜನಿಕರಿಗೆ ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಐವನ್ ಡಿ'ಸೋಜಾ** ಅವರು ಉಡುಪಿ ಜಿಲ್ಲೆಯ ಬ್ರಹ್ಮಾವರದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೆಲಸಮ ಮಾಡಿ ರೈತ ವರ್ಗಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಶಶೀಲ್ ಜಿ. ನಮೋಶಿ** ಅವರು ಡಿಸೆಂಬರ್ 2024ರಂದು ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಡೆಸಲಾದ ಕೆ.ಎ.ಎಸ್. ಪರೀಕ್ಷಾ ಪತ್ರಿಕೆಯಲ್ಲಿ ನ್ಯೂನತೆಗಳು ಕಂಡು ಬಂದಿರುವುದರಿಂದ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆದು, ಮರು ಅಧಿಸೂಚನೆ ಹೊರಡಿಸುವಂತೆ ಕೋರಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

### 6. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸಂಬಂಧಪಟ್ಟ ಮಾನ್ಯ ಸಚಿವರುಗಳ ಪರವಾಗಿ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ ಮತ್ತು ಎರಡನೇ ಪಟ್ಟಿಯನ್ನು ಸದನದಲ್ಲಿ ಮಂಡಿಸಿದರು.

### 7. ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1. | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.50)<br>The Karnataka Motor Vehicles Taxation (Second Amendment) Bill, 2024 | 08.01.2025 | ರಾಜ್ಯಪಾಲರು |
| 2. | ಕರ್ನಾಟಕ ಧನವಿನಿಯೋಗ (ಸಂ.5) ವಿಧೇಯಕ, 2024 (ವಿ.ಸಂ.53)<br>The Karnataka Appropriation (No.5) Bill, 2024 | 08.01.2025 | ರಾಜ್ಯಪಾಲರು |
| 3. | ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.51) | 10.01.2025 | ರಾಜ್ಯಪಾಲರು |

| | | | |
|---|---|---|---|
| | The Karnataka Protection of Interest of Depositors in Financial Establishments (Amendment) Bill, 2024 | | |
| 4. | ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.56)<br><br>The Karnataka Land Revenue (Third Amendment) Bill, 2024 | 09.01.2025 | ರಾಜ್ಯಪಾಲರು |
| 5. | ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024 (ವಿ.ಸಂ.45)<br><br>The Karnataka Tourism Ropeways Bill, 2024 | 09.01.2025 | ರಾಜ್ಯಪಾಲರು |
| 6. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.49)<br><br>The Karnataka Goods and Services Tax (Second Amendment) Bill, 2024 | 08.01.2025 | ರಾಜ್ಯಪಾಲರು |
| 7 | ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 (ವಿಧೇಯಕ ಸಂ–42)<br><br>The Basavanabagewadi Development Authority Bill, 2024 | 08.01.2025 | ರಾಜ್ಯಪಾಲರು |
| 8 | ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.44) | 08.01.2025 | ರಾಜ್ಯಪಾಲರು |

| | | | |
|---|---|---|---|
| | The Karnataka Labour Welfare Fund (Amendment) Bill, 2024 | | |
| 9 | ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.48)<br><br>The Karnataka Ground Water (Regulation and Control of Development and Management) (Amendment) Bill, 2024 | 09.01.2025 | ರಾಜ್ಯಪಾಲರು |
| 10 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.47)<br><br>The Bruhat Bengaluru Mahanagara Palike (Second Amendment) Bill, 2024 | 09.01.2025 | ರಾಜ್ಯಪಾಲರು |
| 11 | ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ಎರಡನೇ ತಿದ್ದುಪಡಿ) ವಿಧೇಯಕ, 2024 (ವಿ.ಸಂ.27)<br><br>The Karnataka Legislature (Prevention of Disqualification) (Second Amendment) Bill, 2024 | 21.01.2025 | ರಾಜ್ಯಪಾಲರು |
| 12 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.41)<br><br>The Karnataka State Universities (Amendment) Bill, 2024 | 30.01.2025 | ರಾಜ್ಯಪಾಲರು |

| | | | |
|---|---|---|---|
| 13 | ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 (ವಿ.ಸಂ.46)<br>The Chanakya University (Amendment) Billl, 2024 | 07.02.2025 | ರಾಜ್ಯಪಾಲರು |

## 8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವ

"2025ನೇ ಮಾರ್ಚ್ 03ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ ಎಂದು ಶ್ರೀ ಐವನ್ ಡಿ'ಸೋಜಾ ಅವರು ಸೂಚಿಸಿ, ಡಾ: ಯತೀಂದ್ರ ಎಸ್ ಅವರು ಅನುಮೋದಿಸಿದರು.

ಮಾನ್ಯ ಶಾಸಕರಾದ ಶ್ರೀ ಐವನ್ ಡಿ'ಸೋಜಾ ಅವರು ಚರ್ಚೆಯನ್ನು ಪ್ರಾರಂಭಿಸಿದರು.

ಮಧ್ಯಾಹ್ನ 1.16 ಗಂಟೆಯಲ್ಲಿ ಶ್ರೀ **ಎಸ್.ಎಲ್. ಭೋಜೇಗೌಡ** ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 2.05 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾಗಿದ್ದ ಶ್ರೀ **ಎಸ್.ಎಲ್. ಭೋಜೇಗೌಡ** ಅವರು ಪ್ರಕಟಿಸಿದರು.

ಸದನವು ಮಧ್ಯಾಹ್ನ 3.15 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲಿನ ಚರ್ಚೆ

2. ಡಾ: ಯತೀಂದ್ರ ಎಸ್

## 4. ಗಮನ ಸೆಳೆಯುವ ಸೂಚನೆಗಳು

1. **ಶ್ರೀ ಎಸ್.ಎಲ್. ಭೋಜೇಗೌಡ ಮತ್ತು ಶ್ರೀ ಕೆ. ವಿವೇಕಾನಂದ** ಅವರುಗಳು ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ಸರ್ಕಾರ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಎಸ್.ವ್ಹಿ. ಸಂಕನೂರ
2. ಶ್ರೀ ಪುಟ್ಟಣ್ಣ
3. ಶ್ರೀ ಡಿ.ಎಸ್. ಅರುಣ್
4. ಶ್ರೀ ಶರವಣ ಟಿ.ಎ.
5. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
6. ಡಾ: ಧನಂಜಯ ಸರ್ಜಿ

ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

2. **ಡಾ: ತಳವಾರ್ ಸಾಬಣ್ಣ** ಅವರು ಉತ್ತರ ಕರ್ನಾಟಕದ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪೌಷ್ಠಿಕತೆ ಕಾರಣದಿಂದ ಹೆಣ್ಣು ಮಕ್ಕಳ ಬೆಳವಣಿಗೆ ಕುಂಠಿತವಾಗಿ ತಾಯಂದಿರ ಮರಣದ ಸಂಖ್ಯೆ ಹೆಚ್ಚುತ್ತಿರುವುದರಿಂದ, ಪೌಷ್ಠಿಕ ಆಹಾರ ಪೂರೈಕೆ ಮಾಡಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣವನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಮಹಿಳಾ ಮತ್ತು

ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಗಮನ ಸೆಳೆದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

3. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯದಲ್ಲಿ ಸೋಲಾರ್ ವಿದ್ಯುತ್‌ಚ್ಛಕ್ತಿ ಉತ್ಪಾದಿಸಲು ಪ್ರೋತ್ಸಾಹ ಮತ್ತು ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಲು ಯೋಜನೆಗಳನ್ನು ರೂಪಿಸುವ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದರು.

ಮಾನ್ಯ ಇಂಧನ ಸಚಿವರು ಉತ್ತರಿಸಿದರು.

**ಪ್ರಕಟಣೆ**

ದಿನಾಂಕ:04.03.2025ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಜಂಟಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

- ಘನತೆವೆತ್ತ ರಾಜ್ಯಪಾಲರು ದಿನಾಂಕ:03.03.2025 ರಂದು ವಿಧಾನಮಂಡಲದ ಶಾಸಕರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ದಿನಾಂಕ:10.03.2025ರವರೆಗೆ ಚರ್ಚೆ ನಡೆಸುವುದು ಹಾಗೂ ದಿನಾಂಕ:11.03.2025ರಂದು ಸರ್ಕಾರ ಉತ್ತರ ನೀಡುವುದು.
- ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:07.03.2025ರಂದು ಮಂಡಿಸಲಿರುವ 2025–26ನೇ ಸಾಲಿನ ರಾಜ್ಯದ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ ನಡೆಸುವುದು ಹಾಗೂ ದಿನಾಂಕ:20.03.2025ರಂದು ಸರ್ಕಾರ ಉತ್ತರ ನೀಡುವುದು;
- ಹದಿಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು, ಪ್ರತಿಸ್ಪಂದನೆಗಳು ಮತ್ತು ಪರಿಹಾರೋಪಾಯಗಳ ಕುರಿತು

ಚರ್ಚಿಸಲು ಹಾಗೂ ಮಾದಕ ವಸ್ತುಗಳ ಬಳಕೆಗೆ ಯುವ ಪೀಳಿಗೆಯು ಪ್ರೇರಿತರಾಗುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಅಪ್ರಾಪ್ತ ವಯಸ್ಸಿನ ಮಕ್ಕಳು ಮತ್ತು ಯುವ ಪೀಳಿಗೆಯವರುಗಳು ಮಾದಕ ದ್ರವ್ಯಗಳ ವ್ಯಸನಿಗಳಾಗುತ್ತಿರುವುದನ್ನು ತಡೆಗಟ್ಟುವ ವಿಷಯದ ಕುರಿತು ಚರ್ಚಿಸಲು ಅವಕಾಶ ಕಲ್ಪಿಸುವುದು.

- ಧನವಿನಿಯೋಗ ವಿಧೇಯಕ, ಹಣಕಾಸು ವಿಧೇಯಕಗಳು ಹಾಗೂ ಸರ್ಕಾರದಿಂದ ಸ್ವೀಕೃತವಾಗಲಿರುವ ವಿಧೇಯಕಗಳ ಮಂಡನೆ, ಚರ್ಚೆ ಹಾಗೂ ಅಂಗೀಕಾರ.
- ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಮೇರೆಗೆ ಚರ್ಚೆಗಳನ್ನು ತೆಗೆದುಕೊಳ್ಳುವುದು.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲಿನ ಚರ್ಚೆ

3. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಧ್ಯಾಹ್ನ 4.55 ಗಂಟೆಯಲ್ಲಿ **ಶ್ರೀ ಮಂಜುನಾಥ್ ಭಂಡಾರಿ** ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಸಂಜೆ 5.47 ಗಂಟೆಗೆ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

## 2. ನಿಯಮ 330ರ ಮೇರೆಗೆ

1. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ಸೊಪ್ಪಿನ ಬೆಟ್ಟ, ಕುಮಕಿ, ಸ್ಲೀಪ್‌ಗಳ ಬಳಕೆ, ಪಾರಂಪಾರಿಕ ಅತಿಕ್ರಮಣ ಮತ್ತು ಕಾಡು ಪ್ರಾಣಿಗಳಿಂದ ಆಗುತ್ತಿರುವ ಜೀವ ಹಾಗೂ ಬೆಳೆಹಾನಿಗಳಿಗೆ ಪರಿಹಾರ ನೀಡುವಲ್ಲಿ ಆಗುತ್ತಿರುವ ವಿಳಂಬದ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎಸ್.ಎಲ್. ಭೋಜೇಗೌಡ
2. ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
3. ಶ್ರೀ ಎನ್. ರವಿಕುಮಾರ್
4. ಡಾ: ಧನಂಜಯ್ಯ ಸರ್ಜಿ

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಸ್ಪಷ್ಟೀಕರಣ ನೀಡಿದರು.

ಸದನವನ್ನು ಸಂಜೆ 7.30 ಗಂಟೆಯಲ್ಲಿ ಮುಂದೂಡಿ ದಿನಾಂಕ:05.03.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ – 1

## ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಬುಧವಾರ, ದಿನಾಂಕ:05.03.2025**

**(03)**

ದಿನಾಂಕ:05.03.2025 ರಂದು ಬೆಳಗ್ಗೆ 10.30 ಗಂಟೆಗೆ ಸದನವು ಮಾನ್ಯ ಸಭಾಪತಿಯವರ(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### 1. ಪ್ರಶ್ನೋತ್ತರ

ದಿನಾಂಕ:05.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 2ನೇ ಪಟ್ಟಿಯ ಈ ಕೆಳಕಂಡ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 16(180+117)
2. 17(170)
3. 18(129)
4. 19(164)
5. 20(187)
6. 21(191)
7. 22(147)
8. 23(166)
9. 24(156) ವರ್ಗಾವಣೆ
10. 25(133+157)

11. 26(24)

12. 27(165)

13. 28(126) ಕಾಲಾವಕಾಶ

14. 29(142) ಮುಂದಿನ ವಾರ

15. 30(145)

**ದಿನಾಂಕ:04.03.2025ರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 8(82)

ದಿನಾಂಕ:05.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 2ನೇ ಪಟ್ಟಿಯ ಒಟ್ಟು 84 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

## 2. ಶೂನ್ಯ ವೇಳೆ

1. **ಶ್ರೀ ಎಂ. ನಾಗರಾಜು** ಅವರು ಬೆಂಗಳೂರು ಮಹಾನಗರದಲ್ಲಿ ಬಿಬಿಎಂಪಿ ವತಿಯಿಂದ ಕೈಗೆತ್ತಿಕೊಂಡಿರುವ ವಿವಿಧ ಕಾಮಗಾರಿಗಳನ್ನು ಮಳೆಗಾಲದ ಮುನ್ನವೇ ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಡಿ.ಎಸ್. ಅರುಣ್** ಅವರು ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮಗಳ ಸೂಕ್ತ ಅನುಷ್ಠಾನದ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಸಿ.ಎನ್. ಮಂಜೇಗೌಡ** ಅವರು ರಾಜ್ಯ ಗ್ರಾಮ ಪಂಚಾಯಿತಿ ನೌಕರರಿಗೆ ಕಾಲಮಿತಿಯೊಳಗೆ ಕನಿಷ್ಠ ವೇತನ ಜಾರಿಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಟೊಂಕ ಬಂದರು ಯೋಜನೆಯಿಂದ ಮೀನುಗಾರರು ಉದ್ಯೋಗ ಕಳೆದುಕೊಂಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಗೋವಿಂದ ರಾಜು** ಅವರು ಉನ್ನತ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿಳಂಬ ಮಾಡದೇ ವಿದ್ಯಾರ್ಥಿವೇತನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಕಳಪೆ ಕಾಮಗಾರಿ ನಡೆದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಎನ್. ರವಿಕುಮಾರ್** ಅವರು ರಾಜ್ಯದ ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಶಾಂತಾರಾಮ್ ಬುಡ್ನ** ಸಿದ್ಧಿ ಅವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ರಹ್ಮರು ಗ್ರಾಮದ ಮಾಸ್ತಿಬೆಣ, ಸೊಪ್ಪರತಿ ಮೂಲಕ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ರಸ್ತೆಯನ್ನು ನಿರ್ಮಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಸಿ.ಟಿ. ರವಿ** ಅವರು ಚಿಕ್ಕಮಗಳೂರು ತಾಲ್ಲೂಕು ಕಛೇರಿ ಮುಂಭಾಗದಲ್ಲಿರುವ ನಲ್ಲೂರು ಮಠದ ಜಾಗದಲ್ಲಿದ್ದ ಅಂಗಡಿಗಳನ್ನು ನೆಲಸಮ ಮಾಡಿದವರ ವಿರುದ್ಧ ಕ್ರಮಕೈಗೊಂಡು ವರ್ತಕರಿಗೆ ರಕ್ಷಣೆ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಶರವಣ ಟಿ.ಎ.** ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾದ ನೀರಿನ ಬಳಕೆಗೆ ನ್ಯಾಯಾಲಯದ ತೀರ್ಪಿನ

ಅಂತಿಮ ಅಧಿಸೂಚನೆ ನೆಪದಲ್ಲಿ ಕಾಲಹರಣ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

4. ಶ್ರೀ ಎಸ್.ಎಲ್. ಭೋಜೇಗೌಡ

ಮಧ್ಯಾಹ್ನ 12.40 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 01.15 ಗಂಟೆಗೆ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

5. ಶ್ರೀ ಅಡಗೂರ್ ಹೆಚ್. ವಿಶ್ವನಾಥ್

ಮಧ್ಯಾಹ್ನ 1.50 ಗಂಟೆಯಲ್ಲಿ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಮಧ್ಯಾಹ್ನ 3.30 ಗಂಟೆಗೆ ಮಾನ್ಯ ಸಭಾಪತಿಯವರ(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 4. ಗಮನ ಸೆಳೆಯುವ ಸೂಚನೆಗಳು

1. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ರಾಜ್ಯಾದ್ಯಂತ ಎರಡೂವರೆ ಸಾವಿರ ದೇವಾಲಯಗಳ ನೌಕರರುಗಳು ವೇತನ ತಾರತಮ್ಯಕ್ಕೆ ಒಳಗಾಗಿರುವ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಉತ್ತರಿಸಿದರು.

2. **ಶ್ರೀ ಗೋವಿಂದರಾಜು** ಅವರು ಕರ್ನಾಟಕ ರಾಜ್ಯದಲ್ಲಿ ಕುಡಿಯಲು ಮತ್ತು ಕೃಷಿಗೆ ಬಳಸುತ್ತಿರುವ ಕೊಳವೆ ಬಾವಿಗಳ ಅಂತರ್‌ಜಲದಲ್ಲಿ ನೈಟ್ರೇಟ್ ಮತ್ತು ಫ್ಲೋರೈಡ್ ಅಂಶ ಸಾಮಾನ್ಯಕ್ಕಿಂತ ಹೆಚ್ಚಾಗಿ ಪತ್ತೆಯಾಗಿರುವುದರಿಂದ ಪರಿಸರ ಮತ್ತು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡಿರುವ ಕುರಿತು ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಗಮನ ಸೆಳೆದರು.

ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು.

3. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್(ನಿ)ರಲ್ಲಿ 2017-2018 ರಿಂದ 2023-2024ರ ಅವಧಿಯಲ್ಲಿ ನಡೆದಿರುವ ಅವ್ಯವಹಾರ ಮತ್ತು ಹಣ ದುರುಪಯೋಗ ಪ್ರಕರಣಗಳನ್ನು ಲೋಕಾಯುಕ್ತದಿಂದ ತನಿಖೆ ನಡೆಸಿ ಬ್ಯಾಂಕಿನ ಆರ್ಥಿಕ ಸುಸ್ಥಿತಿಗೆ ಕ್ರಮವಹಿಸುವ ಕುರಿತು ಮಾನ್ಯ ಸಹಕಾರ ಸಚಿವರ ಗಮನ ಸೆಳೆದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

4. **ಡಾ: ಧನಂಜಯ ಸರ್ಜಿ** ಅವರು ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ನೀತಿ ಹಾಗೂ ತೆಗದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

## 5. ವರದಿಯನ್ನೊಪ್ಪಿಸುವುದು

**ಶ್ರೀ ಹೆಚ್.ಎಸ್. ಗೋಪಿನಾಥ್** ಅವರು 2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನೊಪ್ಪಿಸಿದರು.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

6. ಶ್ರೀ ಸಿ.ಟಿ. ರವಿ

7. ಡಾ: ಉಮಾಶ್ರೀ

ಸಂಜೆ 5.30 ಗಂಟೆಯಲ್ಲಿ **ಶ್ರೀ ಮಂಜುನಾಥ್ ಭಂಡಾರಿ** ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

8. ಶ್ರೀ ಶರವಣ ಟಿ.ಎ.

ಸಂಜೆ 6.00 ಗಂಟೆಗೆ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಸಂಜೆ 6.05 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಸಂಜೆ 6.25 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

9. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

ಸದನವನ್ನು ರಾತ್ರಿ 7.00 ಗಂಟೆಯಲ್ಲಿ ಮುಂದೂಡಿ ದಿನಾಂಕ:06.03.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

***

# **ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ-1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:06.03.2025**

**(04)**

ಸದನವು ಬೆಳಗ್ಗೆ: 10.35 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:06.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ-IVರ 3ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 31(256) | |
| 2. | 32(239) | ವರ್ಗಾವಣೆ |
| 3. | 33(322) | ಗೈರು ಹಾಜರಿ |
| 4. | 34(263) | |
| 5. | 35(285) | |
| 6. | 36(266) | |
| 7. | 37(280) | |
| 8. | 38(273) | |
| 9. | 39(315) | |
| 10. | 40(279) | |

11. 41(297)

12. 42(274+223) ತಡೆಹಿಡಿಯಲಾಯಿತು

13. 43(233) ತಡೆಹಿಡಿಯಲಾಯಿತು

14. 44(251) ವರ್ಗಾವಣೆ

15. 45(215) ತಡೆಹಿಡಿಯಲಾಯಿತು

**ದಿನಾಂಕ:04.03.2025ರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 11(98) ಗೈರು ಹಾಜರಿ

ದಿನಾಂಕ:06.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 3ನೇ ಪಟ್ಟಿಯ ಒಟ್ಟು 110 ಪ್ರಶ್ನೆಗಳ ಪೈಕಿ **42** ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರು ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸದೆ, ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರುಗಳು ಅಕ್ಷರ ದಾಸೋಹ ನೌಕರರಿಗೆ ಗೌರವಧನ ಹೆಚ್ಚಿಸುವುದರೊಂದಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಡಾ: ಉಮಾಶ್ರೀ** ಅವರು ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್‌ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರೀಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)** ಅವರು ಶಾಲೆಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಸದಿರುವಂತೆ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀಮತಿ ಹೇಮಲತಾ ನಾಯಕ್** ಅವರು ತುಂಗಾಭದ್ರ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರನ್ನು ತಡೆಗಟ್ಟಲು ನವಲಿ ಜಲಾಶಯವನ್ನು ನಿರ್ಮಾಣ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಮಂಜುನಾಥ್ ಭಂಡಾರಿ** ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆಯನ್ನು ನಿಯಂತ್ರಿಸಲು ಜಿಲ್ಲಾಡಳಿತ ವಿಫಲವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಬಿ.ಜಿ. ಪಾಟೀಲ್** ಅವರು ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಚಿದಾನಂದ್ ಎಂ. ಗೌಡ** ಅವರು ಬ್ರಾಂಡ್ ಬೆಂಗಳೂರು ಕಲ್ಪನೆಯಲ್ಲಿ ಮಂಡನೆಯಾದ 2024–25ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾದ ಕಾಮಗಾರಿಗಳು ಈವರೆಗೂ ಅನುಷ್ಠಾನಗೊಳ್ಳದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಅಂತರ್‌ರಾಷ್ಟ್ರೀಯ ಚಲನಚಿತ್ರೋತ್ಸವದ ಚಿತ್ರಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಗೂಗಲ್ ಟ್ರಾನ್ಸ್‌ಲೇಟರ್ ಬಳಕೆ ಮಾಡಿ ಹತ್ತಾರು ಎಡವಟ್ಟು ಮಾಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ನಾಳೆ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಎಂ. ನಾಗರಾಜು** ಅವರು ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಶ್ರೀ ಶಶೀಲ್ ಜಿ. ನಮೋಶಿ** ಅವರು ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಆರ್ಥಿಕ ಹೊರೆ, ಮೂಲಭೂತ ಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಮುಂತಾದ ಕಾರಣಗಳಿಂದ ರಾಜ್ಯದ 09 ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರ ಕೈಗೊಂಡಿರುವ ಬಗ್ಗೆ ದಿನಾಂಕ:04.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

2. **ಡಾ: ಧನಂಜಯ ಸರ್ಜಿ** ಅವರು ಸಾರ್ವಜನಿಕರಿಗೆ ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ನೀಡುವ ಬಗ್ಗೆ ದಿನಾಂಕ:04.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ

ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

3. **ಶ್ರೀ ಐವನ್ ಡಿ'ಸೋಜಾ** ಅವರು ಉಡುಪಿ ಜಿಲ್ಲೆಯ ಬ್ರಹ್ಮಾವರದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನೆಲಸಮ ಮಾಡಿ ರೈತವರ್ಗಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ ದಿನಾಂಕ:04.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

4. **ಶ್ರೀ ಸಿ.ಎನ್. ಮಂಜೇಗೌಡ** ಅವರು ರಾಜ್ಯ ಗ್ರಾಮ ಪಂಚಾಯಿತಿ ನೌಕರರಿಗೆ ಕಾಲಮಿತಿಯೊಳಗೆ ಕನಿಷ್ಠ ವೇತನ ಜಾರಿಗೊಳಿಸುವ ಬಗ್ಗೆ ದಿನಾಂಕ:05.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರ ಮಂಡಿಸಿದರು.

## 04. ನಿಲುವಳಿ ಸೂಚನೆ

1. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಡಾ: ತಳವಾರ್ ಸಾಬಣ್ಣ, ಶೀಮತಿ ಹೇಮಲತಾ ನಾಯಕ್ ಹಾಗೂ ಶ್ರೀ ವೈ.ಎಂ. ಸತೀಶ್** ಅವರುಗಳು ರಾಜ್ಯದಲ್ಲಿ 2024–25ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳ ಅತಿವೃಷ್ಠಿ, ಅನಾವೃಷ್ಠಿ ಮತ್ತು ನೆಟೆ ರೋಗದಿಂದ ತೊಗರಿ ಬೆಳೆ ನಾಶವಾಗಿದ್ದು, ರೈತರು ಸಂಕಷ್ಟಕ್ಕೀಡಾಗಿರುವುದರಿಂದ ತೊಗರಿ ಬೆಳೆಗಾರರಿಗೆ ಬೆಂಬಲ ಬೆಲೆ ನಿಗದಿಪಡಿಸಿ ಕೂಡಲೇ ಪರಿಹಾರ ಒದಗಿಸುವ ಕುರಿತು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರಿದರು.

ನಿಯಮ 330ರಡಿ ಅವಕಾಶ ನೀಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

## 5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

ಮಧ್ಯಾಹ್ನ 12.20 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿಯವರ ಪೀಠದಲ್ಲಿ ಆಸೀನರಾದರು.

10. ಶ್ರೀ ಡಿ.ಟಿ. ಶ್ರೀನಿವಾಸ್

11. ಶ್ರೀ ಶಶೀಲ್ ಜಿ. ನಮೋಶಿ

12. ಶ್ರೀ ಪಿ.ಹೆಚ್. ಪೂಜಾರ್

ಮಧ್ಯಾಹ್ನ 1.30 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.25 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ಗಮನ ಸೆಳೆಯುವ ಸೂಚನೆಗಳು

1. **ಡಾ: ಧನಂಜಯ ಸರ್ಜಿ** ಅವರು ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ನೀತಿ ಹಾಗೂ ತೆಗದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರ ಗಮನ ಸೆಳೆದರು.

   ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖಾ ಸಚಿವರು ಉತ್ತರಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬ ಧೋರಣೆ ಕುರಿತಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ ಎನ್ನುವ ವಿಷಯದ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುವುದು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಉತ್ತರಿಸಿದರು.

## 7. ನಿಯಮ 330ರ ಮೇರೆಗೆ

1. **ಶ್ರೀಯುತರುಗಳಾದ ತಿಪ್ಪಣ್ಣಪ್ಪ ಕಮಕನೂರ, ಡಾ: ತಳವಾರ್ ಸಾಬಣ್ಣ, ಬಸನಗೌಡ ಬಾದರ್ಲಿ, ಹೆಚ್.ಪಿ. ಸುಧಾಮ್ ದಾಸ್, ಎ. ವಸಂತ್ ಕುಮಾರ್ ಹಾಗೂ ಎಂ.ಎಲ್. ಅನಿಲ್ ಕುಮಾರ್** ಅವರುಗಳು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ತಿಪ್ಪಣ್ಣಪ್ಪ ಕಮಕನೂರ
2. ಡಾ: ತಳವಾರ್ ಸಾಬಣ್ಣ
3. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
4. ಶ್ರೀ ಪಿ.ಹೆಚ್. ಪೂಜಾರ್

5. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

6. ಶ್ರೀಮತಿ ಭಾರತಿ ಶೆಟ್ಟಿ

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಸ್ಪಷ್ಟೀಕರಣ ನೀಡಿದರು.

## ಗಮನ ಸೆಳೆಯುವ ಸೂಚನೆ

3. **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ವಿಭಾಗೀಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ಸುಮಾರು 8 ಜಿಲ್ಲೆಗಳಿಗೆ ಕೇಂದ್ರವನ್ನಾಗಿ ಮಾರ್ಪಡಿಸಬೇಕೆನ್ನುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

## ನಿಯಮ 330ರ ಮೇರೆಗೆ

2. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಎನ್.ಹೆಚ್.ಎಮ್. ಯೋಜನೆಯಡಿ ಕಳೆದ 19 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಲ್ಯಾಬ್ ಟೆಕ್ನಿಷಿಯನ್, ಸ್ಟಾಫ್ ನರ್ಸ್ ಹಾಗೂ ಆಯುಷ್ ವೈದ್ಯರುಗಳನ್ನು ಖಾಯಂಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸ್ಪಷ್ಟೀಕರಣ ಕೋರಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸ್ಪಷ್ಟೀಕರಣ ನೀಡಿದರು.

3. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಸಿ.ಟಿ. ರವಿ, ಶ್ರೀ ಶಶೀಲ್ ಜಿ. ನಮೋಶಿ ಹಾಗೂ** ಇತರರು ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
2. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
3. ಶ್ರೀ ಎಸ್.ವ್ಹಿ. ಸಂಕನೂರ
4. ಶ್ರೀ ಸಿ.ಟಿ. ರವಿ
5. ಶ್ರೀಮತಿ ಹೇಮಲತಾ ನಾಯಕ್

ಸಂಜೆ 5.55 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

6. ಶ್ರೀ ಡಿ.ಎಸ್. ಅರುಣ್
7. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
8. ಶರವಣ ಟಿ.ಎ.

9. ಶಶೀಲ್ ಜಿ. ನಮೋಶಿ

10. ಕೇಶವ ಪ್ರಸಾದ್ ಎಸ್

11. ಪಿ.ಹೆಚ್. ಪೂಜಾರ್

12. ಡಾ: ಧನಂಜಯ ಸರ್ಜಿ

**ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ**

13. ಶ್ರೀ ಗೋವಿಂದ ರಾಜು

14. ಶ್ರೀ ಎಂ. ನಾಗರಾಜು

## 08. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು **ದಿನಾಂಕ:06.03.2025**ರಂದು **"2025ನೇ ಸಾಲಿನ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ"**ವನ್ನು ತಿದ್ದುಪಡಿಗಳೊದಿಗೆ ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## ನಿಯಮ 330ರ ಮೇರೆಗೆ

ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು ಪ್ರಸ್ತಾಪಿಸಲಾಗಿದ್ದ ಸೂಚನೆಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಸೋಮವಾರ ನೀಡುವುದಾಗಿ ತಿಳಿಸಿದರು.

ಸಂಜೆ 7.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:07.03.2025ರಂದು ಬೆಳಿಗ್ಗೆ 10.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀಮತಿ ಭಾರತಿ ಶೆಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಶುಕ್ರವಾರ, ದಿನಾಂಕ:07.03.2025**

**(05)**

ಸದನವು ಬೆಳಗ್ಗೆ: 10.18 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**ಆಯವ್ಯಯ ಮಂಡನೆ**

2025–2026ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

ಸದನವನ್ನು ಬೆಳಿಗ್ಗೆ 10.23 ಗಂಟೆಗೆ ಮುಂದೂಡಿ ದಿನಾಂಕ:10.03.2025ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## **ಲಘು ಪ್ರಕಟಣೆ ಭಾಗ–1**

## ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

## **ಸೋಮವಾರ, ದಿನಾಂಕ:10.03.2025**

**(06)**

ಸದನವು ಬೆಳಗ್ಗೆ: 11.05 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### 1. ಸಂತಾಪ ಸೂಚನೆ

**ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಪ್ರೊ: ಎಂ.ಆರ್. ದೊರೆಸ್ವಾಮಿ** ಅವರು ದಿನಾಂಕ: 06.03.2025ರಂದು ನಿಧನ ಹೊಂದಿದ್ದು, ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದರು.

ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

### 2. ಪ್ರಶ್ನೋತ್ತರ

ದಿನಾಂಕ:10.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 4ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 46(421)
2. 47(328)
3. 48(372)
4. 49(447)

ಬೆಳಗ್ಗೆ 11.40 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

5. 50(351+335)
6. 51(373)
7. 52(350)
8. 53(362) ಕಾಲಾವಕಾಶ
9. 54(396)
10. 55(411)
11. 56(380)
12. 57(486)
13. 58(401)
14. 59(458)
15. 60(464+473+419+476+453) ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕಲ್ಪಿಸಲಾಯಿತು.

ದಿನಾಂಕ:10.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ-Iರ 4ನೇ ಪಟ್ಟಿಯ ಒಟ್ಟು **137** ಪ್ರಶ್ನೆಗಳ ಪೈಕಿ **56** ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 3. ಶೂನ್ಯವೇಳೆ

1. **ಶ್ರೀಮತಿ ಬಲ್ಕೀಸ್ ಬಾನು** ಅವರು ಔಷಧಗಳು ಬೇರೆ ಕಡೆ ಕಡಿಮೆ ಬೆಲೆಯಲ್ಲಿ ಲಭ್ಯವಿದ್ದರೂ ಸಹ ಅಂತಹ ಔಷಧಗಳನ್ನು ತಮ್ಮ ಔಷಧಾಲಯಗಳಿಂದಲೇ ಖರೀದಿಸಲು ಒತ್ತಾಯಿಸುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಸುಪ್ರೀಂ ಕೋರ್ಟ್ ಹೇಳಿದಂತೆ ಮಾರ್ಗಸೂಚಿ ರಚಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಉತ್ತರ ಒದಗಿಸಲಾಗಿದೆ ಎಂದು ತಿಳಿಸಿದರು.

2. **ಡಾ: ತಳವಾರ್ ಸಾಬಣ್ಣ** ಅವರು ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮೆ: ಅಲ್ಟ್ರಾಟೇಕ್ ಸಿಮೆಂಟ್ ಲಿಮಿಟೆಡ್, ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ರೈತರಿಂದ ಕೃಷಿ ಜಮೀನುಗಳನ್ನು ಖರೀದಿಸಿ ಯೋಗ್ಯ ಬೆಲೆ ನೀಡದಿರುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಬಾಗಲಕೋಟೆ ಜಿಲ್ಲೆಗೆ 4 ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಸರ್ಕಾರದಿಂದ ತಾಲ್ಲೂಕುಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ವೈ.ಎಂ. ಸತೀಶ್** ಅವರು ಮೆಣಸಿನಕಾಯಿಗೆ ಬೆಂಬಲ ನಿಗದಿಪಡಿಸುವ ಬೆಲೆ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಸಿ.ಎನ್. ಮಂಜೇಗೌಡ** ಅವರು ಚಾಮರಾಜನಗರ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಅಳಗಂಚಿ ಗ್ರಾಮದಲ್ಲಿನ ಕೆರೆಯನ್ನು ಮುಚ್ಚಿ ಆಟದ ಮೈದಾನ ನಿರ್ಮಾಣ ಮಾಡುತ್ತಿರುವುದನ್ನು ನಿಲ್ಲಿಸಿ ಕೆರೆ ಸಂರಕ್ಷಿಸಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು.

6. **ಶ್ರೀಮತಿ ಹೇಮಲತಾ ನಾಯಕ್** ಅವರು ತುಂಗಭದ್ರ ನದಿ ತೀರದಲ್ಲಿ ಪರವಾನಗಿ ಪಡೆಯದೇ ಹಲವಾರು ರೆಸಾರ್ಟ್‌ಗಳು ಮತ್ತು ಹೋಂ ಸ್ಟೇಗಳು ಅನಧಿಕೃತವಾಗಿ ತಲೆಎತ್ತಿರುವ ಕುರಿತು ಪ್ರಸ್ತಾಪಿಸಿದರು.

330ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಾಗಿ ಮಾನ್ಯ ಉಪ ಸಭಾಪತಿಯವರು ಪ್ರಕಟಿಸಿದರು.

7. **ಶ್ರೀ ಟಿ.ಎನ್. ಜವರಾಯಿಗೌಡ** ಅವರು ಕಬ್ಬನ್ ಪಾರ್ಕ್‌ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ರದ್ದುಪಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ ಬಿಡುತ್ತಿರುವ 1.27 ಟಿ.ಎಂ.ಸಿ ನೀರನ್ನು ಕೂಡಲೇ ನಿಲ್ಲಿಸಿ, ರೈತರಿಗೆ ಅನುಕೂಲ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಮಂಗಳೂರು ಕಾಲೇಜಿನ ವಿದ್ಯಾರ್ಥಿ ಕಾಣೆಯಾಗಿ 10 ದಿನ ಕಳೆದರೂ ಯಾವುದೇ ಸುಳಿವು ಸಿಗದೇ ಕರಾವಳಿಯಾದ್ಯಾಂತ ಜನರಲ್ಲಿ ಆತಂಕ ಮೂಡಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಕೆ.ಎಸ್. ನವೀನ್** ಅವರು ಬೆಂಗಳೂರು ವೈದ್ಯಕೀಯ ಆಸ್ಪತ್ರೆಯ ಮುಂಭಾಗದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಪ್ರದೀಪ್ ಶೆಟ್ಟರ್** ಅವರು ಹಳೆ ಹುಬ್ಬಳ್ಳಿಯ ಅಂಗನವಾಡಿಯಲ್ಲಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ವಿತರಿಸಬೇಕಾಗಿದ್ದ ಪೌಷ್ಠಿಕ ಆಹಾರವನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 4. ಶೂನ್ಯವೇಳೆಯ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಡಿ.ಎಸ್. ಅರುಣ್** ಅವರು ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮಗಳ ಸೂಕ್ತ ಅನುಷ್ಠಾನದ ಬಗ್ಗೆ ದಿನಾಂಕ:05.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಪಿ.ಹೆಚ್. ಪೂಜಾರ್** ಅವರು ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಸಂಪೂರ್ಣ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ದಿನಾಂಕ: 05.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಎನ್. ರವಿಕುಮಾರ್** ಅವರು ರಾಜ್ಯದ ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಬಗ್ಗೆ ದಿನಾಂಕ: 06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ರಹ್ಮರು ಗ್ರಾಮದ ಮಾಸ್ತಿಬೇಣ, ಸೊಪ್ಪರತಿ ಮೂಲಕ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ರಸ್ತೆಯನ್ನು ನಿರ್ಮಿಸುವ ಬಗ್ಗೆ ದಿನಾಂಕ: 06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ಸಿ.ಟಿ. ರವಿ** ಅವರು ಚಿಕ್ಕಮಗಳೂರು ತಾಲ್ಲೂಕು ಕಛೇರಿ ಮುಂಭಾಗದಲ್ಲಿರುವ ನಲ್ಲೂರು ಮಠದ ಜಾಗದಲ್ಲಿದ್ದ ಅಂಗಡಿಗಳನ್ನು ನೆಲಸಮ ಮಾಡಿದವರ ವಿರುದ್ಧ ಕ್ರಮಕೈಗೊಂಡು ವರ್ತಕರಿಗೆ ರಕ್ಷಣೆ ನೀಡುವ ಬಗ್ಗೆ ದಿನಾಂಕ:05.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ ಇಲ್ಲಿನ ನಿವೃತ್ತ ನೌಕರರಿಗೆ ಪಿಂಚಣಿ ನೀಡದಿರುವ ಬಗ್ಗೆ ದಿನಾಂಕ: 06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀಮತಿ ಭಾರತಿ ಶೆಟ್ಟಿ ಮತ್ತು ಪ್ರತಾಪ್ ಸಿಂಹ ನಾಯಕ್ ಕೆ.** ಅವರುಗಳು ಅಕ್ಷರ ದಾಸೋಹ ನೌಕರರಿಗೆ ಗೌರವಧನ

ಹೆಚ್ಚಿಸುವುದರೊಂದಿಗೆ ವಿವಿಧ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ದಿನಾಂಕ: 06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

8. **ಡಾ: ಉಮಾಶ್ರೀ** ಅವರು ಬೆಳಗಾವಿ ಜಿಲ್ಲೆಯ ಹಿಂಡಲಗಾ ಜೈಲಿನ ಖೈದಿಗಳು ಜೈಲಲ್ಲಿ ಮೊಬೈಲ್ ಫೋನ್ ಬಳಸದಂತೆ ತಡೆಯಲು ಅಳವಡಿಸಲಾದ 5ಜಿ ನೆಟ್‌ವರ್ಕ್ ಜಾಮರ್‌ನಿಂದಾಗಿ ಸುತ್ತಮುತ್ತಲಿನ ನಾಗರೀಕರಿಗೆ/ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ದಿನಾಂಕ: 06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

9. **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರು ಕೊಡಗು ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸದೆ, ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸೂಕ್ತ ಅನುದಾನ ಒದಗಿಸುವ ಬಗ್ಗೆ ದಿನಾಂಕ:06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

10. **ಶ್ರೀ ಬಿ.ಜಿ. ಪಾಟೀಲ್** ಅವರು ಯಾದಗಿರಿ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಶಾಶ್ವತ ಪರಿಹಾರ ಒದಗಿಸುವ ಬಗ್ಗೆ ದಿನಾಂಕ:06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

11. **ಶ್ರೀ ಎಂ. ನಾಗರಾಜು** ಅವರು ಹೊಸಕೋಟೆ ಹೆದ್ದಾರಿ ಬದಿಯಲ್ಲಿ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಸೇರಿದ ಜಾಗದಲ್ಲಿ ಸುರಿದಿರುವ ಕಸದ ರಾಶಿಯಿಂದ ಸುತ್ತಮುತ್ತಲಿನ ಜನರಿಗೆ ಅನಾರೋಗ್ಯ ಉಂಟಾಗುತ್ತಿರುವ ಬಗ್ಗೆ ದಿನಾಂಕ:06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

12. **ಶ್ರೀ ಶಶೀಲ್ ಜಿ. ನಮೋಶಿ** ಅವರು ರಾಜ್ಯ/ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಉಂಟಾದ ಶಿಕ್ಷಕರ ಕೊರತೆಯಿಂದ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವ ಬಗ್ಗೆ ದಿನಾಂಕ:06.03.2025ರಂದು ಪ್ರಸ್ತಾಪಿಸಿದ್ದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 5. ಅಭಿನಂದನಾ ಪ್ರಸ್ತಾವ

ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್ ಅವರು ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡವು 12 ವರ್ಷಗಳ ತರುವಾಯ ವಿಜೇತರಾದ ಭಾರತೀಯ ಕ್ರಿಕೆಟ್ ತಂಡಕ್ಕೆ ಗೌರವ ಸಮರ್ಪಿಸಲು ಅಭಿನಂದನಾ ಪ್ರಸ್ತಾವವನ್ನು ಮಂಡಿಸಿದರು.

ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

## 6. ನಿಲುವಳಿ ಸೂಚನೆ

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್, ಶ್ರೀ ಕೇಶವ ಪ್ರಸಾದ್ ಎಸ್ ಹಾಗೂ ಇತರರು** ಮೈಸೂರಿನ ಉದಯಗಿರಿಯಲ್ಲಿ ಏಕಾಏಕಿ ಒಂದೇ ಕೋಮಿನವರು ಪ್ರತಿಭಟನೆ ನಡೆಸಿ, ಪೊಲೀಸ್ ಠಾಣೆ, ವಾಹನ ಹಾಗೂ ಪೊಲೀಸ್‌ನವರ ಮೇಲೆ ದಾಳಿ ನಡೆಸಿರುವುದು ಹಾಗೂ ರಾಜ್ಯದಲ್ಲಿ ಹೆಚ್ಚುತ್ತಿರುವ ಕೊಲೆ, ಅತ್ಯಾಚಾರ, ಗಲಭೆಗಳಿಂದ ಜನಸಾಮಾನ್ಯರಲ್ಲಿ ಅಭದ್ರತೆಯ ವಾತಾವರಣ ನಿರ್ಮಾಣವಾಗಿರುವ ಬಗ್ಗೆ ನಿಯಮ 59ರಡಿ ಪ್ರಸ್ತಾಪಿಸಲು ಅನುಮತಿ ಕೋರಿದರು.

ನಿಲುವಳಿ ಸೂಚನೆಯನ್ನು ನಿಯಮ 68ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಮಧ್ಯಾಹ್ನ 1.55 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.32 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 7. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ.

ಈ ಕೆಳಕಂಡ ಮಾನ್ಯ ಶಾಸಕರುಗಳ ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀಮತಿ ಭಾರತಿ ಶೆಟ್ಟಿ
2. ಡಾ: ಡಿ. ತಿಮ್ಮಯ್ಯ

## 8. ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಶ್ರೀಯುತರುಗಳಾದ:

1. ಎಸ್.ಎಲ್. ಭೋಜೇಗೌಡ
2. ಶರವಣ ಟಿ.ಎ.
3. ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
4. ಐವನ್ ಡಿ'ಸೋಜಾ
5. ಸಿ.ಟಿ. ರವಿ
6. ಪ್ರತಾಪ್ ಸಿಂಹ ನಾಯಕ್ ಕೆ.
7. ಎಂ. ನಾಗರಾಜು
8. ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

9. ಕೆ.ಎಸ್. ನವೀನ್
10. ಹೆಚ್.ಎಸ್. ಗೋಪಿನಾಥ್
11. ಗೋವಿಂದ ರಾಜು
12. ಬಿ.ಕೆ. ಹರಿಪ್ರಸಾದ್
13. ಪ್ರಿಯಾಂಕ ಖರ್ಗೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
14. ನಿರಾಣಿ ಹಣಮಂತ್ ರುದ್ರಪ್ಪ
15. ಅಡಗೂರ್ ಹೆಚ್. ವಿಶ್ವನಾಥ್
16. ಡಾ: ಯತೀಂದ್ರ ಎಸ್
17. ಎ. ವಸಂತ ಕುಮಾರ್
18. ಕೇಶವ ಪ್ರಸಾದ್ ಎಸ್

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಉತ್ತರಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಶಾಸಕರುಗಳು ಸಭಾತ್ಯಾಗ ಮಾಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಸಂಜೆ 6.30 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:11.03.2025ರಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:11.03.2025**

**(07)**

ಸದನವು ಬೆಳಗ್ಗೆ: 11.00 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**1. ಸಂತಾಪ ಸೂಚನೆಗಳು**

**ಮಾಜಿ ಸಚಿವರಾಗಿದ್ದ ಬಿ. ಸುಬ್ಬಯ್ಯ ಶೆಟ್ಟಿ ಅವರು ದಿನಾಂಕ:10.03.2025ರಂದು ಹಾಗೂ ಭಾರತೀಯ ಶಿಕ್ಷಣ ತಜ್ಞೆ, ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರಾದ ವಿಮಲಾ ರಂಗಾಚಾರ್** ಅವರು **ದಿನಾಂಕ: 25.02.2025ರಂದು** ನಿಧನ ಹೊಂದಿದ್ದು, ಮಾನ್ಯ ಸಭಾಪತಿಯವರು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದರು.

ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಭಾಪತಿಯವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ಮಾತನಾಡಿದರು.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು. ಮೃತರ ಕುಟುಂಬದವರಿಗೆ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿಕೊಡಲಾಗುವುದೆಂದು ಮಾನ್ಯ ಸಭಾಪತಿಯವರು ತಿಳಿಸಿದರು.

## 2. ಪ್ರಶ್ನೋತ್ತರ

ದಿನಾಂಕ:11.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 5ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 61(548)
2. 62(595)
3. 63(569)
4. 64(592)
5. 65(606)
6. 66(594+495) ಅರ್ಧಗಂಟೆ ಕಾಲಾವಧಿ ಚರ್ಚೆ
7. 67(509)
8. 68(585)
9. 69(505)
10. 70(552)
11. 71(564)
12. 72(534)
13. 73(514)
14. 74(603+604) ಗೈರು ಹಾಜರಿ
15. 75(578)

ಮಧ್ಯಾಹ್ನ 12.45 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

### ದಿನಾಂಕ:04.03.2025ರ ಸಮೂಹ–IIರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು

1. 3(52+93)
2. 6(02)

**ದಿನಾಂಕ:06.03.2025ರ ಸಮೂಹ–IVರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 32(239)

ದಿನಾಂಕ:11.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 5ನೇ ಪಟ್ಟಿಯ ಒಟ್ಟು 105 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರ ಪರವಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಮಂಡಿಸಿದರು.

## 3. ಶೂನ್ಯವೇಳೆ

1. **ಶ್ರೀ ರಾಮೋಜಿಗೌಡ** ಅವರು ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ದಂಧೆ ನಡೆಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

2. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ರಾಜ್ಯದಲ್ಲಿ ವ್ಯಾಪಿಸುತ್ತಿರುವ ಬೊಜ್ಜಿನ ಸಮಸ್ಯೆ ಕುರಿತಂತೆ ವಿವಿಧ ವಿಭಾಗದ ನುರಿತ ತಜ್ಞರು, ವೈದ್ಯರು, ಸಂಶೋಧಕರು ಹಾಗೂ ಮುಂತಾದವರ ಒಳಗೊಂಡಂತೆ ಸಮಿತಿ ರಚಿಸಿ ವರದಿ ಪಡೆದು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ಕುಂದಾಪುರದಲ್ಲಿರುವ ಪಂಚಗಂಗಾವಳಿ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಉತ್ತರಿಸಿದರು.

4. **ಶ್ರೀ ಎಂ. ನಾಗರಾಜು** ಅವರು ವಯೋವೃದ್ಧ ತಂದೆ-ತಾಯಿಯರನ್ನು ಹೆತ್ತ ಮಕ್ಕಳೇ ಮನೆಯಿಂದ ಆಚೆ ಹಾಕುತ್ತಿದ್ದು, ಬೆಳಗಾವಿ ವೈದ್ಯಕೀಯ ಸಂಸ್ಥೆಯೇ ಆಶ್ರಯ ತಾಣವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

5. **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೆ ನಂ.1, 6.31 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಉತ್ತರಿಸಿದರು.

6. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯದಲ್ಲಿ ಯುವಕರು ಮಾದಕ ವ್ಯಸನಿಗಳಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

7. **ಶ್ರೀಮತಿ ಭಾರತಿ ಶೆಟ್ಟಿ** ಅವರು ರಾಜ್ಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಲ್ಲಿಯೂ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಇಂಧನ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

8. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಕಿತ್ತೂರು ಚೆನ್ನಮ್ಮ ಹೆಸರಿನಲ್ಲಿ ಸರ್ಕಾರ ಪ್ರತ್ಯೇಕ ಪ್ರಾಧಿಕಾರ ಸ್ಥಾಪಿಸಿದ್ದು, ಅನುದಾನ ಹಂಚಿಕೆ, ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

9. **ಶ್ರೀ ಐವನ್ ಡಿ'ಸೋಜಾ** ಅವರು ಸಿ.ಇ.ಟಿ.ಯನ್ನು (ಸಾಮಾನ್ಯ ಪ್ರವೇಶ ಪರೀಕ್ಷೆ) ಕ್ರೈಸ್ತ ಸಮುದಾಯದ ಗುಡ್ ಫ್ರೈಡೆ ದಿವಸದಂದು ನಡೆಸಲು ಉದ್ದೇಶಿಸಿರುವುದನ್ನು ಮುಂದೂಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

10. **ಶ್ರೀ ಸಿ.ಎನ್. ಮಂಜೇಗೌಡ** ಅವರು ಚಾಮರಾಜನಗರ ಜಿಲ್ಲೆಯ ಗುಂಡ್ಲು ಪೇಟೆಯಲ್ಲಿ ಅನುದಾನ ಕೊರತೆಯಿಂದ ಇಂದಿರಾ ಕ್ಯಾಂಟೀನನ್ನು ಮುಚ್ಚಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉತ್ತರ ಒದಗಿಸುವುದಾಗಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ತಿಳಿಸಿದರು.

11. **ಶ್ರೀ ಪಿ.ಹೆಚ್. ಪೂಜಾರ್** ಅವರು ಮುಧೋಳ ಜಿಲ್ಲೆ ಗ್ರಂಥಾಲಯಗಳಲ್ಲಿ ರತ್ನತ್ರಯರಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳು ಸಂಗ್ರಹ, ಭಾಷಾಂತರದಂತಹ ಕಾರ್ಯಗಳನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

## 4. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು **"ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025" ಹಾಗೂ "ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ವಿಧೇಯಕ, 2025**ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಹಾಗೂ ಈ ಕೆಳಕಂಡ ವಿಧೇಯಕಗಳನ್ನು **ತಿದ್ದುಪಡಿಗಳೊಂದಿಗೆ** ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, 2024 (ವಿಧೇಯಕ ಸಂ.34)
2. ಕರ್ನಾಟಕ ಗಿರಿವಿದಾರರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.2)
3. ಕರ್ನಾಟಕ ಲೇವದೇವಿದಾರರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.4)
4. ಕರ್ನಾಟಕ ಕಿರು (Micro) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ, 2025 (ವಿಧೇಯಕ ಸಂ.6)

## 5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಎಂ. ನಾಗರಾಜು

15. ಶ್ರೀ ಎಸ್.ವ್ಹಿ. ಸಂಕನೂರ

16. ಶ್ರೀ ಕೆ.ಎಸ್. ನವೀನ್

ಮಧ್ಯಾಹ್ನ 2.00 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.15 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.40 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**6. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ.**

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

3. ಡಾ: ಧನಂಜಯ ಸರ್ಜಿ
4. ಡಾ: ಯತೀಂದ್ರ ಎಸ್
5. ಶ್ರೀಮತಿ ಹೇಮಲತಾ ನಾಯಕ್

ಮಧ್ಯಾಹ್ನ 4.23 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

6. ಡಾ: ಉಮಾಶ್ರೀ
7. ಶ್ರೀ ಎಸ್.ವ್ಹಿ. ಸಂಕನೂರ
8. ಶ್ರೀಮತಿ ಬಲ್ಕೀಸ್ ಬಾನು

ಸಂಜೆ 5.16 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

9. ಶ್ರೀ ಕಿಶೋರ್ ಕುಮಾರ್ ಪುತ್ತೂರ್
10. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
11. ಶ್ರೀ ಎಂ. ನಾಗರಾಜು
12. ಶ್ರೀ ಕೆ.ಎಸ್. ನವೀನ್
13. ಶ್ರೀ ಪುಟ್ಟಣ್ಣ

## 7. ಗಮನ ಸೆಳೆಯುವ ಸೂಚನೆಗಳು

1. **ಶ್ರೀಯುತರುಗಳಾದ ಕುಶಾಲಪ್ಪ ಎಂ.ಪಿ.(ಸುಜಾ), ಎಸ್.ಎಲ್. ಭೋಜೇಗೌಡ, ಶಶೀಲ್ ಜಿ. ನಮೋಶಿ, ಎಸ್.ವ್ಹಿ. ಸಂಕನೂರ, ಡಿ.ಎಸ್. ಅರುಣ್ ಮತ್ತು ಡಾ: ಧನಂಜಯ ಸರ್ಜಿ** ಅವರುಗಳು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕೊಡಗು ವಿಶ್ವವಿದ್ಯಾಲಯ ಸೇರಿದಂತೆ ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾಗಿದ್ದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಿರುವುದನ್ನು ಕೈಬಿಡಬೇಕೆಂದು ಹಾಗೂ ವಿದ್ಯಾರ್ಥಿಗಳ ಮತ್ತು ನಿರುದ್ಯೋಗಿಗಳ ಹಿತದೃಷ್ಟಿಯಿಂದ ಸದರಿ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಒದಗಿಸುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರು ಗಮನ ಸೆಳೆದರು.

ಸಂಜೆ 6.55 ಗಂಟೆಯಲ್ಲಿ **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ರಾತ್ರಿ 7.15 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀಮತಿ ಹೇಮಲತಾ ನಾಯಕ್
2. ಡಾ: ತಳವಾರ್ ಸಾಬಣ್ಣ
3. ಶ್ರೀ ಐವನ್ ಡಿ'ಸೋಜಾ
4. ಶ್ರೀ ಪಿ.ಹೆಚ್. ಪೂಜಾರ್
5. ಶ್ರೀ ಪುಟ್ಟಣ್ಣ
6. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
7. ಶ್ರೀ ಎಸ್.ಎಲ್. ಭೋಜೇಗೌಡ
8. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
2. ಡಾ: ಧನಂಜಯ ಸರ್ಜಿ

ಮಾನ್ಯ ಉನ್ನತ ಶಿಕ್ಷಣ ಸಚಿವರು ಸ್ಪಷ್ಟೀಕರಣ ನೀಡಿದರು.

**2.** **ಶ್ರೀ ಹೆಚ್.ಎಸ್. ಗೋಪಿನಾಥ್** ಅವರು ಆನೇಕಲ್ ತಾಲ್ಲೂಕಿನಲ್ಲಿ ಹಾಗೂ ಸರ್ಜಾಪುರ ಹೋಬಳಿಯಲ್ಲಿ ಹೊಸ ಕೈಗಾರಿಕೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಪ್ರದೇಶವನ್ನು ಹಿಂಪಡೆಯುವ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಗಮನ ಸೆಳೆದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ** ಅವರು ಚರ್ಚೆಯಲ್ಲಿ ಭಾಗವಹಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

## 8. ಪ್ರಕಟಣೆ

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:12.03.2025ರಂದು ನಿಯಮ 330ರ ಅಡಿಯಲ್ಲಿ ಕೆ.ಪಿ.ಎಸ್.ಸಿ.ಗೆ ಸಂಬಂಧಿಸಿದಂತೆ ನಡೆದ ಚರ್ಚೆಗೆ ಉತ್ತರ ನೀಡುವುದಾಗಿ ಹಾಗೂ ದಿನಾಂಕ:13.03.2025ರಂದು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುವುದಾಗಿ ಹಾಗೂ ದಿನಾಂಕ:21.03.2025ರಂದು ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ನೀಡುವುದಾಗಿ ದೂರವಾಣಿ ಮುಖೇನ ತಿಳಿಸಿರುತ್ತಾರೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

ರಾತ್ರಿ 9.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:12.03.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಬುಧವಾರ, ದಿನಾಂಕ:12.03.2025**

**(08)**

ಸದನವು ಬೆಳಗ್ಗೆ: 10.35 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:12.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 6ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 76(617) | |
| 2. | 77(635) | ಗೈರು ಹಾಜರಿ |
| 3. | 78(643) | |
| 4. | 79(705) | |
| 5. | 80(669) | |
| 6. | 81(656) | ಕಾಲಾವಕಾಶ |
| 7. | 82(631) | |
| 8. | 83(608) | |
| 9. | 84(708) | |
| 10. | 85(710) | |

11. 86(658) ಶ್ರೀ ಕುಶಾಲಪ್ಪ ಎಂ.ಪಿ(ಸುಜಾ) ಅವರ ಪರವಾಗಿ ಶ್ರೀ ಡಿ.ಎಸ್. ಅರುಣ್

12. 87(715)

13. 88(734)

14. 89(623) ಗೈರು ಹಾಜರಿ

15. 90(673) ಕಾಲಾವಕಾಶ

**ದಿನಾಂಕ:05.03.2025ರ ಸಮೂಹ–IIIರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 29(142)

**ದಿನಾಂಕ:06.03.2025ರ ಸಮೂಹ–IVರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

2. 44(251)

ದಿನಾಂಕ:12.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 6ನೇ ಪಟ್ಟಿಯ ಒಟ್ಟು 117 ಪ್ರಶ್ನೆಗಳ ಪೈಕಿ 47ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ ಪ್ರಸ್ತಾವಗಳು

1. **ಶ್ರೀ ಸಿ.ಟಿ. ರವಿ** ಅವರು ಹೊಸ ವಿಶ್ವವಿದ್ಯಾಲಯಗಳಿಗೆ ಸಿಬ್ಬಂದಿಗಳ ನೇಮಕಾತಿ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅನುದಾನ ಬಿಡುಗಡೆ ಮಾಡುವ ಮೂಲಕ ವಿಶ್ವವಿದ್ಯಾಲಯಗಳನ್ನು ಮುಚ್ಚುವ ನಿರ್ಧಾರವನ್ನು ಹಿಂಪಡೆಯುವ ಕುರಿತು ಪ್ರಸ್ತಾಪಿಸಿದರು.

   ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ರಾಮೋಜಿಗೌಡ** ಅವರು ಬಿ.ಬಿ.ಎಂ.ಪಿ. ಕೈಗೊಂಡಿರುವ ವೈಟ್ ಟ್ಯಾಪಿಂಗ್ ಕಾಮಗಾರಿಗಳಿಂದ ಧರ್ಮರಾಯ ದೇವಸ್ಥಾನದ ಕರಗ ಮಹೋತ್ಸವಕ್ಕೆ ಅಡಚಣೆ ಉಂಟಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಡಾ: ತಳವಾರ್ ಸಾಬಣ್ಣ** ಅವರು ಗಡಿಭಾಗದ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯ, ಖಾಯಂ ಶಿಕ್ಷಕರ ನೇಮಕಾತಿ ಇಲ್ಲದೆ ಶಾಲೆಗಳ ಅವ್ಯವಸ್ಥೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಟಿ.ಎನ್. ಜವರಾಯಿಗೌಡ** ಅವರು ರಾಜ್ಯದಲ್ಲಿ ದಿನನಿತ್ಯ ಬಳಕೆ ವಸ್ತುಗಳು, ಇನ್ನಿತರೆ ಶುಲ್ಕ ಹಾಗೂ ದರಗಳನ್ನು ಏರಿಸುತ್ತಿರುವುದರ ಜೊತೆಗೆ ಇತ್ತೀಚೆಗೆ ಹಾಲಿನ ದರಗಳನ್ನು ಏರಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಹಕಾರ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ಎತ್ತಿನಹೊಳೆ ಯೋಜನೆಯಿಂದಾಗಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳು ಬರ ಪೀಡಿತ ಪ್ರದೇಶವಾಗುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಸತಿ ಯೋಜನೆಗಳಿಗೆ ಬಿಡುಗಡೆಯಾಗಬೇಕಾದ ಕಂತಿನ ಹಣವು ಬಿಡುಗಡೆಯಾಗದೆ ಬಡ ಜನರು ಅನುಭವಿಸುತ್ತಿರುವ ತೊಂದರೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ಪಬ್ಲಿಕ್ ಶಾಲೆಯಲ್ಲಿ ಕೊಠಡಿ ಚಾವಣಿಯು ಕುಸಿದು ಬಿದ್ದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀಮತಿ ಬಲ್ಕೀಸ್ ಬಾನು** ಅವರು ವಯೋವೃದ್ಧ ಪಾಲಕರನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಬಿಟ್ಟು ಹೋಗುತ್ತಿರುವುದು ಹಾಗೂ ಹಿರಿಯರು ಬದುಕಿರುವಾಗಲೇ ಅವರ ಆಸ್ತಿ ಬರೆಸಿಕೊಂಡು ಹೊರಹಾಕುತ್ತಿದ್ದು, ಹೀಗೆ ಬರೆಸಿಕೊಂಡಿರುವ ಆಸ್ತಿಯನ್ನು ಆಸಿಂಧು ಎಂದು ಘೋಷಿಸಲು ನಿಯಮ ರೂಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರು ಉತ್ತರಿಸಿದರು.

9. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯದಲ್ಲಿ ಬ್ಯಾಟರಿ ಚಾಲಿತ ಆಟೋ ರಿಕ್ಷಾಗಳ ಅನಿಯಂತ್ರಿತ ಸಂಚಾರವನ್ನು ತಡೆಗಟ್ಟಲು ಪರವಾನಗಿಯನ್ನು ಕಡ್ಡಾಯಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ಉತ್ತರಿಸಿದರು.

10. **ಶ್ರೀ ಶಶೀಲ್ ಜಿ. ನಮೋಶಿ** ಅವರು ಸಿ.ಇ.ಟಿ ಪರೀಕ್ಷೆಗೆ ಆಹ್ವಾನಿಸಿರುವ ಅರ್ಜಿಯಲ್ಲಿ ನಾನ್ ಕ್ರಿಮಿ ಲೇಯರ್ ಸರ್ಟಿಫಿಕೇಟ್ (ಎನ್‌ಸಿಎಲ್‌ಸಿ) ಕೇಳುವುದರ ಮೂಲಕ ಗ್ರಾಮೀಣ ಭಾಗದಲ್ಲಿ ವಿದ್ಯಾಭ್ಯಾಸ ಮಾಡಿರುವ ವಿದ್ಯಾರ್ಥಿಗಳು ಕೃಪಾಂಕ ಪಡೆಯುವುದರಲ್ಲಿ ವಂಚನೆ ಆಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು.

11. **ಶ್ರೀ ಪಿ.ಹೆಚ್. ಪೂಜಾರ್** ಅವರು ಆಲಮಟ್ಟಿ ಡ್ಯಾಂ ಎತ್ತರ ಹೆಚ್ಚಳ ಕುರಿತು ಮಹಾರಾಷ್ಟ್ರದಿಂದ ವಿರೋಧ ವ್ಯಕ್ತವಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಶರವಣ ಟಿ.ಎ.** ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾದ ನೀರಿನ ಬಳಕೆಗೆ ನ್ಯಾಯಾಲಯದ ತೀರ್ಪಿನ ಅಂತಿಮ ಅಧಿಸೂಚನೆ ನೆಪದಲ್ಲಿ ಕಾಲಹರಣ ಮಾಡುತ್ತಿರುವ ಕುರಿತು ದಿನಾಂಕ:05.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀಮತಿ ಹೇಮಲತಾ ನಾಯಕ್** ಅವರು ತುಂಗಾಭದ್ರ ಜಲಾಶಯದಿಂದ ವ್ಯರ್ಥವಾಗಿ ಹರಿಯುವ ನೀರನ್ನು ತಡೆಗಟ್ಟಲು ನವಲಿ ಜಲಾಶಯವನ್ನು ನಿರ್ಮಾಣ ಮಾಡುವ ಕುರಿತು ದಿನಾಂಕ:06.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಮಂಜುನಾಥ್ ಭಂಡಾರಿ** ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆಯನ್ನು ನಿಯಂತ್ರಿಸಲು ಜಿಲ್ಲಾಡಳಿತ ವಿಫಲವಾಗಿರುವ ಕುರಿತು ದಿನಾಂಕ:06.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಅಂತರ್‌ರಾಷ್ಟ್ರೀಯ ಚಲನಚಿತ್ರೋತ್ಸವದ ಚಿತ್ರಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಗೂಗಲ್ ಟ್ರಾನ್ಸ್‌ಲೇಟರ್ ಬಳಕೆ ಮಾಡಿ ಹತ್ತಾರು ಎಡವಟ್ಟು ಮಾಡಿರುವ ಕುರಿತು ದಿನಾಂಕ:06.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ವೈ.ಎಂ. ಸತೀಶ್** ಅವರು ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಬೆಲೆ ಕುಸಿತ ಮತ್ತು ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ಮಂಗಳೂರು ಕಾಲೇಜಿನ ವಿದ್ಯಾರ್ಥಿ ಕಾಣೆಯಾಗಿ 10 ದಿನ ಕಳೆದರೂ ಯಾವುದೇ ಸುಳಿವು ಸಿಗದೇ ಕರಾವಳಿಯಾದ್ಯಾಂತ ಜನರಲ್ಲಿ ಆತಂಕ ಮೂಡಿಸಿರುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಪ್ರದೀಪ್ ಶೆಟ್ಟರ್** ಅವರು ಹಳೆ ಹುಬ್ಬಳ್ಳಿಯ ಅಂಗನವಾಡಿಯಲ್ಲಿ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ವಿತರಿಸಬೇಕಾಗಿದ್ದ ಪೌಷ್ಠಿಕ ಆಹಾರವನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ವಿಧೇಯಕ, 2025** ಮತ್ತು **ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025** ಹಾಗೂ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.

01. ಕರ್ನಾಟಕ ಕಿರು (Micro) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ, 2025

02. ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, 2024

03. ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2025

04. ಕರ್ನಾಟಕ ಲೇವಾದೇವಿದಾರರ(ತಿದ್ದುಪಡಿ) ವಿಧೇಯಕ, 2025

## 5. ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

01. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಹಕಾರ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೆ.ಎಸ್. ನವೀನ್
2. ಶ್ರೀ ಡಿ.ಎಸ್. ಅರುಣ್
3. ಶ್ರೀ ಕೇಶವ ಪ್ರಸಾದ್ ಎಸ್

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

02. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಮಧ್ಯಾಹ್ನ 1.00 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

03. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಹಕಾರ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೇಶವ ಪ್ರಸಾದ್ ಎಸ್
2. ಶ್ರೀ ಶರವಣ ಟಿ.ಎ
3. ಶ್ರೀ ಪಿ.ಹೆಚ್. ಪೂಜಾರ್
4. ಶ್ರೀ ಕೆ.ಎಸ್. ನವೀನ್
5. ಶ್ರೀ ಸಿ.ಟಿ. ರವಿ
6. ಶ್ರೀ ಪುಟ್ಟಣ್ಣ
7. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
8. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
9. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
10. ಶ್ರೀ ಹೆಚ್.ಪಿ. ಸುಧಾಮ್ ದಾಸ್

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

04. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಸಿ.ಟಿ. ರವಿ
2. ಶ್ರೀ ಶರವಣ ಟಿ.ಎ

3. ಕೇಶವ ಪ್ರಸಾದ್ ಎಸ್

4. ಶ್ರೀ ಕೆ.ಎಸ್. ನವೀನ್

5. ಶ್ರೀ ಡಿ.ಎಸ್. ಅರುಣ್

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 2.05 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 3.25 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

17. ಶ್ರೀ ತಿಪ್ಪಣ್ಣಪ್ಪ ಕಮಕನೂರ

### ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

01. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ **"ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉಪ ಮುಖ್ಯಮಂತ್ರಿಯವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

2. ಶ್ರೀ ಶರವಣ ಟಿ.ಎ.

3. ಶ್ರೀ ಸಿ.ಟಿ. ರವಿ

4. ಶ್ರೀ ಐವನ್ ಡಿ'ಸೋಜಾ

5. ಶ್ರೀ ಕೆ.ಎಸ್. ನವೀನ್

6. ಶ್ರೀ ಹೆಚ್.ಎಸ್. ಗೋಪಿನಾಥ್

7. ಶ್ರೀ ಎಂ. ನಾಗರಾಜ್

8. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

9. ಡಾ: ಎಂ.ಆರ್. ಸೀತಾರಾಂ

10. ಶ್ರೀ ಕೇಶವ ಪ್ರಸಾದ್ ಎಸ್

11. ಡಾ: ಉಮಾಶ್ರೀ

12. ಶ್ರೀ ಎಸ್.ಎಲ್. ಭೋಜೇಗೌಡ

ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶಾಸಕರುಗಳು ಮಾನ್ಯ ಉಪ ಮುಖ್ಯಮಂತಿಯವರು ನೀಡಿದ ಉತ್ತರವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 07. ನಿಯಮ 330ರ ಮೇರೆಗೆ ಪ್ರಸ್ತಾಪಿಸಲಾದ ವಿಷಯದ ಮೇಲೆ ಸರ್ಕಾರದಿಂದ ಉತ್ತರ

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಸಿ.ಟಿ. ರವಿ, ಶ್ರೀ ಶಶೀಲ್ ಜಿ. ನಮೋಶಿ ಹಾಗೂ ಇತರರು** ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ಕೆ.ಎ.ಎಸ್. ಪರೀಕ್ಷೆಯಲ್ಲಿ ಆಗುತ್ತಿರುವ ತಪ್ಪುಗಳಿಂದಾಗಿ ಅಭ್ಯರ್ಥಿಗಳು ಆತಂಕಕ್ಕೀಡಾಗಿರುವ ಕುರಿತು ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
2. ಶ್ರೀ ಎಸ್.ಎಲ್. ಭೋಜೇಗೌಡ
3. ಶ್ರೀ ಸಿ.ಟಿ. ರವಿ
4. ಶ್ರೀ ಶಶೀಲ್ ಜಿ. ನಮೋಶಿ
5. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
6. ಡಾ: ಧನಂಜಯ ಸರ್ಜಿ

ರಾತ್ರಿ 7.22 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಮಾನ್ಯ ಸಭಾಪತಿ ಪೀಠದಲ್ಲಿ ಆಸೀನರಾದರು.

7. ಶ್ರೀ ಡಿ.ಎಸ್. ಅರುಣ್
8. ಶ್ರೀ ಪುಟ್ಟಣ್ಣ
9. ಶ್ರೀ ಎಂ.ಎಲ್. ಅನಿಲ್ ಕುಮಾರ್

ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿದರು.

## 08. ಗಮನ ಸೆಳೆಯುವ ಸೂಚನೆ

1. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು 2014–15ನೇ ಸಾಲಿನಲ್ಲಿ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಕೈಗೊಂಡಿದ್ದ ಏರಿಯಲ್ ಫ್ಯೂಸ್ ಬೋರ್ಡ್ ಮತ್ತು ತಂತಿ ಬೇಲಿ ಅಳವಡಿಸುವ ತುಂಡು ಗುತ್ತಿಗೆ ಕಾಮಗಾರಿಗೆ ಸಂಬಂಧಿಸಿದಂತೆ ಮರುತನಿಖೆಗೆ ಹೊರಡಿಸಿರುವ ಆದೇಶವನ್ನು ಹಿಂಪಡೆದು ತಪ್ಪಿತಸ್ಥರಲ್ಲದ ಅಧಿಕಾರಿ/ನೌಕರರುಗಳಿಗೆ ನ್ಯಾಯ ಒದಗಿಸುವ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದರು.

ಮಾನ್ಯ ಇಂಧನ ಸಚಿವರು ಉತ್ತರಿಸಿದರು.

ಸದನವನ್ನು ರಾತ್ರಿ 7.40 ಗಂಟೆಯಲ್ಲಿ ಮುಂದೂಡಿ ದಿನಾಂಕ:13.03.2025ರಂದು ಬೆಳಿಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್.ಮಹಾಲಕ್ಷ್ಮಿ**

**ಕಾರ್ಯದರ್ಶಿ**

*****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:13.03.2025**

**(09)**

ಸದನವು ಬೆಳಗ್ಗೆ: 10.40 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:13.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 7ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 91(852) | |
| 2. | 92(851) | ಕಾಲಾವಕಾಶ |
| 3. | 93(835) | ವರ್ಗಾವಣೆ |
| 4. | 94(763) | ಗೈರು ಹಾಜರಿ |
| 5. | 95(814) | ತಡೆಹಿಡಿಯಲಾಯಿತು |
| 6. | 96(828) | |
| 7. | 97(754) | |
| 8. | 98(752) | |
| 9. | 99(841) | ಗೈರು ಹಾಜರಿ |
| 10. | 100(937) | ವರ್ಗಾವಣೆ |

11. 101(747)

12. 102(773)

13. 103(789)

14. 104(755) ಅರ್ಧಗಂಟೆ ಕಾಲಾವಧಿ ಚರ್ಚೆ

ಮಧ್ಯಾಹ್ನ 12.05 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

15. 105(832)

ಮಧ್ಯಾಹ್ನ 12.10 ಗಂಟೆಗೆ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪೀಠದಲ್ಲಿ ಆಸೀನರಾದರು.

**ದಿನಾಂಕ:06.03.2025ರ ಸಮೂಹ–IVರ 3ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

1. 33(322)

2. 42(274+223)

3. 43(233)

4. 45(215)

ದಿನಾಂಕ:13.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 7ನೇ ಪಟ್ಟಿಯ ಒಟ್ಟು 120 ಪ್ರಶ್ನೆಗಳ ಪೈಕಿ 41 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ

1. **ಡಾ: ಉಮಾಶ್ರೀ** ಅವರು ಸರ್ವಾಣಿ ಆಂಟಿಕ್ ಜೆಮ್‌ಸ್ಟೋನ್ ಅಂಡ್ ಜ್ಯುವೆಲರಿ ಎಂಬ ಖಾಸಗಿ ಸಂಸ್ಥೆಯಿಂದ ಟಿಪ್ಪು ಸುಲ್ತಾನ್ ಬಳಸುತ್ತಿದ್ದ ಖಡ್ಗವನ್ನು ಖರೀದಿಸಿ ಸರ್ಕಾರ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಣೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ರಾಮೋಜಿಗೌಡ** ಅವರು ಯಶವಂತಪುರದಿಂದ ಮತ್ತಿಕೆರೆಗೆ ತೆರಳುವ ಎಂ.ಎಸ್. ರಾಮಯ್ಯ ರಸ್ತೆಯಲ್ಲಿ ನಡೆಯುತ್ತಿರುವ ಕೊಳವೆ ಅಳವಡಿಕೆ ಕಾಮಗಾರಿಯಿಂದ ವಾಹನ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದರಿಂದ ತ್ವರಿತ ಗತಿಯಲ್ಲಿ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಎಂ. ನಾಗರಾಜು** ಅವರುಗಳು ರಾಜ್ಯದ ಪ್ರಾದೇಶಿಕ ಸಾರಿಗೆ (ಆರ್‌ಟಿಓ) ಕಛೇರಿಯಲ್ಲಿ ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಪೊಲೀಸ್ ಠಾಣೆಯನ್ನು ಪ್ರಾರಂಭ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀ ಪಿ.ಹೆಚ್. ಪೂಜಾರ್** ಅವರು 2025-26ನೇ ಸಾಲಿನ ಬಜೆಟ್‌ನಲ್ಲಿ ಬಾದಾಮಿ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ನೀಡದೇ ಇರುವ ಹಾಗೂ ಯಾವುದೇ ಯೋಜನೆಯನ್ನು ಘೋಷಿಸದೇ ಇರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಇಸ್ಪೀಟ್ ದಂಧೆ, ಜೂಜಾಟ, ಬಡ್ಡಿ ದಂಧೆ, ಅಕ್ರಮ ಮರಳುಗಾರಿಕೆ ಹಾಗೂ ಅರಣ್ಯ ಭೂಮಿ ಒತ್ತುವರಿ ಇತ್ಯಾದಿ ಅಕ್ರಮಗಳು ನಡೆಯುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಟಿ.ಎನ್. ಜವರಾಯಿಗೌಡ** ಅವರು ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಕಡ್ಡಾಯಗೊಳಿಸುವ ಉದ್ದೇಶದಿಂದ ನಿವೇಶನ ರಚನೆ ಪ್ರಕ್ರಿಯೆ ವಿಳಂಬ ಆಗುವುದನ್ನು ತಪ್ಪಿಸಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀಮತಿ ಹೇಮಲತಾ ನಾಯಕ್** ಅವರು ಕೊಳವೆ ಬಾವಿಯಲ್ಲಿ ಬಿದ್ದಿದ್ದ ಬಾಲಕರ ರಕ್ಷಣಾ ಕಾರ್ಯಾಚರಣೆಗೆ ಬಳಕೆಯಾಗಿರುವ ಯಂತ್ರೋಪಕರಣಗಳ ಬಾಕಿ ಬಿಲ್ಲುಗಳು ಜಿಲ್ಲಾಡಳಿತ ಕಛೇರಿಯಿಂದ ಪಾವತಿಯಾಗದೇ ಇರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀಮತಿ ಬಲ್ಕೀಸ್ ಬಾನು** ಬಾಲ್ಯ ವಿವಾಹ ತಡೆಗಟ್ಟುವ ಕಟ್ಟುನಿಟ್ಟಿನ ಕಾನೂನು ಇದ್ದರೂ ಸಹ ಬೆಳಗಾವಿ ಜಿಲ್ಲೆಯಲ್ಲಿ ಅಪ್ರಾಪ್ತ ಬಾಲಕಿ ಹೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ನೀಡಿ ತಾಯಿ ಕಾರ್ಡು ವಿತರಿಸಲು ಸಹಕರಿಸಿರುವ ಮಕ್ಕಳ ರಕ್ಷಣಾ ಘಟಕ ಮತ್ತು

ಆಶಾ ಕಾರ್ಯಕರ್ತೆಯರ ಕರ್ತವ್ಯ ಲೋಪದ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀರಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಅರಬ್ಬೀ ಸಮುದ್ರದಲ್ಲಿ ಯಾಂತ್ರೀಕೃತ ಬೋಟುಗಳು ಪದೇ ಪದೇ ತೀರ ಪ್ರದೇಶಕ್ಕೆ ಬಂದು ಮೀನುಗಾರಿಕೆ ನಡೆಸುವುದರಿಂದ ಹಾಗೂ ಲೈಟ್‌ಫಿಶಿಂಗ್‌ನಿಂದಾಗಿ ಮೀನಿನ ಸಂತತಿ ನಾಶವಾಗಿ ಸಾಂಪ್ರದಾಯಿಕ ನಾಡುದೋಣಿ ಮೀನುಗಾರಿಕೆ ಕುಂಠಿತಗೊಂಡು ಸಾಂಪ್ರದಾಯಿಕ ಮೀನುಗಾರರ ಜೀವನೋಪಾಯಕ್ಕೆ ಅನಾನುಕೂಲವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಗದಗ ನಗರದ ಪುಟ್ಟರಾಜ ಸ್ಮಾರಕ ಭವನ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಉತ್ತರಿಸಿದರು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀಮತಿ ಹೇಮಲತಾ ನಾಯಕ್** ಅವರು ತುಂಗಭದ್ರ ನದಿ ತೀರದಲ್ಲಿ ಪರವಾನಗಿ ಪಡೆಯದೇ ಹಲವಾರು ರೆಸಾರ್ಟ್‌ಗಳು ಅನಧಿಕೃತವಾಗಿ

ತಲೆಎತ್ತಿರುವ ಕುರಿತು ದಿನಾಂಕ:10.03.2023ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಎಂ. ನಾಗರಾಜು** ಅವರು ವಯೋವೃದ್ಧ ತಂದೆ-ತಾಯಿಯರನ್ನು ಹೆತ್ತ ಮಕ್ಕಳೇ ಮನೆಯಿಂದ ಆಚೆ ಹಾಕುತ್ತಿದ್ದು, ಬೆಳಗಾವಿ ವೈದ್ಯಕೀಯ ಸಂಸ್ಥೆಯೇ ಆಶ್ರಯ ತಾಣವಾಗಿರುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)** ಅವರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೆ ನಂ.1, 6.31 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರ ನೀಡುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯದಲ್ಲಿ ಯುವಕರು ಮಾದಕ ವ್ಯಸನಿಗಳಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀಮತಿ ಭಾರತಿ ಶೆಟ್ಟಿ** ಅವರು ರಾಜ್ಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಲ್ಲಿಯೂ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಐವನ್ ಡಿ'ಸೋಜಾ** ಅವರು ಸಿ.ಇ.ಟಿ.ಯನ್ನು (ಸಾಮಾನ್ಯ ಪ್ರವೇಶ ಪರೀಕ್ಷೆ) ಕ್ರೈಸ್ತ ಸಮುದಾಯದ ಗುಡ್ ಫ್ರೈಡೆ ದಿವಸದಂದು ನಡೆಸಲು ಉದ್ದೇಶಿಸಿರುವುದನ್ನು ಮುಂದೂಡುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಐವನ್ ಡಿ'ಸೋಜಾ** ಅವರು ರಾಜ್ಯದಲ್ಲಿ ಬ್ಯಾಟರಿ ಚಾಲಿತ ಆಟೋ ರಿಕ್ಷಾಗಳ ಅನಿಯಂತ್ರಿತ ಸಂಚಾರವನ್ನು ತಡೆಗಟ್ಟಲು ಪರವಾನಗಿಯನ್ನು ಕಡ್ಡಾಯಗೊಳಿಸುವ ಕುರಿತು ದಿನಾಂಕ: 12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಕೆ.ಎಸ್. ನವೀನ್
2. ಶ್ರೀ ಐವನ್ ಡಿ'ಸೋಜಾ
3. ಶ್ರೀ ಪ್ರದೀಪ್ ಶೆಟ್ಟರ್
4. ಶ್ರೀ ಸಿ.ಟಿ. ರವಿ
5. ಶ್ರೀ ಗೋವಿಂದರಾಜು
6. ಡಾ: ಉಮಾಶ್ರೀ
7. ಶ್ರೀ ಡಿ.ಎಸ್. ಅರುಣ್
8. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

9. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

10. ಶ್ರೀ ಕೇಶವ ಪ್ರಸಾದ್ ಎಸ್

11. ಶ್ರೀ ಎಂ. ನಾಗರಾಜು

12. ಶ್ರೀಮತಿ ಬಲ್ಕೀಸ್ ಬಾನು

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 2.45 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 4.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಸದನವು ಮಧ್ಯಾಹ್ನ 4.19 ಗಂಟೆಗೆ ಮಾನ್ಯ ಉಪ ಸಭಾಪತಿಯವರ (**ಶ್ರೀ ಎಂ.ಕೆ. ಪ್ರಾಣೇಶ್**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 5. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಕುರಿತು ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

ಮೈಸೂರಿನ ಉದಯಗಿರಿಯಲ್ಲಿ ಏಕಾಏಕಿ ಒಂದೇ ಕೋಮಿನವರು ಪ್ರತಿಭಟನೆ ನಡೆಸಿ, ಪೊಲೀಸ್ ಠಾಣೆ, ವಾಹನ ಹಾಗೂ ಪೊಲೀಸ್‌ನವರ ಮೇಲೆ ದಾಳಿ ನಡೆಸಿರುವುದು ಹಾಗೂ ರಾಜ್ಯದಲ್ಲಿ ಹೆಚ್ಚುತ್ತಿರುವ ಕೊಲೆ, ಅತ್ಯಾಚಾರ, ಗಲಭೆಗಳಿಂದ ಜನಸಾಮಾನ್ಯರಲ್ಲಿ ಅಭದ್ರತೆಯ ವಾತಾವರಣ ನಿರ್ಮಾಣವಾಗಿರುವ ಕುರಿತು.

1. ಶ್ರೀ ಸಿ.ಟಿ. ರವಿ
2. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು
3. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
4. ಶ್ರೀ ಕೇಶವ ಪ್ರಸಾದ್ ಎಸ್

5. ಶ್ರೀ ಕೆ.ಎಸ್. ನವೀನ್

6. ಶ್ರೀ ಶರವಣ ಟಿ.ಎ.

## 6. ಪ್ರಕಟಣೆ

ಕೆ.ಎಚ್. ಪಾಟೀಲ ಜನ್ಮಶತಮಾನೋತ್ಸವ ಆಚರಣೆ ಮತ್ತು ಕೆ.ಎಚ್. ಪಾಟೀಲ ಸ್ಕೂಲ್ ಆಫ್ ಲಾ ಉದ್ಘಾಟನಾ ಸಮಾರಂಭವು ಇಂದು ದಿನಾಂಕ:13.03.2025ರಂದು ಸಂಜೆ 6.00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಮಾರಂಭದಲ್ಲಿ ಎಲ್ಲಾ ಮಾನ್ಯ ಶಾಸಕರುಗಳು ಭಾಗವಹಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

## 7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಕುರಿತು ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

ಈ ಕೆಳಕಂಡ ಶಾಸಕರುಗಳು ನಿಯಮ 68ರ ಅಡಿ ಚರ್ಚೆಯಲ್ಲಿ ಭಾಗವಹಿಸಿದರು.

7. ಶ್ರೀ ಬಿ.ಕೆ. ಹರಿಪ್ರಸಾದ್

8. ಶ್ರೀ ಐವನ್ ಡಿ'ಸೋಜಾ

9.ಶ್ರೀ ಎಸ್.ಎಲ್. ಭೋಜೇಗೌಡ

10. ಶ್ರೀ ಶಶೀಲ್ ಜಿ. ನಮೋಶಿ

ಮಾನ್ಯ ಗೃಹ ಸಚಿವರು ನಾಳೆ ಉತ್ತರಿಸುವುದಾಗಿ ತಿಳಿಸಿದರು.

ಸದನವನ್ನು ಸಂಜೆ 6.55 ಗಂಟೆಯಲ್ಲಿ ಮುಂದೂಡಿ ದಿನಾಂಕ: 14.03.2025ರಂದು ಬೆಳಿಗ್ಗೆ 10.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

*****

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೊಂಭತ್ತನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ–1

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಶುಕ್ರವಾರ, ದಿನಾಂಕ:14.03.2025**

**(10)**

ಸದನವು ಬೆಳಗ್ಗೆ: 10.15 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### 1. ಪ್ರಶ್ನೋತ್ತರ

ದಿನಾಂಕ:14.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Vರ 8ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 106(1001)
2. 107(951)
3. 108(881)
4. 109(966+968)

**"ಗದ್ದಲ"**

ಬೆಳಿಗ್ಗೆ 11.00 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಬೆಳಿಗ್ಗೆ 11.34 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**"ಗದ್ದಲ"**

ಬೆಳಿಗ್ಗೆ 11.55 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 12.05 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

5. 110(906)
6. 111(945)
7. 112(875)
8. 113(1002)
9. 114(901) ವರ್ಗಾವಣೆ
10. 115(984) ಗೈರು ಹಾಜರಿ
11. 116(926)
12. 117(896)
13. 118(961) ಗೈರು ಹಾಜರಿ
14. 119(981)
15. 120(914)

**ದಿನಾಂಕ:05.03.2025ರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 24(156)

**ದಿನಾಂಕ:13.03.2025ರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 100(937) ವರ್ಗಾವಣೆ

ದಿನಾಂಕ:14.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Vರ 8ನೇ ಪಟ್ಟಿಯ ಒಟ್ಟು 117 ಪ್ರಶ್ನೆಗಳ ಪೈಕಿ 31 ಪ್ರಶ್ನೆಗಳಿಗೆ

ಉತ್ತರಗಳನ್ನು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಂಡಿಸಿದರು.

## 2. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

01. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:13.03.2025ರಂದು 2025ನೇ ಸಾಲಿನ **"ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ"**ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

02. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 113ರ ಮೇರೆಗೆ ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2024ನೇ ಸಾಲಿನ **"ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ"**ವನ್ನು ದಿನಾಂಕ:13.03.2025ರಂದು ಪುನರ್ ಪರ್ಯಾಲೋಚಿಸಿ ಅಂಗೀಕರಿಸಿತೆಂದು ತಿಳಿಸಿರುತ್ತಾರೆ.

## 3. ಶೂನ್ಯವೇಳೆ

1. **ಶ್ರೀಮತಿ ಭಾರತಿ ಶೆಟ್ಟಿ** ಅವರು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿಯಮಾವಳಿಗಳಿಂದ ಮಂಗಳೂರು ಹಂಚು ಕಾರ್ಖಾನೆಗಳಿಗೆ ಅತಿಯಾದ ನಿರ್ಬಂಧ ಹೇರುವುದನ್ನು ಕೈಬಿಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ರಾಮೋಜಿಗೌಡ** ಅವರು ಆಲಮಟ್ಟಿ ಡ್ಯಾಂನ ಯೋಜನೆ ಪೂರ್ಣಗೊಳಿಸಲು ಅಗತ್ಯ ಅನುದಾನವನ್ನು ಒದಗಿಸದೇ ಇರುವುದರಿಂದ 3ನೇ ಹಂತದ ಯೋಜನೆ ಪೂರ್ಣಗೊಳಿಸಲು ವಿಳಂಬ ಹಾಗೂ ಕಾನೂನು ತೊಡಕು ಉಂಟಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರಿಸಿದರು.

3. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಆಲಮಟ್ಟಿ ಡ್ಯಾಂನ ಯೋಜನೆ ಪೂರ್ಣಗೊಳಿಸಲು ಅಗತ್ಯ ಅನುದಾನವನ್ನು ಒದಗಿಸದೇ ಇರುವುದರಿಂದ 3ನೇ ಹಂತದ ಯೋಜನೆ ಪೂರ್ಣಗೊಳಿಸಲು ವಿಳಂಬ ಹಾಗೂ ಕಾನೂನು ತೊಡಕು ಉಂಟಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಸೋಮವಾರ ಉತ್ತರ ನೀಡುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು.

4. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಬೆಂಗಳೂರು ನಗರದಲ್ಲಿ ಪಾದಚಾರಿ ಮೇಲ್ಸೇತುವೆ(ಸ್ಕೈವಾಕ್)ಗಳನ್ನು ಖಾಸಗಿ ಏಜೆನ್ಸಿಗಳು ಸೂಕ್ತ ನಿರ್ವಹಣೆ ಮಾಡದೆ ಇರುವ ಕುರಿತು ಬಿ.ಬಿ.ಎಂ.ಪಿ. ಅಧಿಕಾರಿಗಳು ನಿಗಾವಹಿಸಿ ದುರಸ್ಥಿಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಸೋಮವಾರ ಉತ್ತರ ನೀಡುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು.

5. **ಶ್ರೀಮತಿ ಬಲ್ಕೀಸ್ ಬಾನು** ಅವರು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಹಾಸ್ಟೆಲ್‌ಗಳಲ್ಲಿ ಅನಧಿಕೃತ ವಾಸಕ್ಕೆ

ಅವಕಾಶ ನೀಡಿರುವುದು ಹಾಗೂ ಮೂಲ ಸೌಕರ್ಯಗಳಿಲ್ಲದೇ ಹಾಸ್ಟೆಲ್ ನಿರ್ವಹಣೆಯಲ್ಲಿ ವಾರ್ಡನ್‌ಗಳ ಬೇಜವಾಬ್ದಾರಿ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಡಾ: ಧನಂಜಯ ಸರ್ಜಿ** ಅವರು ಬೇಸಿಗೆ ಕಾಲದಲ್ಲಿ ಕಾಡ್ಗಿಚ್ಚು ಅವಘಡಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ತುರ್ತು ಮತ್ತು ಅಗ್ನಿಶಾಮಕ ಸೇವೆಗಳ ಇಲಾಖೆಯಲ್ಲಿನ ವಾಹನಗಳ ಕೊರತೆಯನ್ನು ಪರಿಹರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಸಿ.ಎನ್. ಮಂಜೇಗೌಡ** ಅವರು ನಂಜನಗೂಡು ತಾಲ್ಲೂಕಿನಾದ್ಯಾಂತ ಪೆಟ್ಟಿಗೆ ಅಂಗಡಿ ಹಾಗೂ ಕಿರಾಣಿ ಅಂಗಡಿಗಳಲ್ಲಿ ಅಕ್ರಮ ಮಧ್ಯ ಮಾರಾಟ ತಡೆಯುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಅಬಕಾರಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಜಗದೇವ್ ಗುತ್ತೇದಾರ್** ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿ ಮಾಡುವ ಹಾಗೂ ಅಲ್ಲಿ ಸಿಬ್ಬಂದಿಗಳ ಪಿಂಚಣಿ ವೇತನ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಟಿ.ಎನ್. ಜವರಾಯಿಗೌಡ** ಅವರು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕರ್ಮಿಗಳ ಹೊಸ ನೇಮಕಾತಿ

ಮಾಡಿಕೊಳ್ಳುವಲ್ಲಿ ಅನರ್ಹರನ್ನು ಅಕ್ರಮವಾಗಿ ಸೇರಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು.

10. **ಡಾ: ತಳವಾರ್ ಸಾಬಣ್ಣ** ಅವರು ಕೇಂದ್ರ ಸರ್ಕಾರದ ಮಹತ್ವದ ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ "ಜಲ ಜೀವನ್ ಮಿಷನ್" ಯೋಜನೆಯಡಿ ವಿಜಯಪುರದಲ್ಲಿ ಕಳಪೆ ಕಾಮಗಾರಿಯ ಬಗ್ಗೆ ತನಿಖೆ ನಡೆಸಲು ಹಾಗೂ ಶುದ್ಧ ಕುಡಿಯುವ ನೀರು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಉತ್ತರಿಸಿದರು.

11. **ಶ್ರೀ ಎಂ. ನಾಗರಾಜು** ಅವರು ಅವೈಜ್ಞಾನಿಕವಾದ ತ್ಯಾಜ್ಯ ವಿಲೇವಾರಿಯಿಂದ ಬೆಂಗಳೂರಿನ ಮಿಟ್ಟಿಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಪರಿಸರ ಹಾಗೂ ಅಂತರ್ಜಲ ಕಲುಷಿತದಿಂದ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದನ್ನು ತಡೆಗಟ್ಟಲು ಶಾಶ್ವತ ಪರಿಹಾರ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು.

12. **ಶ್ರೀ ಚಿದಾನಂದ್ ಎಂ. ಗೌಡ** ಅವರು ಶಿರಾ ತಾಲ್ಲೂಕಿನ ಗೌಡಗೆರೆ ಹೋಬಳಿಯ ತಾವರೆಕೆರೆ ಸಮೀಪದ ಜೋಗಿರಹಟ್ಟಿಯ ಜೋಗಿ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ನಿವೇಶನ ನೀಡಿ ಮನೆ ನಿರ್ಮಾಣ ಮಾಡಿಸಿಕೊಡಲು ಕ್ರಮ ಕೈಗೊಳ್ಳುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

13. **ಶ್ರೀ ಎನ್. ರವಿಕುಮಾರ್** ಅವರು ಶಿಥಿಲಾವಸ್ಥೆಯಲ್ಲಿರುವ ದಾವಣಗೆರೆ ಬೆಟಗೇರಿ ಜಿಲ್ಲಾ ಆಸ್ಪತ್ರೆಯ ನವೀಕರಣ ಪ್ರಕ್ರಿಯೆ ಕೂಡಲೇ ಆರಂಭಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

## 4. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಎಂ. ನಾಗರಾಜು** ಅವರು ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಗಣನೀಯ ಪ್ರಮಾಣದಲ್ಲಿ ಭೂಕುಸಿತ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕ ಕಾಮಗಾರಿಗಳನ್ನು ತಡೆಗಟ್ಟುವ ಕುರಿತು ದಿನಾಂಕ:04.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

2. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ರಾಜ್ಯದಲ್ಲಿ ವ್ಯಾಪಿಸುತ್ತಿರುವ ಬೊಜ್ಜಿನ ಸಮಸ್ಯೆ ಕುರಿತಂತೆ ವಿವಿಧ ವಿಭಾಗದ ನುರಿತ ತಜ್ಞರು, ವೈದ್ಯರು, ಸಂಶೋಧಕರು ಹಾಗೂ ಮುಂತಾದವರ ಒಳಗೊಂಡಂತೆ ಸಮಿತಿ ರಚಿಸಿ ವರದಿ ಪಡೆದು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

3. **ಶ್ರೀ ರಾಮೋಜಿಗೌಡ** ಅವರು ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ದಂಧೆ ನಡೆಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

4. **ಶ್ರೀ ರಾಮೋಜಿಗೌಡ** ಅವರು ಬಿ.ಬಿ.ಎಂ.ಪಿ. ಕೈಗೊಂಡಿರುವ ವೈಟ್ ಟ್ಯಾಪಿಂಗ್ ಕಾಮಗಾರಿಗಳಿಂದ ಧರ್ಮರಾಯ ದೇವಸ್ಥಾನದ ಕರಗ ಮಹೋತ್ಸವಕ್ಕೆ ಅಡಚಣೆ ಉಂಟಾಗಿರುವ ಕುರಿತು

ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

5. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ** ಅವರು ಎತ್ತಿನಹೊಳೆ ಯೋಜನೆಯಿಂದಾಗಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳು ಬರ ಪೀಡಿತ ಪ್ರದೇಶವಾಗುವ ಕುರಿತು ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ಆಲಮಟ್ಟಿ ಡ್ಯಾಂ ಎತ್ತರ ಹೆಚ್ಚಳ ಕುರಿತು ಮಹಾರಾಷ್ಟ್ರದಿಂದ ವಿರೋಧ ವ್ಯಕ್ತವಾಗುತ್ತಿರುವ ಕುರಿತು ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

7. **ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಎಂ. ನಾಗರಾಜು** ಅವರು ರಾಜ್ಯದ ಪ್ರಾದೇಶಿಕ ಸಾರಿಗೆ (ಆರ್‌ಟಿಓ) ಕಛೇರಿಯಲ್ಲಿ ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

8. **ಶ್ರೀ ಟಿ.ಎನ್. ಜವರಾಯಿಗೌಡ** ಅವರು ಖಾಸಗಿ ಬಡಾವಣೆ ನಿರ್ಮಾಣಕ್ಕೆ ಸರ್ಕಾರದ ಅನುಮತಿ ಕಡ್ಡಾಯಗೊಳಿಸುವ ಉದ್ದೇಶದಿಂದ ನಿವೇಶನ ರಚನೆ ಪ್ರಕ್ರಿಯೆ ವಿಳಂಬ ಆಗುವುದನ್ನು ತಪ್ಪಿಸಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

9. **ಶ್ರೀಮತಿ ಬಲ್ಕೀಸ್ ಬಾನು** ಅವರು ಬಾಲ್ಯ ವಿವಾಹ ತಡೆಗಟ್ಟುವ ಕಟ್ಟುನಿಟ್ಟಿನ ಕಾನೂನು ಇದ್ದರೂ ಸಹ ಬೆಳಗಾವಿ ಜಿಲ್ಲೆಯಲ್ಲಿ ಅಪ್ರಾಪ್ತ ಬಾಲಕಿ ಹೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ನೀಡಿ ತಾಯಿ ಕಾರ್ಡು ವಿತರಿಸಲು ಸಹಕರಿಸಿರುವ ಮಕ್ಕಳ ರಕ್ಷಣಾ ಘಟಕ

ಮತ್ತು ಆಶಾ ಕಾರ್ಯಕರ್ತೆಯರ ಕರ್ತವ್ಯ ಲೋಪದ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

10. **ಶ್ರೀ ಎಸ್.ವ್ಹಿ. ಸಂಕನೂರ** ಅವರು ಗದಗ ನಗರದ ಪುಟ್ಟರಾಜ ಸ್ಮಾರಕ ಭವನ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

## 5. ಅರ್ಧಗಂಟೆ ಕಾಲಾವಧಿ ಚರ್ಚೆ

ಮಾನ್ಯ ಶಾಸಕರಾದ ಶ್ರೀ ಶರವಣ ಟಿ.ಎ. ಅವರು ಗ್ಯಾರಂಟಿ ಯೋಜನೆಗಳ ಅನುಷ್ಠಾನದದ ಮೌಲ್ಯಮಾಪನ ಮತ್ತು ನಿರ್ವಹಣೆ ಕುರಿತು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:103(789)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು ಅರ್ಧ ಗಂಟೆ ಕಾಲಾವಧಿಯ ಚರ್ಚೆಯನ್ನು ಪ್ರಾರಂಭಿಸಿದರು.

ಮಧ್ಯಾಹ್ನ 2.35 ಗಂಟೆಯಲ್ಲಿ ಮಾನ್ಯ ಶಾಸಕರಾದ **ಶ್ರೀ ಎಸ್.ಎಲ್. ಭೋಜೇಗೌಡ** ಅವರು ಸಭಾಪತಿ ಪೀಠದಲ್ಲಿ ಆಸೀನರಾದರು.

ಮಧ್ಯಾಹ್ನ 2.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:17.03.2025ರಂದು ಬೆಳಿಗ್ಗೆ 11.00 ಗಂಟೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ**

**ಕಾರ್ಯದರ್ಶಿ**

****

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ–1

## ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

## ಸೋಮವಾರ, ದಿನಾಂಕ:17.03.2025

**(11)**

ಸದನವು ಬೆಳಗ್ಗೆ: 11.10 ಗಂಟೆಗೆ ಮಾನ್ಯ ಉಪ ಸಭಾಪತಿಯವರ (**ಶ್ರೀ ಎಂ.ಕೆ. ಪ್ರಾಣೇಶ್**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಾನ್ಯ ಉಪ ಸಭಾಪತಿಯವರು ಮಾನ್ಯ ಸದಸ್ಯರಾದ ಶ್ರೀ ವೈ.ಎಂ. ಸತೀಶ್ ಅವರಿಗೆ ಜನ್ಮದಿನದ ಶುಭಾಶಯ ಕೋರಿದರು.

### 1. ಪ್ರಶ್ನೋತ್ತರ

ದಿನಾಂಕ:17.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–Iರ 9ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 121(1071) | |
| 2. | 122(1070) | ಗೈರು ಹಾಜರಿ |
| 3. | 123(1052) | ಶ್ರೀ ಬಸನಗೌಡ ಬಾದರ್ಲಿ ಪರವಾಗಿ ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) |
| 4. | 124(1135) | |
| 5. | 125(1098) | |
| 6. | 126(1083) | |
| 7. | 127(1085) | |
| 8. | 128(1114) | |

9. 129(1069) ಕಾಲಾವಕಾಶ

10. 130(1143)

11. 131(1096)

12. 132(1043)

13. 133(1255)

14. 134(1054)

15. 135(1089) ಗೈರು ಹಾಜರಿ

**ದಿನಾಂಕ:10.03.2025ರ ಸಮೂಹ–IIರ 4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 53(362)

**ದಿನಾಂಕ:13.03.2025ರ ಸಮೂಹ–IVರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

1. 95(814)

ದಿನಾಂಕ:17.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–Iರ 9ನೇ ಪಟ್ಟಿಯ ಒಟ್ಟು 132 ಪ್ರಶ್ನೆಗಳ ಪೈಕಿ 57 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ

1. **ಶ್ರೀ ಜಗದೇವ್ ಗುತ್ತೇದಾರ್ ಮತ್ತು ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು** ಅವರುಗಳು ಸಂವಿಧಾನದ ಅನುಚ್ಛೇದ 371ಜೆ ಜಾರಿಗೆ ಬಂದು 10 ವರ್ಷಗಳಾದರೂ ಕಲ್ಯಾಣ ಕರ್ನಾಟಕ ಮೀಸಲಾತಿಯಡಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ಮುಂಬಡ್ತಿ ನೀಡುವ ವಿಷಯದಲ್ಲಿ ಸರ್ಕಾರದ ವಿವಿಧ

ಇಲಾಖೆಗಳು ಸರಿಯಾಗಿ ನಿರ್ವಹಿಸದೇ ಇರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಐವನ್ ಡಿ'ಸೋಜಾ** ಅವರು ಅತಿ ವಿರಳ ಖಾಯಿಲೆಯಾದ "ಹೈಪರ್ ಐಜಿಇ ಮೆಡಿಕೇಟೆಡ್ ಮಸ್ಟ್ ಸೆಲ್ ಆಕ್ಟಿವೇಶನ್ ಸಿಂಡ್ರೋಮ್"ನಿಂದ ಬಳಲುತ್ತಿರುವ ಚಾಂದಿನಿ ಅವರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ವೈದ್ಯಕೀಯ ಸಂಪೂರ್ಣ ವೆಚ್ಚವನ್ನು ಭರಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

3. **ಶ್ರೀ ಎಂ. ನಾಗರಾಜು** ಅವರು ಮಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ರಾಜ್ಯದ ಹಲವಾರು ಸರ್ಕಾರಿ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರು ವಿದೇಶ ಪ್ರಯಾಣ ಮತ್ತು ವಿದೇಶದಲ್ಲಿ ಉದ್ಯೋಗ ಕೊಡಿಸುವ ನೆಪದಲ್ಲಿ ನಕಲಿ ವೀಸಾ ನೀಡಿ ವಂಚನೆ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

5. **ಶ್ರೀಮತಿ ಬಲ್ಕೀಸ್ ಬಾನು** ಅವರು ಸಾಗರ ತಾಲ್ಲೂಕಿನ ಕಸಬಾ ಹೋಬಳಿಯ ಮಂಕೋಡು ಗ್ರಾಮದಲ್ಲಿ ಭೂಗಳ್ಳರು ನಕಲಿ ದಾಖಲೆಯನ್ನು ಸೃಷ್ಟಿಸಿ ಸರ್ಕಾರಿ ಗೋಮಾಳ ಜಮೀನನ್ನು ಕಬಳಿಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ಸರ್ಕಾರಿ ಆದೇಶ ಮತ್ತು ಸೂಚನಾ ಪತ್ರಗಳಿದ್ದರೂ ಸಹ ಕೃಷ್ಣಭಾಗ್ಯ ಜಲನಿಗಮದ ಕಛೇರಿಯನ್ನು ಆಲಮಟ್ಟಿಗೆ ಸ್ಥಳಾಂತರವಾಗದಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ನಗರದ ವಿವಿಧ ಸ್ಥಳಗಳಲ್ಲಿ ನೀರು ಪೂರೈಸುವ ಯೋಜನೆಯ ಕಾಮಗಾರಿಯು ಪೂರ್ಣಗೊಳಿಸದೆ ಸಾರ್ವಜನಿಕರ ಮೂಲಭೂತ ಸೌಲಭ್ಯಕ್ಕೆ ಅನಾನುಕೂಲ ಉಂಟು ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಸಿ.ಟಿ. ರವಿ** ಅವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಟಿ. ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯ ಮಕ್ಕಳು ಉದ್ಯಮಿಯೊಬ್ಬರು ಸರಬರಾಜು ಮಾಡಿರುವ ಕಲುಷಿತ ಆಹಾರ ಸೇವಿಸಿ ಅಸ್ವಸ್ಥಗೊಂಡಿರುವಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

9. **ಶ್ರೀ ವೈ.ಎಂ. ಸತೀಶ್** ಅವರು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಜೂಜಾಟಗಳನ್ನು ತಡೆಯುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರು ಉತ್ತರ ಒದಗಿಸುವುದಾಗಿ ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಸಿ.ಎನ್. ಮಂಜೇಗೌಡ** ಅವರು ರಾಜ್ಯದಲ್ಲಿ ಕೇಂದ್ರ ಸರ್ಕಾರದ ನರೇಗಾ ಯೋಜನೆಯಡಿ ಹಣ ದುರ್ಬಳಕೆ ಆಗಿರುವ ಕುರಿತು ದಿನಾಂಕ:04.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

2. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಶಾಲೆಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಸದಿರುವಂತೆ ಕ್ರಮ ಕೈಗೊಳ್ಳುವ ಕುರಿತು ದಿನಾಂಕ:06.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

3. **ಡಾ: ತಳವಾರ್ ಸಾಬಣ್ಣ** ಅವರು ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮೆ: ಅಲ್ಟ್ರಾಟೇಕ್ ಸಿಮೆಂಟ್ ಲಿಮಿಟೆಡ್, ಮಳಖೇಡ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ರೈತರಿಂದ ಕೃಷಿ ಜಮೀನುಗಳನ್ನು ಖರೀದಿಸಿ ಯೋಗ್ಯ ಬೆಲೆ ನೀಡದಿರುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ಬಿ.ಕೆ. ಹರಿಪ್ರಸಾದ್** ಅವರು ಬಾಗಲಕೋಟೆ ಜಿಲ್ಲೆಗೆ 4 ಹೊಸ ತಾಲ್ಲೂಕುಗಳು ಘೋಷಣೆಯಾಗಿದ್ದರೂ ಸರ್ಕಾರದಿಂದ ತಾಲ್ಲೂಕುಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

5. **ಶ್ರೀ ಸಿ.ಎನ್. ಮಂಜೇಗೌಡ** ಅವರು ಚಾಮರಾಜನಗರ ಜಿಲ್ಲೆಯ ಗುಂಡ್ಲು ಪೇಟೆಯಲ್ಲಿ ಅನುದಾನ ಕೊರತೆಯಿಂದ ಇಂದಿರಾ ಕ್ಯಾಂಟೀನನ್ನು ಮುಚ್ಚಿರುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

6. **ಶ್ರೀ ಪಿ.ಹೆಚ್. ಪೂಜಾರ್** ಅವರು ಮುಧೋಳ ಜಿಲ್ಲೆ ಗ್ರಂಥಾಲಯಗಳಲ್ಲಿ ರತ್ನತ್ರಯರಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳ

ಸಂಗ್ರಹ, ಭಾಷಾಂತರದಂತಹ ಕಾರ್ಯಗಳನ್ನು ಪೂರ್ಣಗೊಳಿಸುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

7. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ಪಬ್ಲಿಕ್ ಶಾಲೆಯಲ್ಲಿ ಕೊಠಡಿ ಚಾವಣಿಯು ಕುಸಿದು ಬಿದ್ದಿರುವ ಕುರಿತು ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

## 4. ಸಭೆಯ ಮುಂದಿಡಲಾಗುವ ಕಾಗದ ಪತ್ರ

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **"ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ"**ವನ್ನು ಸಭೆಯ ಮುಂದೆ ಮಂಡಿಸಿದರು.

## 5. ಕ್ರಿಯಾಲೋಪ

ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೋತ್ತರ ಪ್ರಾರಂಭದ ಪೂರ್ವದಲ್ಲಿ ಗುತ್ತಿಗೆ ಕಾಮಗಾರಿಯಲ್ಲಿ ಮುಸ್ಲಿಂರಿಗೆ ಶೇ.4ರಷ್ಟು ಮೀಸಲಾತಿ ನೀಡಲು ರಾಜ್ಯ ಸರ್ಕಾರ ಉದ್ದೇಶಿಸಿರುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿರುವ ಕುರಿತು ವಿರೋಧ ವ್ಯಕ್ತಪಡಿಸಿ ಪ್ರಸ್ತಾಪಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾಲೋಪವನ್ನೆತ್ತಿ ಸದರಿ ಪದಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ವಿನಂತಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂವಿಧಾನದಲ್ಲಿ ಧಾರ್ಮಿಕ ಅಡಿಯಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶ ಇಲ್ಲ ಎಂದು ತಿಳಿಸಿದರು.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು Constituent assemblyನಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಓದಿದರು.

ಮಾನ್ಯರು ಪ್ರಸ್ತಾಪಿಸಿರುವ ಅಂಶಗಳನ್ನು ಪರಿಶೀಲಿಸಿ ತೀರ್ಪು ನೀಡುವುದಾಗಿ ಮಾನ್ಯ ಉಪ ಸಭಾಪತಿಯವರು ತಿಳಿಸಿದರು.

ಮಧ್ಯಾಹ್ನ 1.55 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಮಧ್ಯಾಹ್ನ 3.30 ಗಂಟೆಗೆ ಮಾನ್ಯ ಉಪ ಸಭಾಪತಿಯವರ (**ಶ್ರೀ ಎಂ.ಕೆ. ಪ್ರಾಣೇಶ್**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ಶಾಸನ ರಚನೆ

## ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಸೂಚಿಸಿ ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಸಿ.ಟಿ. ರವಿ
2. ಶ್ರೀ ಎಂ. ನಾಗರಾಜು
3. ಡಾ: ತಳವಾರ್ ಸಾಬಣ್ಣ
4. ಶ್ರೀ ಎಸ್.ವ್ಹಿ. ಸಂಕನೂರ

ವಿಧೇಯಕವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

## 7. ಅಭಿನಂದನಾ ನಿರ್ಣಯ

ಶ್ರೀ ಐವನ್ ಡಿ'ಸೋಜಾ ಅವರು ಮಂಗಳೂರಿನಲ್ಲಿ ಕೋಟ್ಯಾಂತರ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲಿ ಶ್ರಮವಹಿಸಿರುವ ಗೃಹ ಇಲಾಖೆಯ ಪೊಲೀಸ್ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಿದರು.

ಅಭಿನಂದನಾ ನಿರ್ಣಯವನ್ನು ಅಂಗೀಕರಿಸಲಾಯಿತು.

## 8. ನಿಯಮ 330ರ ಮೇರೆಗೆ

**ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಹಾಗೂ ಶ್ರೀಮತಿ ಹೇಮಲತಾ ನಾಯಕ್** ಅವರುಗಳು ತುಂಗಭದ್ರ ನದಿ ತೀರದಲ್ಲಿ ದಿನಾಂಕ:06.03.2025ರಂದು ವಿದೇಶಿ ಪ್ರವಾಸಿಗರ ಮೇಲೆ ಅತ್ಯಾಚಾರವಾಗಿರುವುದಲ್ಲದೆ, ಮಾರಣಾಂತಿಕ ಹಲ್ಲೆ ನಡೆಸಿರುವುದು ಹಾಗೂ ತುಂಗಭದ್ರ ನದಿ ಸುತ್ತಲಿನ ಗ್ರಾಮಗಳಲ್ಲಿ ಹೋಮ್‌ಸ್ಟೇಗಳನ್ನು ಅನಧಿಕೃತವಾಗಿ ನಡೆಸುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿ ಅವರು ಸ್ಪಷ್ಟೀಕರಣ ಕೋರಿದರು.

ಮಧ್ಯಾಹ್ನ 4.15 ಗಂಟೆಯಲ್ಲಿ ಮಾನ್ಯ ಶಾಸಕರಾದ ಶ್ರೀಮತಿ ಭಾರತಿ ಶೆಟ್ಟಿ ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

ಮಧ್ಯಾಹ್ನ 4.50 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಸಿ.ಟಿ. ರವಿ
2. ಶ್ರೀ ಶರವಣ ಟಿ.ಎ.
3. ಶ್ರೀಮತಿ ಭಾರತಿ ಶೆಟ್ಟಿ

4. ಶ್ರೀ ಅಡಗೂರ್ ಹೆಚ್. ವಿಶ್ವನಾಥ್

5. ಶ್ರೀ ಕೆ.ಎಸ್. ನವೀನ್

6. ಶ್ರೀ ಶಶೀಲ್ ಜಿ. ನಮೋಶಿ

7. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

8. ಶ್ರೀ ಎಸ್.ಎಲ್. ಭೋಜೇಗೌಡ

9. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

**"ಗದ್ದಲ"**

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಮಾನ್ಯ ಗೃಹ ಸಚಿವರು ನೀಡಿದ ಉತ್ತರವನ್ನು ಒಪ್ಪದೆ ಸಭಾತ್ಯಾಗ ಮಾಡಿದರು.

ಸಂಜೆ 6.50 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:18.03.2025ರಂದು ಬೆಳಿಗ್ಗೆ 10.00 ಗಂಟೆಗೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು(**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

*****

# **ಕರ್ನಾಟಕ ವಿಧಾನ ಪರಿಷತ್ತು**

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಂಗಳವಾರ, ದಿನಾಂಕ:18.03.2025**

**(12)**

ಸದನವು ಬೆಳಗ್ಗೆ: 10.15 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:18.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIರ 10ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 136(1227) | |
| 2. | 137(1232) | ವರ್ಗಾವಣೆ |
| 3. | 138(1166) | ಗೈರು ಹಾಜರಿ |
| 4. | 139(1168) | |
| 5. | 140(1214) | |
| 6. | 141(1185) | |
| 7. | 142(1184) | |
| 8. | 143(1240) | |
| 9. | 144(1197) | |
| 10. | 145(1156) | |

11. 146(1152)

12. 147(1262)

13. 148(1177)

14. 149(1245)

15. 150(1251)

ದಿನಾಂಕ:18.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIರ 10ನೇ ಪಟ್ಟಿಯ ಒಟ್ಟು 92 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ

1. **ಶ್ರೀ ಕೆ.ಎಸ್. ನವೀನ್** ಅವರು ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬಿ–ಖಾತಾ ಆಸ್ತಿಗಳಿಗೆ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಸಕ್ರಮ ಮಾಡುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗದ ಶರಾವತಿ ಭೂಗತ ವಿದ್ಯುತ್ ಯೋಜನೆಯ ಬದಲು ಬ್ಯಾಟರಿ ಎನ್‌ರ್ಜಿ ಸ್ಟೋರೇಜ್ ಸಿಸ್ಟಂ (ಬಿ.ಇ.ಎಸ್.ಎಸ್) ಯೋಜನೆಯನ್ನು ಅಳವಡಿಸುವ ಕುರಿತು ಪ್ರಸ್ತಾಪಿಸಿದರು.

    ಮಾನ್ಯ ಇಂಧನ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ಜಗದೇವ್ ಗುತ್ತೇದಾರ್** ಅವರು ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲಿ ಆರ್ಥಿಕ ಅಸಮತೋಲನ ತೊಲಗಿಸಿ

ತಲಾ ಆದಾಯವನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಡಾ: ಧನಂಜಯ ಸರ್ಜಿ** ಅವರು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ವ್ಯಾಸಂಗ ಮಾಡಲು ಪ್ರವೇಶಾತಿಯಲ್ಲಿ ಆಗಿರುವ ಭ್ರಷ್ಟಾಚಾರದ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಡಾ: ಚಂದ್ರಶೇಖರ ಬಸವರಾಜ ಪಾಟೀಲ** ಅವರು ಬೀದರ ಜಿಲ್ಲೆಯ ಹುಮನಾಬಾದ್ ಪಟ್ಟಣದ ಸರ್ವೆ ನಂ. 375ರ 3.17 ಎಕರೆಯ ಭಾಗದಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿನ ನಿವೇಶನಗಳಿಗೆ ಮೂಲಭೂತ ಸೌಲಭ್ಯಗಳನ್ನ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಉತ್ತರಿಸಿದರು.

6. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆ, ಮುಂಡಗೋಡು ತಾಲ್ಲೂಕಿನ ಮೈನಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.** ಅವರು ಡೆಡ್ಲಿ ಆನ್‌ಲೈನ್ ಗೇಮ್‌ಗಳು ಮತ್ತು ಬೆಟ್ಟಿಂಗ್‌ಗಳಿಂದ ಆತ್ಮಹತ್ಯೆಗಳು ಹಾಗೂ ಯುವಕರು ತಪ್ಪು ದಾರಿ ಹಿಡಿಯುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಚಿದಾನಂದ್ ಎಂ. ಗೌಡ** ಅವರು ತುಮಕೂರು ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಹೆರಿಗೆಗಳಿಗೆ ಸಂಬಂಧಿಸಿದಂತೆ ಅಕ್ರಮವಾಗಿ ಹಣ ಗಳಿಸುತ್ತಿರವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಕಿಶೋರ್ ಕುಮಾರ್ ಪುತ್ತೂರ್** ಅವರು ರಾಜ್ಯದಲ್ಲಿ ಭಿಕ್ಷಾಟನೆಯನ್ನು ನಿರ್ಮೂಲನೆ ಮಾಡಿ ಭಿಕ್ಷುಕರಿಗೆ ಪುನರ್ವಸತಿ ಕಲ್ಪಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀ ಶರವಣ ಟಿ.ಎ** ಅವರು ಬೆಂಗಳೂರು ನಗರ ಜಿಲ್ಲೆಯ ಕೆ.ಆರ್.ಪುರಂ ತಾಲ್ಲೂಕು ವರ್ತೂರು ಹೋಬಳಿಯ ಕಾಡುಬೀಸನಹಳ್ಳಿ ಗ್ರಾಮದ ಸರ್ವೆ ನಂ.24ರ ಜಾಗದಲ್ಲಿರುವ ಮನೆಗಳನ್ನು ಕೆ.ಐ.ಎ.ಡಿ.ಬಿ ಅಧಿಕಾರಿಗಳು ತೆರವು ಕಾರ್ಯಾಚರಣೆ ಮಾಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಟಿ.ಎನ್. ಜವರಾಯಿ ಗೌಡ** ಅವರು ಕಬ್ಬನ್ ಪಾರ್ಕ್‌ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ರದ್ದುಪಡಿಸುವ ಕುರಿತು ದಿನಾಂಕ:10.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

2. **ಶ್ರೀ ಟಿ.ಎನ್. ಜವರಾಯಿ ಗೌಡ** ಅವರು ರಾಜ್ಯದಲ್ಲಿ ದಿನನಿತ್ಯ ಬಳಕೆ ವಸ್ತುಗಳು, ಇನ್ನಿತರೆ ಶುಲ್ಕ ಹಾಗೂ ದರಗಳನ್ನು ಏರಿಸುತ್ತಿರುವುದರ ಜೊತೆಗೆ ಇತ್ತೀಚೆಗೆ ಹಾಲಿನ ದರಗಳನ್ನು ಏರಿಸುತ್ತಿರುವುದರ ಜೊತೆಗೆ ಇತ್ತೀಚೆಗೆ ಹಾಲಿನ ದರಗಳನ್ನು ಏರಿಸುತ್ತಿರುವ ಕುರಿತು ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

3. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

4. **ಶ್ರೀ ರಾಮೋಜಿಗೌಡ** ಅವರು ಬೆಂಗಳೂರು ಪೂರ್ವ ಭಾಗದ ಕೆಲವು ಬಡಾವಣೆಗಳಿಗೆ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವುದರಿಂದ ಬಿ.ಬಿ.ಎಂ.ಪಿ ವತಿಯಿಂದ ಉಚಿತ ನೀರು ಟ್ಯಾಂಕರ್‌ಗಳನ್ನು ವ್ಯವಸ್ಥೆ ಮಾಡುವ ಹಾಗೂ ಕಾವೇರಿ ನೀರನ್ನು ಕಾಲ ಕಾಲಕ್ಕೆ ಬಿಡುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

5. **ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)** ಅವರು ಬೆಂಗಳೂರು ನಗರದಲ್ಲಿ ಪಾದಚಾರಿ ಮೇಲ್ಸೇತುವೆ(ಸ್ಕೈವಾಕ್)ಗಳನ್ನು ಖಾಸಗಿ ಏಜೆನ್ಸಿಗಳು ಸೂಕ್ತ ನಿರ್ವಹಣೆ ಮಾಡದೆ ಇರುವ ಕುರಿತು ಬಿ.ಬಿ.ಎಂ.ಪಿ. ಅಧಿಕಾರಿಗಳು ನಿಗಾವಹಿಸಿ ದುರಸ್ಥಿಗೊಳಿಸುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

6. **ಶ್ರೀ ಧನಂಜಯ ಸರ್ಜಿ** ಅವರು ಬೇಸಿಗೆ ಕಾಲದಲ್ಲಿ ಕಾಡ್ಗಿಚ್ಚು ಅವಘಡಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ತುರ್ತು ಮತ್ತು ಅಗ್ನಿಶಾಮಕ ಸೇವೆಗಳ ಇಲಾಖೆಯಲ್ಲಿನ ವಾಹನಗಳ ಕೊರತೆಯನ್ನು ಪರಿಹರಿಸುವ ಕುರಿತು ದಿನಾಂಕ:14.03.2025ರಂದು

ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

7. **ಶ್ರೀ ಜಗದೇವ್ ಗುತ್ತೇದಾರ್** ಅವರು ಗುಲ್ಬರ್ಗಾ ವಿಶ್ವವಿದ್ಯಾಲಯ ಬೋಧಕ ಬೋಧಕೇತರ ಹುದ್ದೆಗಳ ಭರ್ತಿ ಮಾಡುವ ಹಾಗೂ ಅಲ್ಲಿ ಸಿಬ್ಬಂದಿಗಳ ಪಿಂಚಣಿ ವೇತನ ಬಿಡುಗಡೆ ಮಾಡುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

8. **ಶ್ರೀ ಟಿ.ಎನ್. ಜವರಾಯಿ ಗೌಡ** ಅವರು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕರ್ಮಿಗಳ ಹೊಸ ನೇಮಕಾತಿ ಮಾಡಿಕೊಳ್ಳುವಲ್ಲಿ ಅನರ್ಹರನ್ನು ಅಕ್ರಮವಾಗಿ ಸೇರಿಸುತ್ತಿರುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

### 4. ವಿತ್ತೀಯ ಕಾರ್ಯಕಲಾಪ

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಧ್ಯಾಹ್ನ 12.15 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

2. ಶ್ರೀ ನಸೀರ್ ಅಹಮದ್

ಮಧ್ಯಾಹ್ನ 1.58 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಮಧ್ಯಾಹ್ನ 3.15 ಗಂಟೆಗೆ ಮಾನ್ಯ ಸಭಾಪತಿಯವರ(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

"2025ನೇ ಮಾರ್ಚ್ 03ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ ಎಂದು ದಿನಾಂಕ:04.03.2025ರಂದು ಶ್ರೀ ಐವನ್ ಡಿ'ಸೋಜಾ ಅವರು ಸೂಚಿಸಿದ ಪ್ರಸ್ತಾಪದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಸಿ.ಟಿ. ರವಿ
2. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
3. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
4. ಶ್ರೀ ಡಿ.ಎಸ್. ಅರುಣ್
5. ಶ್ರೀಮತಿ ಭಾರತಿ ಶೆಟ್ಟಿ
6. ಶ್ರೀ ಶರವಣ ಟಿ.ಎ.
7. ಶ್ರೀ ಅಡಗೂರ್ ಹೆಚ್. ವಿಶ್ವನಾಥ್
8. ಶ್ರೀ ಎಂ. ನಾಗರಾಜು
9. ಡಾ: ಧನಂಜಯ ಸರ್ಜಿ
10. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

11. ಶ್ರೀ ಪಿ.ಹೆಚ್. ಪೂಜಾರ್

12. ಶ್ರೀ ಶಶೀಲ್ ಜಿ. ನಮೋಶಿ

13. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

14. ಶ್ರೀ ಪುಟ್ಟಣ್ಣ

ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಿದರು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರು ನೀಡಿದ ಉತ್ತರವನ್ನು ಒಪ್ಪದೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಸಭಾತ್ಯಾಗ ಮಾಡಿದರು.

## 6. ವಂದನಾರ್ಪಣಾ ಪ್ರಸ್ತಾವ

ದಿನಾಂಕ:04.03.2025ರಂದು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುವ ಪ್ರಸ್ತಾವನೆಯನ್ನು ಸದನದ ಮತಕ್ಕೆ ಹಾಕಿ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

## 7. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:18.03.2025ರಂದು 2025ನೇ ಸಾಲಿನ **"ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ವಿಧೇಯಕ"**ವನ್ನು ಹಾಗೂ **"ಕರ್ನಾಟಕ ವೃತ್ತಿಗಳ ಕಸುಬುಗಳ ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ)**

**ವಿಧೇಯಕ"ವನ್ನು** ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## 8. ನಿರ್ಣಯ

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.**

ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು "ಸಂಸತ್ತು ಮಾಡಿರುವ ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 38)ರ ತಿದ್ದುಪಡಿ ಮತ್ತು ಸಾರ್ವಜನಿಕ ಋಣ ಅಧಿನಿಯಮ, 1944 (1944ರ ಕೇಂದ್ರ ಅಧಿನಿಯಮ 18)ರ ನಿರಸನದ ಪ್ರಸ್ತಾವನೆಗೆ, ಈ ಸದನದ ಯಾವುದೇ ಆಕ್ಷೇಪಣೆಯಿರುವುದಿಲ್ಲವೆಂದು ಭಾರತದ ಸಂವಿಧಾನದ 252ನೇ ಅನುಚ್ಛೇದದಡಿಯಲ್ಲಿ ಅಗತ್ಯಪಡಿಸಲಾದಂತೆ ಈ ಸದನವು ಸರ್ವಾನುಮತದಿಂದ ಈ ನಿರ್ಣಯವನ್ನು ಅಂಗೀಕರಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು.

ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ರಾತ್ರಿ 7.40 ಗಂಟೆಗೆ ಸದನವನ್ನು ಮುಂದೂಡಿ ದಿನಾಂಕ:19.03.2025ರಂದು ಬೆಳಿಗ್ಗೆ 10.30 ಗಂಟೆಗೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**

**ಕಾರ್ಯದರ್ಶಿ.**

*****

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೆಯ ಅಧಿವೇಶನ

## **ಲಘು ಪ್ರಕಟಣೆ ಭಾಗ–1**

## ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

## **ಬುಧವಾರ, ದಿನಾಂಕ:19.03.2025**

**(13)**

ಸದನವು ಬೆಳಗ್ಗೆ: 10.35 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### 1. ಪ್ರಶ್ನೋತ್ತರ

ದಿನಾಂಕ:19.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IIIರ 11ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

| | | |
|---|---|---|
| 1. | 151(1331) | |
| 2. | 152(1362) | |
| 3. | 153(1295) | |
| 4. | 154(1263) | ಶ್ರೀ ಗೋವಿಂದರಾಜು ಪರವಾಗಿ ಶ್ರೀ ಎಸ್.ಎಲ್. ಭೋಜೇಗೌಡ |
| 5. | 155(1354) | |
| 6. | 156(1348) | |
| 7. | 157(1343) | |
| 8. | 158(1299) | ವರ್ಗಾವಣೆ |
| 9. | 159(1292) | |

ಬೆಳಗ್ಗೆ 11.50 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

10. 160(1275) ವರ್ಗಾವಣೆ
11. 161(1303)
12. 162(1315)
13. 163(1376)
14. 164(1337) ಕಾಲಾವಕಾಶ
15. 165(1304)

**ದಿನಾಂಕ:05.03.2025ರ 2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 28(126)

**ದಿನಾಂಕ:12.03.2025ರ 6ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

1. 81(656)
2. 90(673)

**ದಿನಾಂಕ:14.03.2025ರ 8ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

1. 114(901)

ದಿನಾಂಕ:19.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IIIರ 11ನೇ ಪಟ್ಟಿಯ ಒಟ್ಟು 105 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ

1. ಶ್ರೀ ಸಿ.ಟಿ. ರವಿ ಅವರು ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಗೌರವಧನ ಹೆಚ್ಚಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

2. **ಶ್ರೀಮತಿ ಭಾರತಿ ಶೆಟ್ಟಿ ಹಾಗೂ ಶ್ರೀ ಟಿ.ಎನ್. ಜವರಾಯಿ ಗೌಡ** ಅವರುಗಳು ಅಕ್ರಮವಾಗಿ ಸಾರ್ವಜನಿಕರ ಮೊಬೈಲ್ ಕರೆಗಳ ವರದಿಯನ್ನು (ಸಿ.ಡಿ.ಆರ್) ಮಾರಾಟ ಮಾಡುತ್ತಿರುವ ಪ್ರಕರಣಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

3. **ಶ್ರೀ ರಾಮೋಜಿಗೌಡ** ಅವರು ಬೆಂಗಳೂರು ಮೆಟ್ರೋ ನಿಗಮದ (ಬಿ.ಎಂ.ಆರ್.ಸಿ.ಎಲ್) ನೇಮಕಾತಿಯಲ್ಲಿ ಕನ್ನಡ ವಿರೋಧಿ ಧೋರಣೆಯನ್ನು ನಿಗಮವು ತೋರುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

4. **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸುಮಾರು 20000ಕ್ಕೂ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಭೂ ರಹಿತವಾಗಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಂದಾಯ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

5. **ಶ್ರೀಮತಿ ಹೇಮಲತಾ ನಾಯಕ್** ಅವರು ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹರ್ಲಾಪುರ ಗ್ರಾಮದಲ್ಲಿ 35 ವರ್ಷದ ವಿಧವೆ ಮೇಲೆ ದೈಹಿಕ ಹಿಂಸೆ ನೀಡಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

6. **ಶ್ರೀ ಕೇಶವ ಪ್ರಸಾದ್ ಎಸ್** ಅವರು ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ನೆಪದಲ್ಲಿ ಪದೇ ಪದೇ ಪವರ್ ಕಟ್ ಮಾಡುತ್ತಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಇಂಧನ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

7. **ಶ್ರೀ ವೈ.ಎಂ. ಸತೀಶ್** ಅವರು ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಗಣಿ ಭಾದಿತ ರಾಮಗಢ ಗ್ರಾಮವನ್ನು ಸ್ಥಳಾಂತರ ಮಾಡದೆ ಅಲ್ಲಿಯೇ ಸೂಕ್ತ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

8. **ಶ್ರೀ ಮಂಜುನಾಥ್ ಭಂಡಾರಿ** ಅವರು ರಾಜ್ಯ ಹೆದ್ದಾರಿ ಮಾದರಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳಿಗೆ ಪರಿಮಿತಿಯನ್ನು ಪರಿಷ್ಕರಿಸಿ ನಿಗದಿಪಡಿಸಿರುವುದರಿಂದ ಗ್ರಾಮೀಣ ಭಾಗದಲ್ಲಿ ಇ-ಸ್ವತ್ತು ನೀಡುವಲ್ಲಿ ಆಗುತ್ತಿರುವ ತೊಂದರೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

9. **ಶ್ರೀ ಎಂ. ನಾಗರಾಜು** ಅವರು ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಕಳಪೆ ಕಾಮಗಾರಿ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

10. **ಶ್ರೀಮತಿ ಬಲ್ಕೀಸ್ ಬಾನು** ಅವರು ರಾಜ್ಯದ ವಿವಿಧ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಗುತ್ತಿಗೆ ಹಾಗೂ ಕನ್ಸಲ್ಟೆಂಟ್

ಸಹಾಯಕ ಪ್ರಾಧ್ಯಾಪಕರುಗಳ ಖಾಯಂಗೊಳಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

11. **ಶ್ರೀ ಎನ್. ರವಿಕುಮಾರ್ ಹಾಗೂ ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರುಗಳು ಕಲಬುರಗಿ ಜಿಲ್ಲೆಯ ರೈತರಿಗೆ ತೊಗರಿ ಬೆಳೆಹಾನಿ ಹಾಗೂ ಅದರ ಬೆಂಬಲ ಬೆಲೆ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕೃಷಿ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

12. **ಶ್ರೀ ದಿನೇಶ್ ಗೂಳಿಗೌಡ** ಅವರು ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ 275ರ ಕಾಮಗಾರಿಗೆ ಅಕ್ರಮ ಜಲ್ಲಿ ಕಲ್ಲುಗಳನ್ನು ಪೂರೈಸಿ ರಾಜಧನವನ್ನು ನಿಯಮಿತವಾಗಿ ಪಾವತಿಸದೆ ವಂಚಿಸಿರುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

13. **ಶ್ರೀ ಎಸ್.ಎಲ್. ಭೋಜೇಗೌಡ** ಅವರು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ವಿ.ಎಂ.ಎಸ್. ಆ್ಯಪ್‌ನ್ನು ಅಳವಡಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

14. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರು ಬೀಳಗಿ ತಾಲ್ಲೂಕಿನ ರೈತರಿಗೆ ಹಿಡಕಲ್ ಜಲಾಶಯದಿಂದ ಕಾಲುವೆಗೆ ನೀರು ಹರಿಸುವ ಮೂಲಕ ರೈತಾಪಿ ವರ್ಗಕ್ಕೆ ಅನುಕೂಲ ಮಾಡಿಕೊಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

15. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ** ಅವರು ರಾಜ್ಯದ ಪ್ರವಾಸಿ ತಾಣಗಳಲ್ಲಿ ಅಕ್ರಮವಾಗಿ ತಲೆ ಎತ್ತಿರುವ ಹೋಂ ಸ್ಟೇಗಳ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

16. **ಶ್ರೀ ಪಿ.ಹೆಚ್. ಪೂಜಾರ್** ಅವರು ಬಾಗಲಕೋಟೆ ಜಿಲ್ಲೆಯ ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

17. **ಶ್ರೀ ಚಿದಾನಂದ್ ಎಂ. ಗೌಡ** ಅವರು ರಾಜ್ಯದಲ್ಲಿರುವ ಅಕ್ರಮ ಡ್ರಗ್ಸ್ ಜಾಲವನ್ನು ಸಂಪೂರ್ಣವಾಗಿ ಮಟ್ಟಹಾಕುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

18. **ಶ್ರೀ ಪ್ರದೀಪ್ ಶೆಟ್ಟರ್** ಅವರು ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕಿನ ಮಾಸೂರು ಗ್ರಾಮದ ಯುವತಿಯ ಸಾವಿಗೆ ತಪ್ಪಿತಸ್ಥರ ಮೇಲೆ ಸೂಕ್ತ ಶಿಕ್ಷೆಯನ್ನು ನೀಡುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ಕುಶಾಲಪ್ಪ ಎಂ.ಪಿ(ಸುಜಾ)** ಅವರು ಮಡಿಕೇರಿಯಲ್ಲಿ 18 ವರ್ಷಗಳ ಹಿಂದೆ ಆರಂಭವಾದ ಕನ್ನಡ ಸಮುಚ್ಚಯ ಭವನ ನಿರ್ಮಾಣದ ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಲೋಕಾರ್ಪಣೆಗೊಳಿಸುವ ಕುರಿತು ದಿನಾಂಕ:04.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.
2. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಸತಿ ಯೋಜನೆಗಳಿಗೆ ಬಿಡುಗಡೆಯಾಗಬೇಕಾದ ಕಂತಿನ ಹಣವು ಬಿಡುಗಡೆಯಾಗದೆ ಬಡ ಜನರು ಅನುಭವಿಸುತ್ತಿರುವ ತೊಂದರೆ ಕುರಿತು ದಿನಾಂಕ:12.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.
3. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗ ಜಿಲ್ಲೆಯಲ್ಲಿ ಇಸ್ಪೀಟ್ ದಂಧೆ, ಜೂಜಾಟ, ಬಡ್ಡಿ ದಂಧೆ, ಅಕ್ರಮ ಮರಳುಗಾರಿಕೆ ಹಾಗೂ ಅರಣ್ಯ ಭೂಮಿ ಒತ್ತುವರಿ ಇತ್ಯಾದಿ ಅಕ್ರಮಗಳು ನಡೆಯುತ್ತಿರುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.
4. **ಶ್ರೀ ಕೇಶವ ಪ್ರಸಾದ್ ಎಸ್** ಅವರು ಆಲಮಟ್ಟಿ ಡ್ಯಾಂನ ಯೋಜನೆ ಪೂರ್ಣಗೊಳಿಸಲು ಅಗತ್ಯ ಅನುದಾನವನ್ನು ಒದಗಿಸದೇ ಇರುವುದರಿಂದ 3ನೇ ಹಂತದ ಯೋಜನೆ ಪೂರ್ಣಗೊಳಿಸಲು ವಿಳಂಬ ಹಾಗೂ ಕಾನೂನು ತೊಡಕು ಉಂಟಾಗುತ್ತಿರುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.
5. **ಶ್ರೀ ಎನ್. ರವಿಕುಮಾರ್** ಅವರು ಶಿಥಿಲಾವಸ್ಥೆಯಲ್ಲಿರುವ ದಾವಣಗೆರೆ ಬೆಟಗೇರಿ ಜಿಲ್ಲಾ ಆಸ್ಪತ್ರೆಯ ನವೀಕರಣ ಪ್ರಕ್ರಿಯೆ ಕೂಡಲೇ ಆರಂಭಿಸುವ ಕುರಿತು ದಿನಾಂಕ:14.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

6. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕಲಬುರಗಿ ನಗರದ ವಿವಿಧ ಸ್ಥಳಗಳಲ್ಲಿ ನೀರು ಪೂರೈಸುವ ಯೋಜನೆಯ ಕಾಮಗಾರಿಯು ಪೂರ್ಣಗೊಳಿಸದೆ ಸಾರ್ವಜನಿಕರ ಮೂಲಭೂತ ಸೌಲಭ್ಯಕ್ಕೆ ಅನಾನುಕೂಲ ಉಂಟು ಮಾಡುತ್ತಿರುವ ಕುರಿತು ದಿನಾಂಕ:17.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

7. **ಶ್ರೀ ಕೆ.ಎಸ್. ನವೀನ್** ಅವರು ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬಿ–ಖಾತಾ ಆಸ್ತಿಗಳಿಗೆ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಸಕ್ರಮ ಮಾಡುವ ಕುರಿತು ದಿನಾಂಕ:18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

8. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ ಅವರು ಉತ್ತರ ಕನ್ನಡ ಜಿಲ್ಲೆ, ಮುಂಡಗೋಡು ತಾಲ್ಲೂಕಿನ ಮೈನಳ್ಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಕುರಿತು ದಿನಾಂಕ: 18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

9. **ಶ್ರೀ ಶರವಣ ಟಿ.ಎ** ಅವರು ಬೆಂಗಳೂರು ನಗರ ಜಿಲ್ಲೆಯ ಕೆ.ಆರ್.ಪುರಂ ತಾಲ್ಲೂಕು ವರ್ತೂರು ಹೋಬಳಿಯ ಕಾಡುಬೀಸನಹಳ್ಳಿ ಗ್ರಾಮದ ಸರ್ವೆ ನಂ.24ರ ಜಾಗದಲ್ಲಿರುವ ಮನೆಗಳನ್ನು ಕೆ.ಐ.ಎ.ಡಿ.ಬಿ ಅಧಿಕಾರಿಗಳು ತೆರವು ಕಾರ್ಯಾಚರಣೆ ಮಾಡಿರುವ ಕುರಿತು ದಿನಾಂಕ:18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

## 4. ಸಭೆಯ ಮುಂದಿಡಲಾಗುವ ಕಾಗದ ಪತ್ರ

ಮಾನ್ಯ ಸಭಾನಾಯಕರು ಹಾಗೂ ಸಂಬಂಧಪಟ್ಟ ಮಾನ್ಯ ಸಚಿವರುಗಳು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೂರನೇ ಪಟ್ಟಿಯನ್ನು ಸದನದಲ್ಲಿ ಮಂಡಿಸಿದರು.

**5. ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ಶ್ರೀ ಎಸ್.ವ್ಹಿ. ಸಂಕನೂರ (ಸದಸ್ಯರು, ವಿಶೇಷ ಜಂಟಿ ಸದನ ಸಮಿತಿ) ಅವರು:-**

ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯ ಅವಧಿಯನ್ನು ದಿನಾಂಕ:14.01.2025ರಿಂದ 13.07.2025ರವರೆಗೆ ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವವನ್ನು ಮಂಡಿಸಿದರು.

ಸದನದ ಸಹಮತಿ ಪಡೆಯುವ ಪ್ರಸ್ತಾವವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**6. ವಿತ್ತೀಯ ಕಾರ್ಯಕಲಾಪ**

2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

3. ಶ್ರೀ ಎಸ್.ಎಲ್. ಭೋಜೇಗೌಡ

4. ಶ್ರೀ ಸಿ.ಟಿ. ರವಿ

**7. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ**

ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

## 8. ವರದಿಯನ್ನೊಪ್ಪಿಸುವುದು

**ಶ್ರೀ ಎಂ. ನಾಗರಾಜು, (ಅಧ್ಯಕ್ಷರು, ಹಕ್ಕುಬಾಧ್ಯತಾ ಸಮಿತಿ)** ಅವರು ವಿಧಾನ ಪರಿಷತ್ತಿನ 2024–25ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 103ನೇ ವರದಿಯನ್ನು ಒಪ್ಪಿಸಿದರು.

## 9. ಸಭಾಪತಿಯವರ ತೀರ್ಪು

ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣನವರು ದಿನಾಂಕ:11.03.2025ರಂದು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕೊಡಗು ವಿಶ್ವವಿದ್ಯಾಲಯ ಸೇರಿದಂತೆ ಹಿಂದಿನ ಸರ್ಕಾರ ಸ್ಥಾಪಿಸಲಾಗಿದ್ದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಿರುವುದನ್ನು ಕೈಬಿಡಬೇಕೆಂದು ಹಾಗೂ ವಿದ್ಯಾರ್ಥಿಗಳ ಮತ್ತು ನಿರುದ್ಯೋಗಿಗಳ ದೃಷ್ಟಿಯಿಂದ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಒದಗಿಸುವ ಕುರಿತು 72ರಡಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಿ, ಈ ಕೆಳಕಂಡ ಮಾತುಗಳನ್ನು ಉಲ್ಲೇಖಿಸಿರುತ್ತಾರೆ.

1. "ವಿಶ್ವವಿದ್ಯಾಲಯಕ್ಕೆ ಉಪ ಕುಲಪತಿಗಳನ್ನು ನೇಮಕ ಮಾಡಿದ್ದರು ಅದು ಪೇಮೆಂಟ್ ಖೋಟಾ ಅಥವಾ ಫ್ರೀ ಖೋಟಾನಾ"

2. "ಈ ದೇಶದ ಎಲ್ಲಾ ರಾಜ್ಯಗಳಲ್ಲಿ ರಾಜಕೀಯ ಸಂಧ್ಯಾ ಕಾಲದಲ್ಲಿ ಇರುವಂತಹವರನ್ನು ತಂದು ರಾಜ್ಯಪಾಲರನ್ನಾಗಿ ಮಾಡುತ್ತಾರೆ. ಅದು ಅವರಿಗೆ ರಾಜಕೀಯದ ಸಂಧ್ಯಾ ಕಾಲ ಆಗಿರುತ್ತದೆ. ಅವರನ್ನು ಹೋಗಿ ಒಬ್ಬ ವಿ.ಸಿ.ಯವರು ಭೇಟಿ ಮಾಡಲಿಕ್ಕೆ ಆಗುತ್ತದೆಯೇ? ವಿ.ಸಿ. ನೇಮಕಾತಿ ಅಧಿಕಾರವನ್ನು ಅವರಿಗೆ ಕೊಟ್ಟರೆ ನಿಮ್ಮ ರಾಜ್ಯಗಳಲ್ಲಿ ಏನು ಅಧಿಕಾರ ಇರುತ್ತದೆ? ಮುಖ್ಯಮಂತ್ರಿಗಳಾದವರಿಗೆ ಏನು ಅಧಿಕಾರ ಇರುತ್ತದೆ. ಮಂತ್ರಿಗಳಾದವರಿಗೆ ಏನು ಅಧಿಕಾರ ಇದೆ? ರಾಜಕೀಯ ಸಂಧ್ಯಾ ಕಾಲದಲ್ಲಿ ಇರುವವರಿಗೆ ಏನು ಗೊತ್ತಿರುತ್ತದೆ ಹಾಗೂ ಅವರಿಗೆ ಏನು knowledge ಇರುತ್ತದೆ? ಇದರಿಂದ ಏನು ವಿಶ್ವವಿದ್ಯಾಲಯಗಳು run ಆಗುತ್ತದೆ"

3. "ಸೂಟ್‌ಕೇಸ್ ತೆಗೆದುಕೊಂಡು ಬರಲಿಲ್ಲವೆಂದರೆ ಸಹಿ ಹಾಕುವುದಿಲ್ಲವೆಂದು ಹೇಳುತ್ತಾರೆ".

ಈ ಮೇಲ್ಕಂಡ ಮಾತುಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 307ರಂತೆ ಸದಸ್ಯರು ಸಭಾಪತಿಯವರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಉತ್ತರ ನೀಡುವ ಉದ್ದೇಶಕ್ಕಾಗಿ ಪೂರ್ವ ಮಾಹಿತಿ ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾರೇ ವ್ಯಕ್ತಿಯ ವಿರುದ್ಧ ಅಪಮಾನಕರವಾದ ಅಥವಾ ಅಪರಾಧದ ಸ್ವರೂಪದ ಯಾವ ಆರೋಪವನ್ನು ಮಾಡತಕ್ಕದ್ದಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿರುವ ಹಿನ್ನಲೆಯಲ್ಲಿ ಹಾಗೂ ನಿಯಮ 306 (10)ರಂಗೆ ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲದ್ದಾಗಿರುತ್ತದೆ. ಮಾನ್ಯ ಶಾಸಕರು ಉಲ್ಲೇಖಿಸಿರುವ ಮೇಲ್ಕಂಡ ಮಾತುಗಳು ಸದನದ ಮರ್ಯಾದೆಗೆ ತಕ್ಕುದಲ್ಲವಾದ ಪದಗಳಾಗಿರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 333ರ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಧ್ಯಾಹ್ನ 2.00 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 3.00 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಪ್ರಕಟಿಸಿದರು.

ಮಧ್ಯಾಹ್ನ 3.28 ಗಂಟೆಗೆ ಮಾನ್ಯ ಸಭಾಪತಿಯವರ(**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ, ಅವರು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ನಾಮನಿರ್ದೇಶನ ಮಾಡಿಲ್ಲದಿರುವ ಕುರಿತು ಪ್ರಸ್ತಾಪಿಸಿದರು.

**10. ಗಮನ ಸೆಳೆಯುವ ಸೂಚನೆ**

1. **ಶ್ರೀಮತಿ ಭಾರತಿ ಶೆಟ್ಟಿ** ಅವರು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ನಾಗರಹೊಳೆ ಶಾಲೆಗೆ ಮೂಲಭೂತ ಸೌಕರ್ಯ ಒದಗಿಸುವುದು ಹಾಗೂ ಸದರಿ ಬುಡಕಟ್ಟು ಜನಾಂಗದ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದರು.

   ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು.

   ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

   ಮಾನ್ಯ ಸಭಾನಾಯಕರು ಸ್ಪಷ್ಟೀಕರಣ ನೀಡಿದರು.

2. **ಶ್ರೀ ಸಿ.ಟಿ. ರವಿ** ಅವರು ಪತಿ-ಪತ್ನಿ ಪ್ರಕರಣದಡಿ ಹೆಡ್ ಕಾನ್‌ಸ್ಟೇಬಲ್‌ಗಳ ವರ್ಗಾವಣೆಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಲಾದ ಮಾರ್ಗಸೂಚಿಯಲ್ಲಿರುವ ಏಳು ವರ್ಷಗಳ ಸೇವೆಯನ್ನು ಪೂರೈಸಿರಬೇಕೆಂಬ ಷರತ್ತನ್ನು ಸಡಿಲಿಕೆ ಮಾಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಹೆಡ್ ಕಾನ್‌ಸ್ಟೇಬಲ್‌ಗಳ ವರ್ಗಾವಣೆಗೆ ಅವಕಾಶ ಕಲ್ಪಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆದರು.

   ಮಾನ್ಯ ಗೃಹ ಸಚಿವರು ಉತ್ತರಿಸಿದರು.

   ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

   1. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

2. ಶ್ರೀ ಸಲೀಂ ಅಹಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು

ಮಾನ್ಯ ಗೃಹ ಸಚಿವರು ಸ್ಪಷ್ಟೀಕರಣ ನೀಡಿದರು.

## 11. ನಿಯಮ 330ರ ಮೇರೆಗೆ

1. **ಶ್ರೀ ರಾಮೋಜಿಗೌಡ, ಶ್ರೀ ಎಸ್.ವಿ. ಸಂಕನೂರ ಮತ್ತು ಪುಟ್ಟಣ್ಣ** ಅವರುಗಳು ಉನ್ನತ ಶಿಕ್ಷಣ ಪಡೆದು ಪ್ರಾಥಮಿಕ ಶಾಲೆಗಳಲ್ಲಿ ನಿವೃತ್ತಿಯ ಅಂಚಿನಲ್ಲಿರುವ 58 ಸಾವಿರ ಶಿಕ್ಷಕರುಗಳಿಗೆ ಸೇವಾ ಹಿರಿತನದ ಮೇರೆಗೆ ನಿಗದಿತ ಅವಧಿಯಲ್ಲಿ ಮುಂಬಡ್ತಿ ನೀಡುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ರಾಮೋಜಿಗೌಡ
2. ಶ್ರೀ ಪುಟ್ಟಣ್ಣ
3. ಶ್ರೀ ಎಸ್.ವ್ಹಿ. ಸಂಕನೂರ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

2. **ಶ್ರೀಯುತರುಗಳಾದ ಐವನ್ ಡಿ'ಸೋಜಾ, ಮಂಜುನಾಥ್ ಭಂಡಾರಿ, ಬಸನಗೌಡ ಬಾದರ್ಲಿ, ಎಂ. ನಾಗರಾಜು ಹಾಗೂ ಡಾ: ಚಂದ್ರಶೇಖರ ಬಸವರಾಜ ಪಾಟೀಲ** ಅವರುಗಳು ದಕ್ಷಿಣ ಕನ್ನಡ ಮೂಲ್ಕಿ ತಾಲ್ಲೂಕಿನ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳ 1091 ಎಕರೆ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ.ಯ ಕೈಗಾರಿಕಾ ವಲಯ ನಿರ್ಮಾಣಕ್ಕಾಗಿ ಸರ್ಕಾರ ಹೊರಡಿಸಿರುವ 28(1) ಅಧಿಸೂಚನೆಯನ್ನು ರದ್ದುಪಡಿಸುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಐವನ್ ಡಿ'ಸೋಜಾ
2. ಶ್ರೀ ಮಂಜುನಾಥ್ ಭಂಡಾರಿ

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

3. **ಶ್ರೀ ಕೆ.ಎಸ್. ನವೀನ್ ಅವರು** ರಾಜ್ಯದಲ್ಲಿ ಗೌಚರ್, MPS ಮತ್ತು POMPE ಕಾಯಿಲೆಗಳಂತಹ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳಿಗೆ ಎಂಜೈಮ್ ರೀಪ್ಲೇಸ್‌ಮೆಂಟ್ ಥೆರಪಿ (ERT) ಚಿಕಿತ್ಸೆಗೆ ರಾಷ್ಟ್ರೀಯ ಅಪರೂಪದ ಕಾಯಿಲೆಗಳ ನೀತಿ (NPRD) ಅಡಿಯಲ್ಲಿ ಹೆಚ್ಚುವರಿ ಆರ್ಥಿಕ ಸಹಾಯ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೆ.ಎಸ್. ನವೀನ್
2. ಡಾ: ಧನಂಜಯ ಸರ್ಜಿ

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಉತ್ತರಿಸಿದರು.

4. **ಶ್ರೀಯುತರುಗಳಾದ ಹೇಮಲತಾ ನಾಯಕ್, ಬಸನಗೌಡ ಬಾದರ್ಲಿ, ಎ. ವಸಂತ ಕುಮಾರ್, ಪುಟ್ಟಣ್ಣ, ಎಂ. ನಾಗರಾಜು, ಡಾ: ಚಂದ್ರಶೇಖರ ಬಸವರಾಜ ಪಾಟೀಲ, ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) ಹಾಗೂ ಜಗದೇವ್ ಗುತ್ತೇದಾರ್** ಅವರುಗಳು ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಬಿಎಸ್‌ಪಿಎಲ್ ಬಾಲ್ಡೋಟಾ ಕಂಪನಿಗೆ ಉಕ್ಕು ಉತ್ಪಾದನಾ ಕಾರ್ಖಾನೆ ನಡೆಸಲು ಸರ್ಕಾರವು ಅನುಮತಿಸಿರುವುದರಿಂದ ಅರಣ್ಯ ನಾಶ, ಕೃಷಿ ಬೆಳವಣಿಗೆ ಕುಂಠಿತ ಹಾಗೂ ಜನ–ಜಾನುವಾರಗಳ

ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀಮತಿ ಹೇಮಲತಾ ನಾಯಕ್
2. ಎ. ವಸಂತ ಕುಮಾರ್

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಉತ್ತರಿಸಿದರು.

5. **ಶ್ರೀಯುತರುಗಳಾದ ಎಸ್.ವ್ಹಿ. ಸಂಕನೂರ, ಎಸ್.ಎಲ್. ಭೋಜೇಗೌಡ, ಪುಟ್ಟಣ್ಣ, ಶಶೀಲ್ ಜಿ. ನಮೋಶಿ ಹಾಗೂ ಡಾ: ಧನಂಜಯ ಸರ್ಜಿ** ಅವರುಗಳು ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ 10, 15, 20, 25 ಮತ್ತು 30 ವರ್ಷಗಳ ಸೇವೆ ಸಲ್ಲಿಸಿ, ಪದೋನ್ನತಿ ಹೊಂದುವ ಸಂದರ್ಭದಲ್ಲಿ ಆಗುತ್ತಿರುವ ಅನ್ಯಾಯದ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಎಸ್.ವ್ಹಿ. ಸಂಕನೂರ
2. ಶ್ರೀ ಶಶೀಲ್ ಜಿ. ನಮೋಶಿ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಪುಟ್ಟಣ್ಣ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

6. **ಶ್ರೀ ಎಂ.ಎಲ್. ಅನಿಲ್ ಕುಮಾರ್** ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್(ನಿ)ರಲ್ಲಿ 2017–

2018 ರಿಂದ 2023–2024ರ ಅವಧಿಯಲ್ಲಿ ನಡೆದಿರುವ ಅವ್ಯವಹಾರ ಮತ್ತು ಹಣ ದುರುಪಯೋಗ ಪ್ರಕರಣಗಳನ್ನು ಲೋಕಾಯುಕ್ತದಿಂದ ತನಿಖೆ ನಡೆಸಿ ಬ್ಯಾಂಕಿನ ಆರ್ಥಿಕ ಸುಸ್ಥಿತಿಗೆ ಕ್ರಮವಹಿಸುವ ಕುರಿತು ಪ್ರಸ್ತಾಪಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿದರು.

ಮಾನ್ಯ ಸಹಕಾರ ಸಚಿವರು ಉತ್ತರಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

5. ಶ್ರೀ ಎಸ್.ವ್ಹಿ. ಸಂಕನೂರ
6. ಶ್ರೀ ಶಶೀಲ್ ಜಿ. ನಮೋಶಿ
7. ಶ್ರೀ ಎಸ್.ಎಲ್. ಭೋಜೇಗೌಡ
8. ಶ್ರೀ ಪುಟ್ಟಣ್ಣ

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಉತ್ತರಿಸಿದರು.

7. **ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್, ಮಾನ್ಯ ಶಾಸಕರುಗಳಾದ ಶ್ರೀ ಶಶೀಲ್ ಜಿ. ನಮೋಶಿ, ಡಾ: ತಳವಾರ್ ಸಾಬಣ್ಣ, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಶ್ರೀ ವೈ.ಎಂ. ಸತೀಶ್** ಅವರುಗಳು ರಾಜ್ಯದಲ್ಲಿ 2024–25ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳ ಅತಿವೃಷ್ಠಿ, ಅನಾವೃಷ್ಠಿ ಮತ್ತು ನೆಟೆ ರೋಗದಿಂದ ತೊಗರಿ ಬೆಳೆ ನಾಶವಾಗಿದ್ದು, ರೈತರು ಸಂಕಷ್ಟಕ್ಕೀಡಾಗಿರುವುದರಿಂದ ತೊಗರಿ ಬೆಳೆಗಾರರಿಗೆ ಬೆಂಬಲ ಬೆಲೆ ನಿಗದಿಪಡಿಸಿ ಕೂಡಲೇ ಪರಿಹಾರ ಒದಗಿಸುವ ಕುರಿತು ಪ್ರಸ್ತಾಪಿಸಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಶಶೀಲ್ ಜಿ. ನಮೋಶಿ
2. ಡಾ: ತಳವಾರ್ ಸಾಬಣ್ಣ
3. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
4. ಶ್ರೀ ತಿಪ್ಪಣ್ಣಪ್ಪ ಕಮಕನೂರ

ಮಾನ್ಯ ಕೃಷಿ ಸಚಿವರು ಉತ್ತರಿಸಿದರು.

ಸಂಜೆ 6.10 ಗಂಟೆಯಲ್ಲಿ ಶ್ರೀ ಮಂಜುನಾಥ್ ಭಂಡಾರಿ ಅವರು ಮಾನ್ಯ ಸಭಾಪತಿಯವರ ಪೀಠದಲ್ಲಿ ಆಸೀನರಾದರು.

## ವಿತ್ತೀಯ ಕಾರ್ಯಕಲಾಪ

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

2. ಶ್ರೀ ಸಿ.ಟಿ. ರವಿ
3. ಶ್ರೀ ಎ. ವಸಂತ ಕುಮಾರ್
4. ಶ್ರೀ ವೈ.ಎಂ. ಸತೀಶ್

ಸದನವನ್ನು ಸಂಜೆ 7.32 ಗಂಟೆಯಲ್ಲಿ ಮುಂದೂಡಿ ದಿನಾಂಕ:20.03.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀ ಮಂಜುನಾಥ್ ಭಂಡಾರಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**
**ಕಾರ್ಯದರ್ಶಿ.**

*****

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

**ಲಘು ಪ್ರಕಟಣೆ ಭಾಗ–1**

ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಗುರುವಾರ, ದಿನಾಂಕ:20.03.2025**

**(14)**

ಸದನವು ಬೆಳಗ್ಗೆ: 10.50 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 1. ಪ್ರಶ್ನೋತ್ತರ

ದಿನಾಂಕ:20.03.2025ರಂದು ಸದನದಲ್ಲಿ ಉತ್ತರಿಸುವ ಸಮೂಹ–IVರ 12ನೇ ಪಟ್ಟಿಯ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಾಯಿತು.

1. 166(1474) ವರ್ಗಾವಣೆ
2. 167(1387)
3. 168(1394)
4. 169(1426)

ಬೆಳಗ್ಗೆ 11.10 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (**ಶ್ರೀ ಎಂ.ಕೆ. ಪ್ರಾಣೇಶ್**) ಸಭಾಪತಿ ಪೀಠದಲ್ಲಿ ಆಸೀನರಾದರು.

5. 170(1460)
6. 171(1489)
7. 172(1414) ವರ್ಗಾವಣೆ
8. 173(1499)
9. 174(1448)

ಮಧ್ಯಾಹ್ನ 12.05 ಗಂಟೆಗೆ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪೀಠದಲ್ಲಿ ಆಸೀನರಾದರು.

10. 175(1480)
11. 176(1494) ವರ್ಗಾವಣೆ
12. 177(1420)
13. 178(1423)
14. 179(1427) ಕಾಲಾವಕಾಶ
15. 180(1429)

**ದಿನಾಂಕ:13.03.2025ರ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು**

2. 92(851)
3. 93(835)

**ದಿನಾಂಕ:18.03.2025ರ 10ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ**

3. 137(1232)

ದಿನಾಂಕ:20.03.2025ರಂದು ಲಿಖಿತ ಮೂಲಕ ಉತ್ತರಿಸುವ ಸಮೂಹ–IVರ 12ನೇ ಪಟ್ಟಿಯ ಒಟ್ಟು 107 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

## 2. ಶೂನ್ಯವೇಳೆ

ಈ ಕೆಳಕಂಡ ಶೂನ್ಯವೇಳೆ ಪ್ರಸ್ತಾವನೆಗಳನ್ನು ಮಾನ್ಯ ಸಭಾಪತಿಯವರು ಮಂಡಿಸಿದರು ಹಾಗೂ ಮಾನ್ಯ ಸಭಾನಾಯಕರು ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸುವುದಾಗಿ ತಿಳಿಸಿದರು.

1. **ಶ್ರೀ ಐವನ್ ಡಿ'ಸೋಜಾ** ಅವರು ಮಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರಗಳ ಹಾಗೂ ಪೀಠಗಳಿಗೆ ಅನುದಾನದ ಕೊರತೆ ಕುರಿತು.

2. **ಶ್ರೀಮತಿ ಭಾರತಿ ಶೆಟ್ಟಿ ಹಾಗೂ ಶ್ರೀ ಟಿ.ಎನ್. ಜವರಾಯಿ ಗೌಡ** ಅವರುಗಳು ಅಕ್ರಮವಾಗಿ ಸಾರ್ವಜನಿಕರ ಮೊಬೈಲ್ ಕರೆಗಳ ವರದಿಯ (ಸಿ.ಡಿ.ಆರ್) ಮಾರಾಟ ಮಾಡುತ್ತಿರುವ ಪ್ರಕರಣಗಳ ಕುರಿತು.

3. **ಶ್ರೀ ಸಿ.ಟಿ. ರವಿ** ಅವರು ರಾಜ್ಯದಾದ್ಯಂತ ಇರುವ ವಿಕಲಚೇತನರಿಗೆ ಅವರ ಜೀವನೋಪಾಯಕ್ಕಾಗಿ ಕನಿಷ್ಠ ವೇತನವನ್ನು ನೀಡುವ ಕುರಿತು.

4. **ಶ್ರೀ ಡಿ.ಎಸ್. ಅರುಣ್** ಅವರು ಶಿವಮೊಗ್ಗದ ಜನೌಷಧಿ ಕೇಂದ್ರಗಳಲ್ಲಿ ಇತರೆ ಔಷಧಿ ಮತ್ತು ಮಾತ್ರೆಗಳನ್ನು ಮಾರಾಟ ಮಾಡುತ್ತಿರುವ ಕುರಿತು.

5. **ಶ್ರೀ ಹೆಚ್.ಎಸ್. ಗೋಪಿನಾಥ್** ಅವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿ.ಡಿ.ಎ) ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳ ಮಾಲೀಕರ ವಿರೋಧ ಕುರಿತು.

6. **ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)** ಅವರು ಕೊಡಗು, ಮಡಿಕೇರಿ ಸೇರಿದಂತೆ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವ ಕುರಿತು.

7. **ಶ್ರೀ ಟಿ.ಎನ್. ಜವರಾಯಿ ಗೌಡ** ಅವರು ಬೆಂಗಳೂರಿನ ಕೆಂಗೇರಿ ಉಪನಗರದ ಹೊಯ್ಸಳ ವೃತ್ತದಿಂದ ಕೊಮ್ಮಘಟ್ಟ ರಸ್ತೆ ಜಂಕ್ಷನ್‌ವರೆಗೆ ಟೆಂಡರ್‌ಶ್ಯೂರ್‌ನಡಿ ನಡೆಯುತ್ತಿರುವ ಕಾಮಗಾರಿ ವಿಳಂಬದಿಂದ ಅಲ್ಲಿಯ ನಿವಾಸಿಗಳ ಅಕ್ರೋಶದ ಕುರಿತು.

8. **ಶ್ರೀ ಎಂ. ನಾಗರಾಜು** ಅವರು ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಕಲಾವಿದರಿಗೆ ನೀಡಬೇಕಾದ ಸಂಭಾವನೆ ಬಾಕಿ ಇರುವ ಕುರಿತು.

9. **ಶ್ರೀ ಎಂ. ನಾಗರಾಜು** ಅವರು ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಕಳಪೆ ಕಾಮಗಾರಿ ಕುರಿತು.

10. **ಶ್ರೀ ಮಂಜುನಾಥ್ ಭಂಡಾರಿ** ಅವರು ಮಂಗಳೂರು ಸೇರಿದಂತೆ ಇತರೆ ನಗರಗಳಲ್ಲಿನ ಕೃಷಿ ಭೂಮಿ ನೊಂದಣಿ ಸ್ಥಗಿತಗೊಂಡಿದ್ದು, ಜನರ ಅನುಕೂಲಕ್ಕಾಗಿ ಇ–ಆಸ್ತಿ ಸಾಫ್ಟ್‌ವೇರ್‌ಗೆ ಸಿಟಿ ಸರ್ವೆ ಇಂಟಿಗ್ರೇಟ್ ಮಾಡುವ ಕುರಿತು.

11. **ಶ್ರೀ ಶಶೀಲ್ ಜಿ. ನಮೋಶಿ** ಅವರು ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಮರುಪರೀಕ್ಷೆ ನಡೆಸುವ ಕುರಿತು.

12. **ಶ್ರೀಮತಿ ಹೇಮಲತಾ ನಾಯಕ್** ಅವರು ಯಲಬುರ್ಗಾ ಕ್ಷೇತ್ರದ ಮಂಗಳೂರಿನ ಸರ್ಕಾರಿ ಬಾಲಕಿಯರ ಶಾಲೆಯ ಆವರಣ ಕುಡುಕರ ಹಾವಳಿಯಿಂದ ಮೋಜು ಮಸ್ತಿ ತಾಣವಾಗಿರುವ ಕುರಿತು.

13. **ಶ್ರೀ ಸಿ.ಎನ್. ಮಂಜೇಗೌಡ** ಅವರು ವಿದ್ಯುತ್ ಪ್ರಸರಣ ಮತ್ತು ಸರಬರಾಜು ಸಂಸ್ಥೆಗಳ ಸಿಬ್ಬಂದಿಯ ಪಿಂಚಣಿ, ಗ್ರಾಚ್ಯುಟಿಗೆ ಸರ್ಕಾರ ನೀಡಬೇಕಾದ ಪಾಲಿನ ಮೊತ್ತವನ್ನು ಗ್ರಾಹಕರಿಂದಲೇ ವಸೂಲಿ ಆಗುತ್ತಿರುವ ಕುರಿತು.

14. **ಶ್ರೀ ಎಸ್.ವ್ಹಿ. ಸಂಕನೂರ** ಅವರು ರಾಜ್ಯದಲ್ಲಿ 1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲಾ ಮತ್ತು ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಡೆಯುತ್ತಿರುವ ಪ್ರತಿಭಟನೆ ಕುರಿತು.

## 3. ಶೂನ್ಯವೇಳೆ ಪ್ರಸ್ತಾವನೆಗಳಿಗೆ ಉತ್ತರ

1. **ಶ್ರೀ ತಿಪ್ಪಣ್ಣಪ್ಪ ಕಮಕನೂರ** ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಟೊಂಕ ಬಂದರು ಯೋಜನೆಯಿಂದ ಮೀನುಗಾರರು ಉದ್ಯೋಗ ಕಳೆದುಕೊಂಡಿರುವ ಕುರಿತು ದಿನಾಂಕ:05.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

2. **ಶ್ರೀ ಮಂಜುನಾಥ್ ಭಂಡಾರಿ** ಅವರು ಕುಂದಾಪುರದಲ್ಲಿರುವ ಪಂಚಗಂಗಾವಳಿ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಕುರಿತು ದಿನಾಂಕ:11.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

3. **ಡಾ: ಉಮಾಶ್ರೀ** ಅವರು ಸರ್ವಾಣಿ ಆಂಟಿಕ್ ಜೆಮ್‌ಸ್ಟೋನ್ ಅಂಡ್ ಜ್ಯುವೆಲರಿ ಎಂಬ ಖಾಸಗಿ ಸಂಸ್ಥೆಯಿಂದ ಟಿಪ್ಪು ಸುಲ್ತಾನ್ ಬಳಸುತ್ತಿದ್ದ ಖಡ್ಗವನ್ನು ಖರೀದಿಸಿ ಸರ್ಕಾರದ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಣೆ ಮಾಡುವ ಕುರಿತು ದಿನಾಂಕ:13.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

4. **ಶ್ರೀ ವೈ.ಎಂ. ಸತೀಶ್** ಅವರು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಜೂಜಾಟಗಳನ್ನು ತಡೆಯುವ ಕುರಿತು ದಿನಾಂಕ:17.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

5. **ಶ್ರೀ ಎಂ. ನಾಗರಾಜು** ಅವರು ಮಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ರಾಜ್ಯದ ಹಲವಾರು ಸರ್ಕಾರಿ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ದಿನಾಂಕ:17.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

6. **ಶ್ರೀ ಐವನ್ ಡಿ'ಸೋಜಾ** ಅವರು ಅತಿ ವಿರಳ ಖಾಯಿಲೆಯಾದ "ಹೈಪರ್ ಐಜಿಇ ಮೆಡಿಕೇಟೆಡ್ ಮಸ್ಟ್ ಸೆಲ್ ಆಕ್ಟಿವೇಶನ್ ಸಿಂಡ್ರೋಮ್"ನಿಂದ ಬಳಲುತ್ತಿರುವ ಚಾಂದಿನಿ ಅವರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ವೈದ್ಯಕೀಯ ಸಂಪೂರ್ಣ ವೆಚ್ಚವನ್ನು ಭರಿಸುವ ಕುರಿತು ದಿನಾಂಕ:17.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

7. **ಶ್ರೀ ಸಿ.ಟಿ. ರವಿ** ಅವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಟಿ. ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯ ಮಕ್ಕಳು ಉದ್ಯಮಿಯೊಬ್ಬರು ಸರಬರಾಜು ಮಾಡಿರುವ ಕಲುಷಿತ ಆಹಾರ ಸೇವಿಸಿ ಅಸ್ವಸ್ಥಗೊಂಡಿರುವಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮವಹಿಸುವ ಕುರಿತು ದಿನಾಂಕ:17.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

8. **ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ** ಡೆಡ್ಲಿ ಆನ್‌ಲೈನ್ ಗೇಮ್‌ಗಳು ಮತ್ತು ಬೆಟ್ಟಿಂಗ್‌ಗಳಿಂದ ಆತ್ಮಹತ್ಯೆಗಳು ಹಾಗೂ ಯುವಕರು ತಪ್ಪು ದಾರಿ ಹಿಡಿಯುತ್ತಿರುವ ಕುರಿತು ದಿನಾಂಕ:18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

9. **ಶ್ರೀ ಚಂದ್ರಶೇಖರ ಬಸವರಾಜ ಪಾಟೀಲ** ಬೀದರ ಜಿಲ್ಲೆಯ ಹುಮನಾಬಾದ್ ಪಟ್ಟಣದ ಸರ್ವೆ ನಂ. 375ರ 3.17 ಎಕರೆಯ ಭಾಗದಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿನ ನಿವೇಶನಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ದಿನಾಂಕ:18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

10. **ಶ್ರೀ ಚಿದಾನಂದ್ ಎಂ. ಗೌಡ** ತುಮಕೂರು ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಹೆರಿಗೆಗಳಿಗೆ ಸಂಬಂಧಿಸಿದಂತೆ ಅಕ್ರಮವಾಗಿ ಹಣಗಳಿಸುತ್ತಿರುವ ಕುರಿತು ದಿನಾಂಕ:18.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು.

11. **ಶ್ರೀಮತಿ ಬಲ್ಕೀಸ್ ಬಾನು** ರಾಜ್ಯದ ವಿವಿಧ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಗುತ್ತಿಗೆ ಹಾಗೂ ಕನ್ಸಲ್ಟೆಂಟ್ ಸಹಾಯಕ ಪ್ರಾಧ್ಯಾಪಕರುಗಳನ್ನು ಖಾಯಂಗೊಳಿಸುವ ಕುರಿತು ದಿನಾಂಕ:19.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

12. **ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಬೀಳಗಿ ತಾಲ್ಲೂಕಿನ ರೈತರಿಗೆ ಹಿಡಕಲ್ ಜಲಾಶಯದಿಂದ ಕಾಲುವೆಗೆ ನೀರು ಹರಿಸುವ ಮೂಲಕ ರೈತಾಪಿ ವರ್ಗಕ್ಕೆ ಅನುಕೂಲ ಮಾಡಿಕೊಡುವ ಕುರಿತು ದಿನಾಂಕ:19.03.2025ರಂದು ಪ್ರಸ್ತಾಪಿಸಿದ ಸೂಚನೆಗೆ ಮಾನ್ಯ ಸಭಾನಾಯಕರು ಉತ್ತರ ಮಂಡಿಸಿದರು.

## 4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ. ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ವರದಿ (2025ರ ವರದಿ ಸಂಖ್ಯೆ–1) ಯನ್ನು ಮಂಡಿಸಿದರು.

ಆ **ಕಾರ್ಯದರ್ಶಿಯವರು ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2025 ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2025ಗಳನ್ನು ಹಾಗೂ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸಿದರು.**

01. ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ವಿಧೇಯಕ, 2025

02. ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2025

03. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ, 2025

04. ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2025

05. ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

06. ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ, 2025

07. ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2025

ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಕ: 22.03.2025 ರಂದು ಬಂದ್ ಘೋಷಣೆಯಾಗಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಯವರು ಈ ಬಗ್ಗೆ ಸಂಜೆಯೊಳಗೆ ತೀರ್ಮಾನ ಕೈಗೊಂಡು ಪ್ರಕಟಿಸುವುದಾಗಿ ತಿಳಿಸಿದರು.

ಶ್ರೀ ಬಿ.ಕೆ. ಹರಿಪ್ರಸಾದ್ ಅವರು ದಿನಾಂಕ:17.03.2025ರಂದು ಕ್ರಿಯಾಲೋಪ ಸೂಚನೆಗೆ ತೀರ್ಪು ನೀಡದಿರುವ ಕುರಿತು ಹಾಗೂ ಮಾನ್ಯ ಉಪ ಸಭಾಪತಿಯವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ದಿನಾಂಕ:21.03.2025ರಂದು ಕಲ್ಪಿಸಿಕೊಡಬೇಕೆಂದು ಪ್ರಸ್ತಾಪಿಸಿದರು.

**5. ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

01. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಉಪ ಮುಖ್ಯಮಂತ್ರಿಗಳು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಹೆಚ್.ಎಸ್. ಗೋಪಿನಾಥ್
2. ಶ್ರೀ ಕೇಶವ ಪ್ರಸಾದ್ ಎಸ್
3. ಶ್ರೀ ಎಸ್.ಎಲ್. ಭೋಜೇಗೌಡ

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

02. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಐವನ್ ಡಿ'ಸೋಜಾ
2. ಶ್ರೀ ಕೇಶವ ಪ್ರಸಾದ್ ಎಸ್
3. ಶ್ರೀ ಸಿ.ಟಿ. ರವಿ
4. ಶ್ರೀ ಎಸ್.ವ್ಹಿ. ಸಂಕನೂರ
5. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)
6. ಶ್ರೀ ಶರವಣ ಟಿ.ಎ
7. ಶ್ರೀ ಪಿ.ಹೆಚ್. ಪೂಜಾರ್
8. ಶ್ರೀ ಡಿ.ಎಸ್. ಅರುಣ್

9. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
10. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
11. ಶ್ರೀ ಎಸ್.ಎಲ್. ಭೋಜೇಗೌಡ
12. ಶ್ರೀ ಎಂ. ನಾಗರಾಜು
13. ಶ್ರೀ ಎಂ.ಎಲ್. ಅನಿಲ್ ಕುಮಾರ್
14. ಡಾ: ಧನಂಜಯ ಸರ್ಜಿ
15. ಶ್ರೀ ಚಿದಾನಂದ್ ಎಂ. ಗೌಡ
16. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

03. ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕೃಷಿ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಡಾ: ತಳವಾರ್ ಸಾಬಣ್ಣ
2. ಶ್ರೀ ಕೇಶವ ಪ್ರಸಾದ್ ಎಸ್
3. ಶ್ರೀ ಪಿ.ಹೆಚ್. ಪೂಜಾರ್
4. ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

5. ಶ್ರೀ ಸಿ.ಟಿ. ರವಿ

6. ಶ್ರೀ ದಿನೇಶ್ ಗೂಳಿಗೌಡ

7. ಶ್ರೀ ಎಸ್.ಎಲ್. ಭೋಜೇಗೌಡ

8. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮಧ್ಯಾಹ್ನ 3.20 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 4.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 4.55 ಗಂಟೆಯಲ್ಲಿ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## 6. ವಿತ್ತೀಯ ಕಾರ್ಯಕಲಾಪ

2024–2025ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಮತ್ತು ಅಂತಿಮ ಕಂತು)ನ್ನು ಮಾನ್ಯ ಸಭಾನಾಯಕರು ಮಂಡಿಸಿದರು.

### ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

04. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಗ್ರಾಮ ಸ್ವರಾಜ್ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಹೆಚ್.ಎಸ್. ಗೋಪಿನಾಥ್
2. ಶ್ರೀ ಕೇಶವ ಪ್ರಸಾದ್ ಎಸ್
3. ಶ್ರೀ ರಾಮೋಜಿಗೌಡ
4. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
5. ಶ್ರೀ ಕೆ.ಎಸ್. ನವೀನ್
6. ಶ್ರೀ ಕೆ. ವಿವೇಕಾನಂದ

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**7. ಸಭಾಪತಿಯವರ ತೀರ್ಪು**

ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ:12.03.2025ರಂದು ಸದನ ಪ್ರಾರಂಭವಾದ ಸಮಯದಲ್ಲಿ ಪ್ರಶ್ನೋತ್ತರಕ್ಕೂ ಮೊದಲೇ ಮಾನ್ಯ ಸಭಾಪತಿಯವರ ಅನುಮತಿ ಪಡೆದು ಮಾತನಾಡಿ "ಮಾನ್ಯ ಸಭಾಪತಿಯವರೆ ಕಳೆದ ಎರಡು ದಿನಗಳಿಂದ ಪತ್ರಿಕೆಗಳಲ್ಲಿ ಮುಸ್ಲಿಂ ಜನಾಂಗದವರಿಗೆ ಸರ್ಕಾರವು ಗುತ್ತಿಗೆಯಲ್ಲಿ ಶೇ.4ರಷ್ಟು ಮೀಸಲು ಜಾರಿಗೊಳಿಸಿರುವ ಕುರಿತು ವರದಿ ಪ್ರಕಟವಾಗುತ್ತಿದೆ. ಸರ್ಕಾರದ ಧಾರ್ಮಿಕ ಆಧಾರಿತ ಮೀಸಲು ಕ್ರಮವು ಸಂವಿಧಾನ ವಿರೋಧಿಯಾಗಿದ್ದು, ಇದನ್ನು ನಾವು ವಿರೋಧಿಸುತ್ತೇವೆಂದು" ತಿಳಿಸಿದರು.

ಇದಕ್ಕೆ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಪ್ರಶ್ನೋತ್ತರದ ನಂತರ ನಿಯಮ 329ರಡಿಯಲ್ಲಿ ಕ್ರಿಯಾಲೋಪವನ್ನು ಪ್ರಸ್ತಾಪಿಸಿ ಸಂವಿಧಾನದಲ್ಲಿ ಅನುಚ್ಛೇದ 14, 15ರ ಉಪ ಕಂಡಿಕೆ 4, 29ನೆಯ ಅನುಚ್ಛೇದದ (2)ನೆಯ ಖಂಡ ಅನುಚ್ಛೇದ 16, 29, 30ನ್ನು ಪ್ರಸ್ತಾಪಿಸಿ ಮಾತನಾಡಿ ವಿರೋಧ ಪಕ್ಷದ ನಾಯಕರು ಹೇಳಿರುವ ಮೇಲ್ಕಂಡ ಮಾತುಗಳ

ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಆ ಪದಗಳನ್ನು ಕಡತದಿಂದ ತೆಗೆಯಬೇಕೆಂದು ಕ್ರಿಯಾಲೋಪವನ್ನು ಮಂಡಿಸಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸಂವಿಧಾನದಲ್ಲಿ ಧಾರ್ಮಿಕ ಆಧಾರಿತ ಮೀಸಲು ಕಲ್ಪಿಸಲು ಅವಕಾಶವಿಲ್ಲವೆಂದು ತಿಳಿಸಿದರು.

ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿ ಅವರು Constituent assemblyಯಲ್ಲಿ ಚರ್ಚಿಸಲಾಗಿರುವ ಅಂಶಗಳನ್ನು ಓದಿದರು.

ಮಾನ್ಯ ಸಭಾಪತಿಯವರು ಈ ಕುರಿತು ಸೂಚನೆಯನ್ನು ನೀಡಿದರೆ ಚರ್ಚೆಗೆ ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಿ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮಂಡಿಸಿದ ಕ್ರಿಯಾಲೋಪದ ಅಂಶಗಳನ್ನು ಪರಿಶೀಲಿಸಿ ತೀರ್ಪು ನೀಡುವುದಾಗಿ ತಿಳಿಸಿದರು.

ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮಂಡಿಸಿದ ಕ್ರಿಯಾಲೋಪದ ಅಂಶಗಳನ್ನು ಪರಿಶೀಲಿಸಲಾಗಿ ಕ್ರಿಯಾಲೋಪ ಪ್ರಸ್ತಾವನೆಯು ನಿಯಮ 329(6)(ಬಿ) ಅಂಗೀಕಾರಕ್ಕೆ ಸೂಕ್ತವಲ್ಲವೆಂಬ ತೀರ್ಮಾನಕ್ಕೆ ಬರಲಾಗಿರುತ್ತದೆ.

## ಶಾಸನ ರಚನೆ

## ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

05. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

06. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ

ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಶರವಣ ಟಿ.ಎ.
2. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
3. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
4. ಶ್ರೀ ಐವನ್ ಡಿ'ಸೋಜಾ
5. ಶ್ರೀ ಶಶೀಲ್ ಜಿ. ನಮೋಶಿ
6. ಶ್ರೀ ರಾಮೋಜಿಗೌಡ

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

07. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಎಸ್.ಎಲ್. ಭೋಜೇಗೌಡ
2. ಶ್ರೀ ಶರವಣ ಟಿ.ಎ.
3. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
4. ಶ್ರೀ ಕೆ. ವಿವೇಕಾನಂದ
5. ಶ್ರೀ ಐವನ್ ಡಿ'ಸೋಜಾ

6. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಸಂಜೆ 6.26 ಗಂಟೆಯಲ್ಲಿ ಮಾನ್ಯ ಉಪ ಸಭಾಪತಿಯವರು (ಶ್ರೀ ಎಂ.ಕೆ. ಪ್ರಾಣೇಶ್) ಸಭಾಪತಿ ಪೀಠದಲ್ಲಿ ಆಸೀನರಾದರು.

08. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
2. ಶ್ರೀ ಸಿ.ಟಿ. ರವಿ
3. ಶ್ರೀ ಎಸ್.ಎಲ್. ಭೋಜೇಗೌಡ
4. ಶ್ರೀ ಪಿ.ಹೆಚ್. ಪೂಜಾರ್
5. ಶ್ರೀ ಮಂಜುನಾಥ್ ಭಂಡಾರಿ
6. ಶ್ರೀ ಶರವಣ ಟಿ.ಎ

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

09. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

10. ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಂದಾಯ ಸಚಿವರು ವಿವರಣೆ ನೀಡಿದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಎಸ್.ಎಲ್. ಭೋಜೇಗೌಡ
2. ಶ್ರೀ ಐವನ್ ಡಿ'ಸೋಜಾ
3. ಶ್ರೀ ಸಲೀಂ ಅಹಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 8. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಈ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:13.03.2025ರಂದು 2025ನೇ ಸಾಲಿನ "ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ"ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## 9. ನಿರ್ಣಯ

1. **ಡಾ: ಎಂ.ಸಿ. ಸುಧಾಕರ್ (ಮಾನ್ಯ ಉನ್ನತ ಶಿಕ್ಷಣ ಸಚಿವರು) ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.**

ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹೊರಡಿಸಿರುವ ಕರಡು University Grants Commission (Minimum Qualifications for Appointment and Promotion of Teachers and Academic Staff in

Universities and Colleges and Measures for the Maintenance of Standards in Higher Education) Regulations, 2025 ಅನ್ನು ಹಿಂಪಡೆಯಬೇಕೆಂದು ನಿರ್ಣಯಿಸಲಾಗಿದೆ.

ಈ ಕರಡು ಯುಜಿಸಿ ರೆಗ್ಯುಲೇಷನ್ಸ್, 2025 ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಒಕ್ಕೂಟದ (ಫೆಡರಲ್) ತತ್ವಗಳಿಗೆ ವಿರುದ್ಧವಾಗಿರುವುದು ಮಾತ್ರವಲ್ಲ, ಇದು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮೇಲೂ ಪರಿಣಾಮ ಬೀರುತ್ತದೆ. ಕರಡು ಯುಜಿಸಿ ರೆಗ್ಯುಲೇಷನ್ಸ್, 2025ರಲ್ಲಿರುವ ವಿಷಯಗಳ ಕುರಿತು ಕರ್ನಾಟಕ ಸರ್ಕಾರದ ಪ್ರಮುಖ ಕಾಳಜಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ:

**i) ಕುಲಪತಿಗಳಾಗಿ ಶೈಕ್ಷಣಿಕೇತರರ ನೇಮಕ (ಕಂಡಿಕೆ 10.1)**

ಉದ್ಯಮ, ಸಾರ್ವಜನಿಕ ಆಡಳಿತ ಅಥವಾ ಸಾರ್ವಜನಿಕ ನೀತಿಯಲ್ಲಿ ಅನುಭವ ಹೊಂದಿರುವ ವ್ಯಕ್ತಿಗಳನ್ನು ಕುಲಪತಿಗಳ ನೇಮಕಾತಿಗಾಗಿ ಪ್ರಸ್ತಾವಿತ ಮಾನದಂಡಗಳು ಗಮನಾರ್ಹವಾದ ಕಾಳಜಿಗಳನ್ನು ಹುಟ್ಟುಹಾಕುತ್ತವೆ. ಶೈಕ್ಷಣಿಕ ವಲಯದ ಹೊರಗಿನ ನಾಯಕತ್ವದ ಪಾತ್ರಗಳಲ್ಲಿನ ಅನುಭವವು ಮೌಲ್ಯಯುತವಾಗಿದ್ದರೂ, ಕುಲಪತಿಗಳ ಹುದ್ದೆಗೆ ಆಳವಾದ ಶೈಕ್ಷಣಿಕ ಪರಿಣತಿ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ತಿಳುವಳಿಕೆ ಅಗತ್ಯ. ಪ್ರಸ್ತಾವಿತ ಮಾನದಂಡಗಳು ವಿಶ್ವವಿದ್ಯಾನಿಲಯಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಅಗತ್ಯವಾದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವದ ಕೊರತೆಯಿರುವ ವ್ಯಕ್ತಿಗಳ ನೇಮಕಕ್ಕೆ ಕಾರಣವಾಗಬಹುದು ಎಂದು ನಾವು ಭಾವಿಸುತ್ತೇವೆ. ಶೈಕ್ಷಣಿಕ ಮತ್ತು ವಿಶ್ವವಿದ್ಯಾಲಯದ ಆಡಳಿತದಲ್ಲಿ ಅಪಾರ ಅನುಭವ ಹೊಂದಿರುವ ವ್ಯಕ್ತಿಗಳಿಗೆ ಆದ್ಯತೆ ನೀಡಲು ಮಾನದಂಡಗಳನ್ನು ಮರುಪರಿಶೀಲಿಸುವಂತೆ ನಾವು ಸಲಹೆ ಮಾಡುತ್ತೇವೆ.

**ii) ಕುಲಪತಿ ಶೋಧನಾ ಮತ್ತು ಆಯ್ಕೆ ಸಮಿತಿಯಿಂದ ರಾಜ್ಯ ಸರ್ಕಾರವನ್ನು ಹೊರಗಿಟ್ಟಿರುವುದು (ಕಂಡಿಕೆ 10.1. iv)**

ಕರಡು ಯುಜಿಸಿ ರೆಗ್ಯುಲೇಷನ್ಸ್, ರಾಜ್ಯ ಕಾಯಿದೆಗಳ ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ

ರಾಜ್ಯ ಸರ್ಕಾರಗಳಿಗೆ ಯಾವುದೇ ಪಾತ್ರವನ್ನು ನೀಡಿರುವುದಿಲ್ಲ ಮತ್ತು ಇದರಿಂದಾಗಿ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಕಾನೂನುಬದ್ಧ ಹಕ್ಕುಗಳನ್ನು ತಡೆಯುತ್ತದೆ. ವಿಶ್ವವಿದ್ಯಾನಿಲಯಗಳಿಗೆ ಸಂಪೂರ್ಣ ಧನಸಹಾಯವನ್ನು ರಾಜ್ಯ ಸರ್ಕಾರಗಳು ಒದಗಿಸುತ್ತವೆ. ಕುಲಪತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಭಾಗವಹಿಸುವಿಕೆಯು ರಾಜ್ಯದ ನಿಜವಾದ ಆಕಾಂಕ್ಷೆಗಳನ್ನು, ಸ್ಥಳೀಯ ಶೈಕ್ಷಣಿಕ ಅಗತ್ಯಗಳು, ನೀತಿಗಳು ಮತ್ತು ದೃಢೀಕರಣದ ಕ್ರಮಗಳನ್ನು ಸೂಕ್ತವಾಗಿ ಪರಿಗಣಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನಿರ್ಣಾಯಕವಾಗಿರುತ್ತದೆ. ಆದ್ದರಿಂದ, ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವಲ್ಲಿ ರಾಜ್ಯ ಸರ್ಕಾರಗಳಿಗೆ ಪ್ರಮುಖ ಪಾತ್ರವನ್ನು ನೀಡಬೇಕು.

**iii) ಅಂತರ-ವಿಷಯಗಳ ಬೋಧನೆ (ಕಂಡಿಕೆ 3.2 ಮತ್ತು 3.3)**

ಅಭ್ಯರ್ಥಿಗಳು ತಮ್ಮ ಪದವಿ ಹಂತದ ಅಥವಾ ಸ್ನಾತಕೋತ್ತರ ಅರ್ಹತೆಗಿಂತ ಭಿನ್ನವಾದ ವಿಭಾಗದಲ್ಲಿ ಪಿಎಚ್‌ಡಿ ಹೊಂದಿದ್ದರೆ ಅಥವಾ ತಮ್ಮ ಶೈಕ್ಷಣಿಕ ಹಿನ್ನೆಲೆಗಿಂತ ಭಿನ್ನವಾದ ವಿಷಯದಲ್ಲಿ ನೆಟ್/ಸೆಟ್, ಪಾಸಾಗಿದ್ದರೆ ಆ ವಿಷಯದಲ್ಲಿ ಬೋಧಿಸಲು ಅರ್ಹರಾಗುತ್ತಾರೆ ಎಂದು ಪ್ರಸ್ತಾಪಿಸಲಾಗಿದೆ. ಸರಿಯಾದ ಮೂಲ ಜ್ಞಾನವಿಲ್ಲದೆ ವಿಷಯಗಳನ್ನು ಕಲಿಸಲು ಅವಕಾಶ ನೀಡುವುದರಿಂದ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಕಲಿಕೆಯ ಫಲಿತಾಂಶಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕರಡು ನಿಯಮಗಳಲ್ಲಿನ ಇಂತಹ ನಿಬಂಧನೆಗಳು ಶೈಕ್ಷಣಿಕ ಸಮಗ್ರತೆ, ಸ್ವಾಯತ್ತತೆ ಮತ್ತು ರಾಜ್ಯ ವಿಶ್ವವಿದ್ಯಾಲಯಗಳ ಅಂತರ್ಗತ ಅಭಿವೃದ್ಧಿಗೆ ಗಂಭೀರ ಸವಾಲುಗಳನ್ನು ಒಡ್ಡುತ್ತವೆ.

**iv) ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಳು:**

ಮಾರ್ಗಸೂಚಿಗಳನ್ನು ಅಂತಿಮಗೊಳಿಸುವ ಮೊದಲು ಗುತ್ತಿಗೆ ನೇಮಕಾತಿಗಳು/ಅತಿಥಿ ಪ್ರಾಧ್ಯಾಪಕರು/ Visiting ಪ್ರಾಧ್ಯಾಪಕರು/ Practice ಪ್ರಾಧ್ಯಾಪಕರು/ Emeritus ಪ್ರಾಧ್ಯಾಪಕರಿಗೆ ಸಂಬಂಧಿಸಿದ ನಿಬಂಧನೆಗಳ ಕುರಿತು ಹೆಚ್ಚಿನ ಸ್ಪಷ್ಟತೆಯನ್ನು ಕೋರಲಾಗಿದೆ.

**v) ಉಲ್ಲಂಘನೆಯ ಪರಿಣಾಮಗಳು**

ಕರಡು ಯುಜಿಸಿ ನಿಯಮಗಳ ಉಲ್ಲಂಘನೆಯ ಪರಿಣಾಮಗಳಿಗೆ ಸಂಬಂಧಿಸಿದ ನಿಬಂಧನೆಗಳು ತೀವ್ರ, ಅತಿಯಾದ, ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ಇವುಗಳನ್ನು ಗಂಭೀರವಾಗಿ ಮರುಪರಿಶೀಲಿಸುವ ಅಗತ್ಯವಿರುತ್ತದೆ. ಯು.ಜಿ.ಸಿ. ನಿಯಮಗಳನ್ನು ಪಾಲಿಸದಿದ್ದಲ್ಲಿ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು ನಿಜವಾಗಿಯೂ ಸರ್ವಾಧಿಕಾರಿ ಮತ್ತು ಫೆಡರಲ್ ಚೌಕಟ್ಟಿನಲ್ಲಿ ರಾಜ್ಯಗಳ ಸ್ವಾಯತ್ತತೆಯ ಮನೋಭಾವಕ್ಕೆ ವಿರುದ್ಧವಾಗಿದೆ.

ಆದ್ದರಿಂದ ಕರಡು ರೆಗ್ಯುಲೇಷನ್ಸ್, 2025 ಅನ್ನು ತಕ್ಷಣವೇ ಹಿಂತೆಗೆದುಕೊಳ್ಳುವ ಅವಶ್ಯಕತೆಯಿದೆ. ಈ ನಿಯಮಗಳು ಕರ್ನಾಟಕದ ಬಲವಾದ ಮತ್ತು ಚೈತನ್ಯಶೀಲ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ತೀವ್ರವಾಗಿ ದುರ್ಬಲಗೊಳಿಸುತ್ತವೆ ಮತ್ತು ನಮ್ಮ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತವೆ. ಆದುದರಿಂದ, ಈ ಘನ ಸದನವು, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ 2025ರ ಕರಡು ರೆಗ್ಯುಲೇಷನ್ಸ್ ಅನ್ನು ಹಿಂತೆಗೆದುಕೊಳ್ಳುವಂತೆ ಸರ್ವಾನುಮತದಿಂದ ನಿರ್ಣಯಿಸಿದೆ.

ಈ ನಿಯಮಗಳನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ರಾಜ್ಯಗಳೊಂದಿಗೆ ಸಹಕಾರಾತ್ಮಕ ಒಕ್ಕೂಟದ ಮನೋಭಾವ, ಸಹಯೋಗದ ಮತ್ತು ಸಮಾಲೋಚನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಈ ಸದನವು ಒತ್ತಾಯಿಸುತ್ತದೆ.

ಈ ಕೆಳಕಂಡ ಮಾನ್ಯ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

1. ಶ್ರೀ ಕೇಶವ ಪ್ರಸಾದ್ ಎಸ್
2. ಶ್ರೀ ಕೆ.ಎಸ್. ನವೀನ್

ಸಂಜೆ 7.25 ಗಂಟೆಯಲ್ಲಿ **ಶ್ರೀಮತಿ ಭಾರತಿ ಶೆಟ್ಟಿ** ಅವರು ಸಭಾಪತಿಯವರ ಪೀಠದಲ್ಲಿ ಆಸೀನರಾದರು.

3. ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಮಾನ್ಯ ವಿರೋಧ ಪಕ್ಷದ ಶಾಸಕರುಗಳು ನಿರ್ಣಯವನ್ನು ಚರ್ಚಿಸಲು ಕಾಲಾವಕಾಶ ನೀಡಬೇಕೆಂದು ಕೋರಿದರು.

2. **ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು, ನ್ಯಾಯ ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಈ ಕೆಳಕಂಡ ನಿರ್ಣಯಗಳನ್ನು ಮಂಡಿಸಿದರು.**

**ನಿರ್ಣಯ-1**

ಕೇಂದ್ರ ಸರ್ಕಾರವು 1995ರ ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡುವ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದೆ. (ಕೇಂದ್ರ ಸರ್ಕಾರದ ಕಾಯ್ದೆ ಸಂಖ್ಯೆ 43-1995) ಈ ಉದ್ದೇಶಕ್ಕಾಗಿ ಒಂದು ಜಂಟಿ ಸದನ ಸಮಿತಿಯನ್ನು 2024ರಲ್ಲಿ ಸಂಸತ್ತಿನ ಮೂಲಕ ರಚನೆಗೊಂಡಿತ್ತು. ಈ ಸಂಸದೀಯ ಸಮಿತಿಯು ಸಂಸತ್ತಿನ ಉನ್ನತ ಸಂಪ್ರದಾಯಗಳನ್ನು ಬದಿಗೊತ್ತಿ ವಿರೋಧ ಪಕ್ಷದ ಸದಸ್ಯರ ಯಾವುದೇ ಅಭಿಪ್ರಾಯವನ್ನು ಪರಿಗಣಿಸದೇ, ಲೆಕ್ಕಿಸದೇ ಏಕಪಕ್ಷಿಯವಾಗಿ ಮನಬಂದಂತೆ ವರ್ತಿಸಿ, ಈ ಕಾಯ್ದೆ ತಿದ್ದುಪಡಿಗೆ ಕೆಲವು ಬದಲಾವಣೆಗಳನ್ನು ಶಿಫಾರಸ್ಸು ಮಾಡಿ, ಸಂಸತ್ತಿಗೆ ವರದಿ ಸಲ್ಲಿಸಿ, ಈಗ ಮಸೂದೆಯನ್ನು ಸಂಸತ್ತಿನ ಅಂಗೀಕಾರಕ್ಕೆ ಮಂಡಿಸಲಾಗಿದೆ.

ಜಂಟಿ ಸಂಸದೀಯ ಸಮಿತಿಯ ಆಹ್ವಾನದಂತೆ ವಿವಿಧ ಪಾಲುದಾರರು, ರಾಜ್ಯ ವಕ್ಫ್ ಮಂಡಳಿಗಳು ಮತ್ತು ವಿವಿಧ ಸಂಸ್ಥೆಗಳು ಅಭಿಪ್ರಾಯಗಳನ್ನು ಮಂಡಿಸಿವೆ. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಮತ್ತು ವಿವಿಧ ಸಂಸ್ಥೆಗಳು ಹಾಗೂ ಪಾಲುದಾರರು ಈ ಕಾಯ್ದೆ ತಿದ್ದುಪಡಿಯನ್ನು ಕೈಗೊಳ್ಳಬಾರದು ಎಂದು ವಿರೋಧಿಸಿ ಅಭಿಪ್ರಾಯಗಳನ್ನು ನೀಡಿದಾಗ್ಯೂ ಈ ಕಾಯ್ದೆಯನ್ನು ಏಕಪಕ್ಷಿಯವಾಗಿ ತರಲು ನಿರ್ಧರಿಸಲಾಗಿದೆ ಹಾಗೂ ಸಂಸತ್ತಿನಲ್ಲಿ ಮಂಡಿಸಲಾಗಿದೆ.

ರಾಜ್ಯ ವಕ್ಫ್ ಮಂಡಳಿಯು 1995ರ ಸದರಿ ಕಾಯಿದೆ (2013ರಲ್ಲಿ ತಿದ್ದುಪಡಿಗೊಂಡಂತೆ) ಮತ್ತು ಇಲ್ಲಿಯವರೆಗೆ ಸದರಿ ಕಾಯಿದೆಗೆ ಮಾಡಲಾದ

ತಿದ್ದುಪಡಿಗಳ ಪ್ರಕಾರ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ಚರ ಅಥವಾ ಸ್ಥಿರ ಆಸ್ತಿ ಮತ್ತು ವಸ್ತುಗಳ ಅಭಿರಕ್ಷಕರಾಗಿ ಕಾರ್ಯನಿರ್ವಹಿಸುತ್ತಿವೆ, ಮತ್ತು ನಮೂದು 28, ದತ್ತಿ ಸಂಸ್ಥೆಗಳು, ದತ್ತಿ ಮತ್ತು ಧಾರ್ಮಿಕ ದತ್ತಿ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು (ದತ್ತಿ ಮತ್ತು ದತ್ತಿ ಸಂಸ್ಥೆಗಳು, ದತ್ತಿ ಮತ್ತು ಧಾರ್ಮಿಕ ದತ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು) ಭಾರತದ ಸಂವಿಧಾನದ ಪಟ್ಟಿಯಲ್ಲಿ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಸಮಾನ ಜವಾಬ್ದಾರಿಯ ಏಕಕಾಲಿಕ ಪಟ್ಟಿಯ ಸೇರಿಸಲ್ಪಟ್ಟಿರುವುದರಿಂದ ಹಾಗೂ ಶಾಸನಾತ್ಮಕ ಅಧಿಕಾರವನ್ನು ಚಲಾಯಿಸುವ ಮೂಲಕ ಅಂಗೀಕರಿಸಲಾಗಿದೆ. ಸಂವಿಧಾನದ 3ನೇ ಪಟ್ಟಿಯಲ್ಲಿ ವಕ್ಫ್ ವಿಷಯ ಉಲ್ಲೇಖಿತವಾಗಿರುವುದಿಲ್ಲ. ವಕ್ಫ್ ಒಂದು ವಿಶೇಷ ಪರಿಕಲ್ಪನೆಯಾಗಿದೆ ಹಾಗೂ ಅದು ಕೇಂದ್ರ ಸರ್ಕಾರದ ಪ್ರತ್ಯೇಕ ವ್ಯಾಪ್ತಿಗೆ ಒಳಪಡುವ ವಿಷಯವಾಗಿರುವುದಿಲ್ಲ. ಬದಲಿಗೆ, ರಾಜ್ಯ ಸರ್ಕಾರದ ಪ್ರತ್ಯೇಕ ಹಾಗೂ ವಿಶೇಷ ಅಧಿಕಾರಕ್ಕೆ ಒಳಪಡುವ 11ನೇ ಪಟ್ಟಿಯಲ್ಲಿ ನಮೂದು ಸಂಖ್ಯೆ 10ರಲ್ಲಿ ಸ್ಮಶಾನ/ಖಬರಸ್ಥಾನಗಳು ಹಾಗೂ ನಮೂದು

ಸಂಖ್ಯೆ 45ರಲ್ಲಿ ಭೂಮಿ, ಭೂಮಿ ಅಳತೆ, ಭೂ ದಾಖಲೆಗಳು ಈ ವಿಷಯಗಳು ಒಳಪಟ್ಟಿದ್ದು ಅವುಗಳ ಕುರಿತು ತಿದ್ದುಪಡಿ ತರುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುವುದಿಲ್ಲ. ಈ ತಿದ್ದುಪಡಿಯ ಮೂಕ ಉದ್ದೇಶಿತ ವಕ್ಫ್ ಕಾಯ್ದೆಯ ತಿದ್ದುಪಡಿಯು ರಾಜ್ಯ ಸರ್ಕಾರದ ಕಾರ್ಯಾಂಗದ ಮತ್ತು ಶಾಸನಾತ್ಮಕ ಅಧಿಕಾರ ವ್ಯಾಪ್ತಿಯನ್ನು ಕಬಳಿಸುತ್ತಿದೆ ಮತ್ತು ಮೊಟಕುಗೊಳಿಸುತ್ತದೆ. ಈ ಉದ್ದೇಶಿತ ತಿದ್ದುಪಡಿಯು "Principle of Equity, Equality and parity" ತತ್ವಗಳಿಗೆ ವಿರುದ್ಧವಾಗಿದೆ. ಹಾಗಾಗಿ ಈ ಉದ್ದೇಶಿತ ತಿದ್ದುಪಡಿಯು ಸಂವಿಧಾನ ಬಾಹಿರವಾಗಿದೆ. (Ultra vires).

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ವಕ್ಫ್ ಸಮಾನ ಶಾಸನಾತ್ಮಕ ಅಧಿಕಾರದ ವಿಷಯವಾಗಿರುವುದರಿಂದ, ಭಾರತದ ಸಂವಿಧಾನದ 26ನೇ ವಿಧಿಯು ವಕ್ಫ್ ದತ್ತಿಗಳು ಮತ್ತು ವಕ್ಫ್ ಸಂಸ್ಥೆಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ಆಯಾ ಧಾರ್ಮಿಕ ಸಮುದಾಯಗಳಿಗೆ ಅದರ ಸ್ವಾತಂತ್ರ್ಯವನ್ನು ಸುನಿಶ್ಚಿತಗೊಳಿಸಲು ಸಂವಿಧಾನದತ್ತ ಮೂಲಭೂತ ಹಕ್ಕಾಗಿದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ವಕ್ಫ್ ಕಾಯ್ದೆಯು 1954ರಲ್ಲಿ ಭಾರತೀಯ ಸಂಸತ್ತು ಅಂಗೀಕರಿಸಿದ ಬಲಯುತವಾದ ಕಾನೂನಾಗಿದ್ದು, ನಂತರ 1995ರಲ್ಲಿ ಸಮಗ್ರವಾಗಿ ತಿದ್ದುಪಡಿಯಾಗಿದೆ.

ಪ್ರಸ್ತುತ, ತಿದ್ದುಪಡಿ ಮಸೂದೆಯಲ್ಲಿ ಮಂಡಿಸಲಾದ ನಿಬಂಧನೆಗಳು ವಕ್ಫ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಸರ್ಕಾರಗಳಿಂದ ಅನೇಕ ಅಧಿಕಾರಗಳನ್ನು ಕಸಿದುಕೊಳ್ಳುತ್ತವೆ ಮತ್ತು ಸಂವಿಧಾನದ ಒಕ್ಕೂಟ ವ್ಯವಸ್ಥೆಯ ತತ್ವಗಳು ಮತ್ತು ವಕ್ಫ್‌ನ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವ ಮಂಡಳಿಗಳಿಗೆ ಸಂಪೂರ್ಣ ವಿರುದ್ಧವಾಗಿವೆ. ಈ ತಿದ್ದುಪಡಿಗೆ ಸಂಬಂಧಪಟ್ಟ ವಿಷಯದಲ್ಲಿ ವಕ್ಫ್ ಮತ್ತು ವಕ್ಫ್ ನ್ಯಾಯಮಂಡಳಿಯ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವ ಮಂಡಳಿಗಳ ಕಾರ್ಯಗಳು ಮತ್ತು ಅಧಿಕಾರಗಳನ್ನು ದುರ್ಬಲಗೊಳಿಸುತ್ತದೆ ಅಥವಾ ರದ್ದುಗೊಳಿಸುತ್ತದೆ ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ಜಾತ್ಯತೀತ ತತ್ವಗಳಿಗೆ ವಿರುದ್ಧವಾದ ದೃಷ್ಟಿಕೋನ ಹೊಂದಿದೆ.

ಈ ಕಾನೂನಿನ ತಿದ್ದುಪಡಿಯು ಕಾನೂನಿನ ಪ್ರಜಾಸತ್ತಾತ್ಮಕ ಸ್ವರೂಪವನ್ನು ಮೊಟಕುಗೊಳಿಸುತ್ತದೆ. ಏಕೆಂದರೆ ಮಂಡಳಿಯು ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸದಸ್ಯರನ್ನು ಹೊರತುಪಡಿಸಿ ನಾಮನಿರ್ದೇಶಿತ ಸದಸ್ಯರು ಮತ್ತು ನಾಮನಿರ್ದೇಶಿತ ಅಧ್ಯಕ್ಷರನ್ನು ಮಾತ್ರ ಹೊಂದಿರುತ್ತದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿದೆ.

ಅದೇ ರೀತಿ, ಹೊಸ ತಿದ್ದುಪಡಿಯು ಸಂವಿಧಾನವು ನೀಡಿರುವ ವಕ್ಫ್ ತತ್ವಗಳು, ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ ಒಕ್ಕೂಟ ವ್ಯವಸ್ಥೆ ಜಾತ್ಯತೀತತೆ, ಪ್ರಜಾಪ್ರಭುತ್ವ ನಾಗರಿಕ ನಂಬಿಕೆಯ ಹಕ್ಕಿನೊಂದಿಗೆ ಅಸಮಂಜಸತೆಯನ್ನು ಸೃಷ್ಟಿಸುತ್ತದೆ.

ಸಂವಿಧಾನವು ಅನುಮತಿಸುವ ಮೂಲಭೂತ ಹಕ್ಕುಗಳು, ಸ್ವಾತಂತ್ರ, ಒಕ್ಕೂಟ ವ್ಯವಸ್ಥೆ ಜಾತ್ಯತೀತತೆ ಪ್ರಜಾಪ್ರಭುತ್ವ ಮತ್ತು ನಾಗರಿಕರ ನಂಬಿಕೆಯ ಹಕ್ಕಿನ ಮೇಲೆ ಯಾವುದೇ ರಾಜಿ ಮಾಡಿಕೊಳ್ಳಬಾರದು. ಈ ಎಲ್ಲಾ

ಸಾಂವಿಧಾನಿಕ ಮೌಲ್ಯಗಳನ್ನು ನಾವು ರಕ್ಷಿಸಬೇಕಾದುದು ರಾಜ್ಯಗಳ ಕರ್ತವ್ಯವಾಗಿದೆ.

ಈ ಕಾಯ್ದೆಯು ದೇಶದ ಎಲ್ಲಾ ವರ್ಗಗಳ ಜನತೆಯ ಆಶೋತ್ತರಗಳನ್ನು ಮತ್ತು ಅವಕಾಶಗಳನ್ನು ಪ್ರತಿಬಿಂಬಿಸುವುದಿಲ್ಲ. ಕರ್ನಾಟಕ ನಾಡಿನ ಜನತೆಯ ಸರ್ವಾನುಮತದ ಅಪೇಕ್ಷೆ-ನಿರೀಕ್ಷೆಗಳಿಗೆ ಮತ್ತು ಜಾತ್ಯತೀತ ತತ್ವಗಳಿಗೆ ಸಂಪೂರ್ಣವಾದ ವಿರೋಧ ವ್ಯಕ್ತಪಡಿಸುವ ಕಾಯ್ದೆಯಾಗಿರುವುದರಿಂದ ಈ ಸದನವು ವಕ್ಫ್ ಕಾಯ್ದೆ ತಿದ್ದುಪಡಿಯನ್ನು ಸರ್ವಾನುಮತದಿಂದ ತಿರಸ್ಕರಿಸುತ್ತದೆ.

ಈ ಹಿನ್ನಲೆಯಲ್ಲಿ ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ತಕ್ಷಣ ಹಿಂಪಡೆಯುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಲು ಕೇಂದ್ರ ಸರ್ಕಾರವು ವಿಳಂಬವಿಲ್ಲದೇ ಕ್ರಮ ಕೈಗೊಳ್ಳಬೇಕೆಂದು ಈ ಸದನವು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸುತ್ತದೆ.

## ನಿರ್ಣಯ-2

1. ಕರ್ನಾಟಕ ರಾಜ್ಯ ಸರ್ಕಾರವು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ, ಸಂವಿಧಾನದ ಅನುಚ್ಛೇದ 46ರಂತೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಂದಿನ ಭಾರತ ಸರ್ಕಾರದ ಯೋಜನಾ ಆಯೋಗದ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು, 2014-15ರ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಕರ್ನಾಟಕ ಅನುಸೂಚಿತ ಜಾತಿ ಉಪ ಯೋಜನೆ ಮತ್ತು ಅನುಸೂಚಿತ ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ಎಂಬ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಯೋಜನಾ ವೆಚ್ಚದ ಒಂದು ಭಾಗವನ್ನು ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಗೆ

ಮೀಸಲಿಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದಲ್ಲದೆ, ಈ ಕಾಯ್ದೆಯಲ್ಲಿ ಉಪ ಯೋಜನೆಯ ತಯಾರಿಕೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಸಾಂಸ್ಥಿಕ ಕಾರ್ಯವಿಧಾನವನ್ನು ಜಾರಿಗೆ ತರಲಾಗಿದೆ.

2. ಸದರಿ ಕಾಯ್ದೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 2024-25ನೇ ಸಾಲಿನಲ್ಲಿ SCSP ಮತ್ತು TSPಗೆ ರಾಜ್ಯ ಯೋಜನೆ/ ಅಭಿವೃದ್ಧಿ ವೆಚ್ಚದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ರೂ.39121.46 ಕೋಟಿಗಳನ್ನು ಒದಗಿಸಲಾಗಿದೆ. 2025-26ರ ಆಯವ್ಯಯದಲ್ಲಿ ರೂ.42018.00 ಕೋಟಿಗಳನ್ನು ಮೀಸಲಿಡಲಾಗಿದೆ.

3. ಭಾರತ ಸರ್ಕಾರವು ರೂ.50.34 ಲಕ್ಷ ಕೋಟಿಗಳ ಬಜೆಟ್ ವೆಚ್ಚವನ್ನು (ಆದಾಯ ಮತ್ತು ಬಂಡವಾಳ ಎರಡೂ ಒಟ್ಟಾಗಿ) ಮಂಡಿಸಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ, ಕೇಂದ್ರ ಆಯವ್ಯಯದ ವೆಚ್ಚದಲ್ಲಿ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ- DAPSC ಗಾಗಿ ರೂ.1.68 ಲಕ್ಷ ಕೋಟಿ ಮತ್ತು ಬುಡಕಟ್ಟು ಉಪ ಯೋಜನೆಗಾಗಿ ರೂ.1.29 ಲಕ್ಷ ಕೋಟಿ ಒದಗಿಸಲಾಗಿದೆ. ವಾಸ್ತವವಾಗಿ, ಕೇಂದ್ರ ಆಯವ್ಯಯದ ಪ್ರಮಾಣವನ್ನು ನೋಡಿದರೆ, DAPSC ಮತ್ತು ಬುಡಕಟ್ಟು ಉಪ ಯೋಜನೆಗೆ ಮೀಸಲಿಟ್ಟ ಮೊತ್ತವು 2011ರ ಜನಗಣತಿಯಂತೆ ಕನಿಷ್ಠ ದೇಶದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಅನುಪಾತದಲ್ಲಿರಬಹುದಾಗಿತ್ತು ದೇಶದಲ್ಲಿ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆ 16.6% ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ 8.6%.

"ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 46ರಂತೆ ಕೇಂದ್ರ ಬಜೆಟ್‌ನ ಒಂದು ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ (ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ) ಮತ್ತು ಬುಡಕಟ್ಟು ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡಲು ಮತ್ತು ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಕೂಲವಾಗುವಂತೆ ವಿವಿಧ ಕೇಂದ್ರ ಯೋಜನೆಗಳಿಗೆ ಹಣವನ್ನು ಒದಗಿಸಲು, ಸಂವಿಧಾನದ ಅನುಚ್ಛೇದ 46ರ ಅಡಿಯಲ್ಲಿ ಕೇಂದ್ರ ಕಾಯ್ದೆಯನ್ನು ಜಾರಿಗೆ ತರುವ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ".

ಕರ್ನಾಟಕವೂ ಸೇರಿದಂತೆ, ದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತದೃಷ್ಟಿಯಿಂದ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಒಕ್ಕೊರಲಿನಿಂದ ಮತ್ತು ಸರ್ವಾನುಮತದಿಂದ ಕೇಂದ್ರ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

**ವಿತ್ತೀಯ ಕಾರ್ಯಕಲಾಪ**

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

ಈ ಕೆಳಕಂಡ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

7. ಡಾ: ಎಂ.ಆರ್. ಸೀತಾರಾಂ
8. ಶ್ರೀ ಪಿ.ಹೆಚ್. ಪೂಜಾರ್
9. ಡಾ: ಉಮಾಶ್ರೀ
10. ಶ್ರೀ ಕೇಶವ ಪ್ರಸಾದ್ ಎಸ್
11. ಶ್ರೀ ಎಂ. ನಾಗರಾಜು
12. ಶ್ರೀ ಶಶೀಲ್ ಜಿ. ನಮೋಶಿ

ಸದನವನ್ನು ರಾತ್ರಿ 10.38 ಗಂಟೆಗೆ ಮುಂದೂಡಿ ದಿನಾಂಕ:21.03.2025ರಂದು ಬೆಳಗ್ಗೆ 10.30 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು(**ಶ್ರೀಮತಿ ಭಾರತಿ ಶೆಟ್ಟಿ**) ಪ್ರಕಟಿಸಿದರು.

**ಕೆ.ಆರ್. ಮಹಾಲಕ್ಷ್ಮಿ,**

**ಕಾರ್ಯದರ್ಶಿ.**

*****

# **ಕರ್ನಾಟಕ ವಿಧಾನ ಪರಿಷತ್ತು**

## ನೂರ ಐವತ್ತೈದನೆಯ ಅಧಿವೇಶನ

## **ಲಘು ಪ್ರಕಟಣೆ ಭಾಗ–1**

## ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

## **ಶುಕ್ರವಾರ, ದಿನಾಂಕ:21.03.2025**

**(15)**

ಸದನವು ಬೆಳಗ್ಗೆ: 10.43 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### **1. ಸಭೆಯ ಮುಂದಿಡಲಾಗುವ ಕಾಗದ ಪತ್ರ**

**ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ, 2025ನ್ನು ಸಭೆಯ ಮುಂದೆ ಮಂಡಿಸಿದರು.**

ಮಾನ್ಯ ಸಚಿವರಾದ ಶ್ರೀ ಸತೀಶ್ ಜಾರಕಿ ಹೊಳಿ ಅವರು ಮಾನ್ಯ ಶಾಸಕರುಗಳನ್ನು ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಸಿಲುಕಿಸಲು ಪ್ರಯತ್ನಿಸುತ್ತಿರುವ ಬಗ್ಗೆ ಕೆಳಮನೆಯಲ್ಲಿ ಪ್ರಸ್ತಾಪಿಸಿದ್ದು, ಸದರಿ ವಿಷಯವು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ. ಆದುದರಿಂದ, ಈ ವಿಷಯದ ಸಂಬಂಧ ಸರ್ಕಾರ ಉತ್ತರ ನೀಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಒತ್ತಾಯಿಸಿದರು.

ಈ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿಕೆ ನೀಡಲಿರುತ್ತಾರೆಂದು ಮಾನ್ಯ ಸಭಾನಾಯಕರು ತಿಳಿಸಿದರು.

### **2. ವಿತ್ತೀಯ ಕಾರ್ಯಕಲಾಪ**

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

ಈ ಕೆಳಕಂಡ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

13. ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ

14. ಶ್ರೀ ಹೆಚ್.ಪಿ. ಸುಧಾಮ್ ದಾಸ್

"ಗದ್ದಲ"

ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರು ಅಸಂವಿಧಾನಿಕ ಪದ ಬಳಸಿದ್ದು, ಅವರು ಕ್ಷಮೆಯಾಚಿಸಬೇಕೆಂದು ಹಾಗೂ ಅವರನ್ನು ಸದನದಿಂದ ಹೊರಹಾಕಬೇಕೆಂದು ಒತ್ತಾಯಿಸಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎನ್. ರವಿಕುಮಾರ್ ಮತ್ತು ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಧರಣಿ ನಿರತರಾದರು.

ಮಧ್ಯಾಹ್ನ 12.10 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಮಧ್ಯಾಹ್ನ 12.58 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜು ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.

"ಗದ್ದಲ"

**ವಿತ್ತೀಯ ಕಾರ್ಯಕಲಾಪ**

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

ಈ ಕೆಳಕಂಡ ಶಾಸಕರು ಚರ್ಚೆಯಲ್ಲಿ ಭಾಗವಹಿಸಿದರು.

14. ಶ್ರೀ ಹೆಚ್.ಪಿ. ಸುಧಾಮ್ ದಾಸ್

**"ಗದ್ದಲ"**

## 3. ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ **104ನೇ ನಿಯಮದ** ಮೇರೆಗೆ ವಿಧಾನ ಸಭೆಯು ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಧನವಿನಿಯೋಗ ವಿಧೇಯಕ, 2025 (ವಿಧೇಯಕ ಸಂ.10)
2. ಕರ್ನಾಟಕ ಧನವಿನಿಯೋಗ (ಸಂ.2) ವಿಧೇಯಕ, 2025 (ವಿಧೇಯಕ ಸಂ.22)
3. ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.25)
4. ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.26)
5. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.20)

ಮಧ್ಯಾಹ್ನ 1.30 ಗಂಟೆಗೆ ಸದನವನ್ನು ಮುಂದೂಡಿ ಮಧ್ಯಾಹ್ನ 2.45 ಗಂಟೆಗೆ ಸಭೆ ಸೇರುವುದಾಗಿ ಮಾನ್ಯ ಸಭಾಪತಿಯವರು **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಪ್ರಕಟಿಸಿದರು.

ಸದನವು ಮಧ್ಯಾಹ್ನ 3.05 ಗಂಟೆಗೆ ಮಾನ್ಯ ಸಭಾಪತಿಯವರ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

**"ಗದ್ದಲ"**

ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.

**ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಕಾರ್ಯದರ್ಶಿಯವರು ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುವುದು**

01. ಕರ್ನಾಟಕ ಧನವಿನಿಯೋಗ ವಿಧೇಯಕ, 2025

02. ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2025

03. ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025

04. ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

05. ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025

06. ಡಾ: ಎಚ್. ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025

07. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ(ತಿದ್ದುಪಡಿ) ವಿಧೇಯಕ, 2025

**4. ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

01. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ"**ವನ್ನು ಪರ್ಯಾಲೋಚಿಸಿ

ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

02. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಡಾ:ಎಚ್. ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

03. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ನೋಟರಿಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

04. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ವಿವರಣೆ ನೀಡಿದರು.

ಮಾನ್ಯ ಸಭಾಪತಿಯವರು ಸದರಿ ಅಂಶಗಳನ್ನು ಪರಿಶೀಲಿಸುವುದಾಗಿ ತಿಳಿಸಿದನ್ನು ಒಪ್ಪಿ ಮಾನ್ಯ ವಿರೋಧ ಪಕ್ಷದ

ನಾಯಕರು ಹಾಗೂ ಶಾಸಕರುಗಳು ಧರಣಿ ಕೈಬಿಟ್ಟು ತಮ್ಮ ಆಸನಗಳಲ್ಲಿ ಆಸೀನರಾದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

05. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ವಿಧಾನಮಂಡಲದ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

06. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

**ವಿತ್ತೀಯ ಕಾರ್ಯಕಲಾಪ**

2025–26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

ಈ ಕೆಳಕಂಡ ಶಾಸಕರುಗಳು ಚರ್ಚೆಯಲ್ಲಿ ಭಾಗವಹಿಸಿದರು.

15. ಶ್ರೀಮತಿ ಭಾರತಿ ಶೆಟ್ಟಿ
16. ಶ್ರೀಮತಿ ಹೇಮಲತಾ ನಾಯಕ್
17. ಶ್ರೀ ಐವನ್ ಡಿ'ಸೋಜಾ
18. ಶ್ರೀಮತಿ ಬಲ್ಕೀಸ್ ಬಾನು
19. ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)

ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಅಂದಾಜುಗಳ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಉತ್ತರಿಸಿದರು.

ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಹನಿಟ್ರ್ಯಾಪ್ ಕುರಿತಂತೆ ಉತ್ತರ ನೀಡಬೇಕೆಂದು ಒತ್ತಾಯಿಸಿ ಸದನದ ಬಾವಿಯಲ್ಲಿ ಧರಣಿ ನಿರತರಾದರು.

ಮಾನ್ಯ ಮುಖ್ಯಮಂತ್ರಿಗಳು ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ತಿಳಿಸಿದರು.

**ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

07. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಧನವಿನಿಯೋಗ ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

08. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ(ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ ಮಾನ್ಯ ಕಾರ್ಮಿಕ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ದಿನಾಂಕ:21.03.2025ರ ಚುಕ್ಕೆ ಗುರುತಿನ ಒಟ್ಟು 22 ಪ್ರಶೆಗಳ ಪೈಕಿ 21 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 87 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಿದರು.

**5. ನಿರ್ಣಯ**

1. **ಡಾ: ಎಂ.ಸಿ. ಸುಧಾಕರ್ (ಮಾನ್ಯ ಉನ್ನತ ಶಿಕ್ಷಣ ಸಚಿವರು) ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.**

ವಿಶ್ವವಿದ್ಯಾಲಯ ಧನಸಹಾಯ ಆಯೋಗ ಹೊರಡಿಸಿರುವ ಕರಡು University Grants Commission (Minimum Qualifications for Appointment and Promotion of Teachers and Academic Staff in Universities and Colleges and Measures for the Maintenance of Standards in Higher Education) Regulations, 2025 ಅನ್ನು ಹಿಂಪಡೆಯಬೇಕೆಂದು ನಿರ್ಣಯಿಸಲಾಗಿದೆ.

ಈ ಕರಡು ಯುಜಿಸಿ ರೆಗ್ಯುಲೇಷನ್ಸ್, 2025 ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಒಕ್ಕೂಟದ (ಫೆಡರಲ್) ತತ್ವಗಳಿಗೆ ವಿರುದ್ಧವಾಗಿರುವುದು ಮಾತ್ರವಲ್ಲ, ಇದು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮೇಲೂ ಪರಿಣಾಮ ಬೀರುತ್ತದೆ. ಕರಡು ಯುಜಿಸಿ ರೆಗ್ಯುಲೇಷನ್ಸ್, 2025ರಲ್ಲಿರುವ ವಿಷಯಗಳ ಕುರಿತು ಕರ್ನಾಟಕ ಸರ್ಕಾರದ ಪ್ರಮುಖ ಕಾಳಜಿಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ:

**i) ಕುಲಪತಿಗಳಾಗಿ ಶೈಕ್ಷಣಿಕೇತರರ ನೇಮಕ (ಕಂಡಿಕೆ 10.1)**

ಉದ್ಯಮ, ಸಾರ್ವಜನಿಕ ಆಡಳಿತ ಅಥವಾ ಸಾರ್ವಜನಿಕ ನೀತಿಯಲ್ಲಿ ಅನುಭವ ಹೊಂದಿರುವ ವ್ಯಕ್ತಿಗಳನ್ನು ಕುಲಪತಿಗಳ ನೇಮಕಾತಿಗಾಗಿ ಪ್ರಸ್ತಾವಿತ ಮಾನದಂಡಗಳು ಗಮನಾರ್ಹವಾದ ಕಾಳಜಿಗಳನ್ನು ಹುಟ್ಟುಹಾಕುತ್ತವೆ. ಶೈಕ್ಷಣಿಕ ವಲಯದ ಹೊರಗಿನ ನಾಯಕತ್ವದ ಪಾತ್ರಗಳಲ್ಲಿನ ಅನುಭವವು ಮೌಲ್ಯಯುತವಾಗಿದ್ದರೂ, ಕುಲಪತಿಗಳ ಹುದ್ದೆಗೆ ಆಳವಾದ ಶೈಕ್ಷಣಿಕ ಪರಿಣತಿ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ತಿಳುವಳಿಕೆ ಅಗತ್ಯ. ಪ್ರಸ್ತಾವಿತ ಮಾನದಂಡಗಳು ವಿಶ್ವವಿದ್ಯಾನಿಲಯಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಅಗತ್ಯವಾದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವದ ಕೊರತೆಯಿರುವ ವ್ಯಕ್ತಿಗಳ ನೇಮಕಕ್ಕೆ ಕಾರಣವಾಗಬಹುದು ಎಂದು ನಾವು ಭಾವಿಸುತ್ತೇವೆ. ಶೈಕ್ಷಣಿಕ ಮತ್ತು ವಿಶ್ವವಿದ್ಯಾಲಯದ ಆಡಳಿತದಲ್ಲಿ ಅಪಾರ ಅನುಭವ ಹೊಂದಿರುವ ವ್ಯಕ್ತಿಗಳಿಗೆ ಆದ್ಯತೆ ನೀಡಲು ಮಾನದಂಡಗಳನ್ನು ಮರುಪರಿಶೀಲಿಸುವಂತೆ ನಾವು ಸಲಹೆ ಮಾಡುತ್ತೇವೆ.

**ii) ಕುಲಪತಿ ಶೋಧನಾ ಮತ್ತು ಆಯ್ಕೆ ಸಮಿತಿಯಿಂದ ರಾಜ್ಯ ಸರ್ಕಾರವನ್ನು ಹೊರಗಿಟ್ಟಿರುವುದು (ಕಂಡಿಕೆ 10.1. iv)**

ಕರಡು ಯುಜಿಸಿ ರೆಗ್ಯುಲೇಷನ್ಸ್, ರಾಜ್ಯ ಕಾಯಿದೆಗಳ ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ ರಾಜ್ಯ ಸರ್ಕಾರಗಳಿಗೆ ಯಾವುದೇ ಪಾತ್ರವನ್ನು ನೀಡಿರುವುದಿಲ್ಲ ಮತ್ತು ಇದರಿಂದಾಗಿ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಕಾನೂನುಬದ್ಧ ಹಕ್ಕುಗಳನ್ನು ತಡೆಯುತ್ತದೆ. ವಿಶ್ವವಿದ್ಯಾನಿಲಯಗಳಿಗೆ ಸಂಪೂರ್ಣ ಧನಸಹಾಯವನ್ನು ರಾಜ್ಯ ಸರ್ಕಾರಗಳು ಒದಗಿಸುತ್ತವೆ. ಕುಲಪತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಭಾಗವಹಿಸುವಿಕೆಯು ರಾಜ್ಯದ ನಿಜವಾದ ಆಕಾಂಕ್ಷೆಗಳನ್ನು, ಸ್ಥಳೀಯ ಶೈಕ್ಷಣಿಕ ಅಗತ್ಯಗಳು, ನೀತಿಗಳು ಮತ್ತು ದೃಢೀಕರಣದ ಕ್ರಮಗಳನ್ನು ಸೂಕ್ತವಾಗಿ ಪರಿಗಣಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನಿರ್ಣಾಯಕವಾಗಿರುತ್ತದೆ. ಆದ್ದರಿಂದ, ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವಲ್ಲಿ ರಾಜ್ಯ ಸರ್ಕಾರಗಳಿಗೆ ಪ್ರಮುಖ ಪಾತ್ರವನ್ನು ನೀಡಬೇಕು.

**iii) ಅಂತರ-ವಿಷಯಗಳ ಬೋಧನೆ (ಕಂಡಿಕೆ 3.2 ಮತ್ತು 3.3)**

ಅಭ್ಯರ್ಥಿಗಳು ತಮ್ಮ ಪದವಿ ಹಂತದ ಅಥವಾ ಸ್ನಾತಕೋತ್ತರ ಅರ್ಹತೆಗಿಂತ ಭಿನ್ನವಾದ ವಿಭಾಗದಲ್ಲಿ ಪಿಎಚ್‌ಡಿ ಹೊಂದಿದ್ದರೆ ಅಥವಾ ತಮ್ಮ ಶೈಕ್ಷಣಿಕ ಹಿನ್ನೆಲೆಗಿಂತ ಭಿನ್ನವಾದ ವಿಷಯದಲ್ಲಿ ನೆಟ್/ಸೆಟ್, ಪಾಸಾಗಿದ್ದರೆ ಆ ವಿಷಯದಲ್ಲಿ ಬೋಧಿಸಲು ಅರ್ಹರಾಗುತ್ತಾರೆ ಎಂದು ಪ್ರಸ್ತಾಪಿಸಲಾಗಿದೆ. ಸರಿಯಾದ ಮೂಲ ಜ್ಞಾನವಿಲ್ಲದೆ ವಿಷಯಗಳನ್ನು ಕಲಿಸಲು ಅವಕಾಶ ನೀಡುವುದರಿಂದ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಕಲಿಕೆಯ ಫಲಿತಾಂಶಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕರಡು ನಿಯಮಗಳಲ್ಲಿನ ಇಂತಹ ನಿಬಂಧನೆಗಳು ಶೈಕ್ಷಣಿಕ ಸಮಗ್ರತೆ, ಸ್ವಾಯತ್ತತೆ ಮತ್ತು ರಾಜ್ಯ ವಿಶ್ವವಿದ್ಯಾಲಯಗಳ ಅಂತರ್ಗತ ಅಭಿವೃದ್ಧಿಗೆ ಗಂಭೀರ ಸವಾಲುಗಳನ್ನು ಒಡ್ಡುತ್ತವೆ.

**iv) ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಳು:**

ಮಾರ್ಗಸೂಚಿಗಳನ್ನು ಅಂತಿಮಗೊಳಿಸುವ ಮೊದಲು ಗುತ್ತಿಗೆ ನೇಮಕಾತಿಗಳು/ಅತಿಥಿ ಪ್ರಾಧ್ಯಾಪಕರು/ Visiting ಪ್ರಾಧ್ಯಾಪಕರು/ Practice ಪ್ರಾಧ್ಯಾಪಕರು/ Emeritus ಪ್ರಾಧ್ಯಾಪಕರಿಗೆ ಸಂಬಂಧಿಸಿದ ನಿಬಂಧನೆಗಳ ಕುರಿತು ಹೆಚ್ಚಿನ ಸ್ಪಷ್ಟತೆಯನ್ನು ಕೋರಲಾಗಿದೆ.

**v) ಉಲ್ಲಂಘನೆಯ ಪರಿಣಾಮಗಳು**

ಕರಡು ಯುಜಿಸಿ ನಿಯಮಗಳ ಉಲ್ಲಂಘನೆಯ ಪರಿಣಾಮಗಳಿಗೆ ಸಂಬಂಧಿಸಿದ ನಿಬಂಧನೆಗಳು ತೀವ್ರ, ಅತಿಯಾದ, ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ಇವುಗಳನ್ನು ಗಂಭೀರವಾಗಿ ಮರುಪರಿಶೀಲಿಸುವ ಅಗತ್ಯವಿರುತ್ತದೆ. ಯು.ಜಿ.ಸಿ. ನಿಯಮಗಳನ್ನು ಪಾಲಿಸದಿದ್ದಲ್ಲಿ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು ನಿಜವಾಗಿಯೂ ಸರ್ವಾಧಿಕಾರಿ ಮತ್ತು ಫೆಡರಲ್ ಚೌಕಟ್ಟಿನಲ್ಲಿ ರಾಜ್ಯಗಳ ಸ್ವಾಯತ್ತತೆಯ ಮನೋಭಾವಕ್ಕೆ ವಿರುದ್ಧವಾಗಿದೆ.

ಆದ್ದರಿಂದ ಕರಡು ರೆಗ್ಯುಲೇಷನ್ಸ್, 2025 ಅನ್ನು ತಕ್ಷಣವೇ ಹಿಂತೆಗೆದುಕೊಳ್ಳುವ ಅವಶ್ಯಕತೆಯಿದೆ. ಈ ನಿಯಮಗಳು ಕರ್ನಾಟಕದ ಬಲವಾದ ಮತ್ತು ಚೈತನ್ಯಶೀಲ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ತೀವ್ರವಾಗಿ ದುರ್ಬಲಗೊಳಿಸುತ್ತವೆ ಮತ್ತು ನಮ್ಮ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತವೆ. ಆದುದರಿಂದ, ಈ ಘನ ಸದನವು, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ 2025ರ ಕರಡು ರೆಗ್ಯುಲೇಷನ್ಸ್ ಅನ್ನು ಹಿಂತೆಗೆದುಕೊಳ್ಳುವಂತೆ ಸರ್ವಾನುಮತದಿಂದ ನಿರ್ಣಯಿಸಿದೆ.

ಈ ನಿಯಮಗಳನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ರಾಜ್ಯಗಳೊಂದಿಗೆ ಸಹಕಾರಾತ್ಮಕ ಒಕ್ಕೂಟದ ಮನೋಭಾವ, ಸಹಯೋಗದ ಮತ್ತು ಸಮಾಲೋಚನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಈ ಸದನವು ಒತ್ತಾಯಿಸುತ್ತದೆ.

ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಸಂಜೆ 5.08 ಗಂಟೆಯಲ್ಲಿ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿರುವುದಾಗಿ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಪ್ರಕಟಿಸಿದರು.

ಸದನವು ಸಂಜೆ 6.15 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರವರಿಂದ ಬಂದಿರುವ ಕೆಳಕಂಡ ಸಂದೇಶವನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:21.03.2025ರಂದು 2025ನೇ ಸಾಲಿನ **"ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ"**ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

## ಸಭೆಯ ಮುಂದಿಡಲಾಗುವ ಕಾಗದ ಪತ್ರ

ಕಾರ್ಯದರ್ಶಿಯವರು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ **"ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ", 2025**ನ್ನು ಸಭೆಯ ಮುಂದೆ ಮಂಡಿಸಿದರು.

## ಶಾಸನ ರಚನೆ

## ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

01. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು, ಸಂಸದೀಯ

ವ್ಯವಹಾರಗಳು ಮತ್ತು ಶಾಸರನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

02. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ"**ವನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕೆಂದು ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ವಿವರಣೆ ನೀಡಿದರು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಹಾಗೂ ವಿರೋಧ ಪಕ್ಷದ ಮಾನ್ಯ ಶಾಸಕರುಗಳು ಧರಣಿಯನ್ನು ಕೈಬಿಟ್ಟು ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾದರು.

ಈ ಕೆಳಕಂಡ ಮಾನ್ಯ ಶಾಸಕರುಗಳು ಸ್ಪಷ್ಟೀಕರಣ ಕೋರಿದರು.

1. ಶ್ರೀ ಸಿ.ಟಿ. ರವಿ
2. ಶ್ರೀ ಐವನ್ ಡಿ'ಸೋಜಾ
3. ಶ್ರೀ ಎನ್. ರವಿಕುಮಾರ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
4. ಶ್ರೀ ಬಿ.ಕೆ. ಹರಿಪ್ರಸಾದ್
5. ಶ್ರೀ ಕೆ.ಎಸ್. ನವೀನ್
6. ಶ್ರೀ ಎಂ. ನಾಗರಾಜು
7. ಶ್ರೀಮತಿ ಬಲ್ಕೀಸ್ ಬಾನು
8. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು

ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಸ್ಪಷ್ಟೀಕರಣ ನೀಡಿದರು.

ವಿಧೇಯಕವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## ನಿರ್ಣಯಗಳು

**ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು, ನ್ಯಾಯ ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು ಮಂಡಿಸಿದ ಈ ಕೆಳಕಂಡ ನಿರ್ಣಯಗಳ ಮೇಲೆ ಚರ್ಚೆ ಹಾಗೂ ಅಂಗೀಕಾರ.**

## ನಿರ್ಣಯ–1

ಕೇಂದ್ರ ಸರ್ಕಾರವು 1995ರ ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡುವ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದೆ. (ಕೇಂದ್ರ ಸರ್ಕಾರದ ಕಾಯ್ದೆ ಸಂಖ್ಯೆ 43–1995) ಈ ಉದ್ದೇಶಕ್ಕಾಗಿ ಒಂದು ಜಂಟಿ ಸದನ ಸಮಿತಿಯನ್ನು 2024ರಲ್ಲಿ ಸಂಸತ್ತಿನ ಮೂಲಕ ರಚನೆಗೊಂಡಿತ್ತು. ಈ ಸಂಸದೀಯ ಸಮಿತಿಯು ಸಂಸತ್ತಿನ ಉನ್ನತ ಸಂಪ್ರದಾಯಗಳನ್ನು ಬದಿಗೊತ್ತಿ ವಿರೋಧ ಪಕ್ಷದ ಸದಸ್ಯರ ಯಾವುದೇ ಅಭಿಪ್ರಾಯವನ್ನು ಪರಿಗಣಿಸದೇ, ಲೆಕ್ಕಿಸದೇ ಏಕಪಕ್ಷಿಯವಾಗಿ ಮನಬಂದಂತೆ ವರ್ತಿಸಿ, ಈ ಕಾಯ್ದೆ ತಿದ್ದುಪಡಿಗೆ ಕೆಲವು ಬದಲಾವಣೆಗಳನ್ನು ಶಿಫಾರಸ್ಸು ಮಾಡಿ, ಸಂಸತ್ತಿಗೆ ವರದಿ ಸಲ್ಲಿಸಿ, ಈಗ ಮಸೂದೆಯನ್ನು ಸಂಸತ್ತಿನ ಅಂಗೀಕಾರಕ್ಕೆ ಮಂಡಿಸಲಾಗಿದೆ.

ಜಂಟಿ ಸಂಸದೀಯ ಸಮಿತಿಯ ಆಹ್ವಾನದಂತೆ ವಿವಿಧ ಪಾಲುದಾರರು, ರಾಜ್ಯ ವಕ್ಫ್ ಮಂಡಳಿಗಳು ಮತ್ತು ವಿವಿಧ ಸಂಸ್ಥೆಗಳು ಅಭಿಪ್ರಾಯಗಳನ್ನು ಮಂಡಿಸಿವೆ. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಮತ್ತು ವಿವಿಧ ಸಂಸ್ಥೆಗಳು ಹಾಗೂ ಪಾಲುದಾರರು ಈ ಕಾಯ್ದೆ ತಿದ್ದುಪಡಿಯನ್ನು ಕೈಗೊಳ್ಳಬಾರದು ಎಂದು ವಿರೋಧಿಸಿ ಅಭಿಪ್ರಾಯಗಳನ್ನು ನೀಡಿದಾಗ್ಯೂ ಈ ಕಾಯ್ದೆಯನ್ನು ಏಕಪಕ್ಷಿಯವಾಗಿ ತರಲು ನಿರ್ಧರಿಸಲಾಗಿದೆ ಹಾಗೂ ಸಂಸತ್ತಿನಲ್ಲಿ ಮಂಡಿಸಲಾಗಿದೆ.

ರಾಜ್ಯ ವಕ್ಫ್ ಮಂಡಳಿಯು 1995ರ ಸದರಿ ಕಾಯಿದೆ (2013ರಲ್ಲಿ ತಿದ್ದುಪಡಿಗೊಂಡಂತೆ) ಮತ್ತು ಇಲ್ಲಿಯವರೆಗೆ ಸದರಿ ಕಾಯಿದೆಗೆ ಮಾಡಲಾದ ತಿದ್ದುಪಡಿಗಳ ಪ್ರಕಾರ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ಚರ ಅಥವಾ ಸ್ಥಿರ ಆಸ್ತಿ ಮತ್ತು ವಸ್ತುಗಳ ಅಭಿರಕ್ಷಕರಾಗಿ ಕಾರ್ಯನಿರ್ವಹಿಸುತ್ತಿವೆ, ಮತ್ತು ನಮೂದು 28, ದತ್ತಿ ಸಂಸ್ಥೆಗಳು, ದತ್ತಿ ಮತ್ತು ಧಾರ್ಮಿಕ ದತ್ತಿ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು (ದತ್ತಿ ಮತ್ತು ದತ್ತಿ ಸಂಸ್ಥೆಗಳು, ದತ್ತಿ ಮತ್ತು ಧಾರ್ಮಿಕ ದತ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು) ಭಾರತದ ಸಂವಿಧಾನದ ಪಟ್ಟಿಯಲ್ಲಿ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಸಮಾನ ಜವಾಬ್ದಾರಿಯ ಏಕಕಾಲಿಕ ಪಟ್ಟಿಯ ಸೇರಿಸಲ್ಪಟ್ಟಿರುವುದರಿಂದ ಹಾಗೂ ಶಾಸನಾತ್ಮಕ ಅಧಿಕಾರವನ್ನು ಚಲಾಯಿಸುವ ಮೂಲಕ ಅಂಗೀಕರಿಸಲಾಗಿದೆ. ಸಂವಿಧಾನದ 3ನೇ ಪಟ್ಟಿಯಲ್ಲಿ ವಕ್ಫ್ ವಿಷಯ ಉಲ್ಲೇಖಿತವಾಗಿರುವುದಿಲ್ಲ. ವಕ್ಫ್ ಒಂದು ವಿಶೇಷ ಪರಿಕಲ್ಪನೆಯಾಗಿದೆ ಹಾಗೂ ಅದು ಕೇಂದ್ರ ಸರ್ಕಾರದ ಪ್ರತ್ಯೇಕ ವ್ಯಾಪ್ತಿಗೆ ಒಳಪಡುವ ವಿಷಯವಾಗಿರುವುದಿಲ್ಲ. ಬದಲಿಗೆ, ರಾಜ್ಯ ಸರ್ಕಾರದ ಪ್ರತ್ಯೇಕ ಹಾಗೂ ವಿಶೇಷ ಅಧಿಕಾರಕ್ಕೆ ಒಳಪಡುವ IIನೇ ಪಟ್ಟಿಯಲ್ಲಿ ನಮೂದು ಸಂಖ್ಯೆ: 10ರಲ್ಲಿ ಸ್ಮಶಾನ/ಖಬರಸ್ಥಾನಗಳು ಹಾಗೂ ನಮೂದು ಸಂಖ್ಯೆ 45ರಲ್ಲಿ ಭೂಮಿ, ಭೂಮಿ ಅಳತೆ, ಭೂ ದಾಖಲೆಗಳು ಈ ವಿಷಯಗಳು ಒಳಪಟ್ಟಿದ್ದು ಅವುಗಳ ಕುರಿತು ತಿದ್ದುಪಡಿ ತರುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುವುದಿಲ್ಲ. ಈ ತಿದ್ದುಪಡಿಯ ಮೂಕ ಉದ್ದೇಶಿತ ವಕ್ಫ್ ಕಾಯ್ದೆಯ ತಿದ್ದುಪಡಿಯು ರಾಜ್ಯ ಸರ್ಕಾರದ ಕಾರ್ಯಾಂಗದ ಮತ್ತು ಶಾಸನಾತ್ಮಕ ಅಧಿಕಾರ ವ್ಯಾಪ್ತಿಯನ್ನು ಕಬಳಿಸುತ್ತಿದೆ ಮತ್ತು ಮೊಟುಕುಗೊಳಿಸುತ್ತದೆ. ಈ ಉದ್ದೇಶಿತ ತಿದ್ದುಪಡಿಯು "Principle of Equity, Equality and parity" ತತ್ವಗಳಿಗೆ ವಿರುದ್ಧವಾಗಿದೆ. ಹಾಗಾಗಿ ಈ ಉದ್ದೇಶಿತ ತಿದ್ದುಪಡಿಯು ಸಂವಿಧಾನ ಬಾಹಿರವಾಗಿದೆ. (Ultra vires).

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ವಕ್ಫ್ ಸಮಾನ ಶಾಸನಾತ್ಮಕ ಅಧಿಕಾರದ ವಿಷಯವಾಗಿರುವುದರಿಂದ, ಭಾರತದ ಸಂವಿಧಾನದ 26ನೇ ವಿಧಿಯು ವಕ್ಫ್ ದತ್ತಿಗಳು ಮತ್ತು ವಕ್ಫ್ ಸಂಸ್ಥೆಗಳ ಹಕ್ಕುಗಳನ್ನು ರಕ್ಷಿಸಲು

ಮತ್ತು ಆಯಾ ಧಾರ್ಮಿಕ ಸಮುದಾಯಗಳಿಗೆ ಅದರ ಸ್ವಾತಂತ್ರ್ಯಯವನ್ನು ಸುನಿಶ್ಚಿತಗೊಳಿಸಲು ಸಂವಿಧಾನದತ್ತ ಮೂಲಭೂತ ಹಕ್ಕಾಗಿದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ವಕ್ಫ್ ಕಾಯ್ದೆಯು 1954ರಲ್ಲಿ ಭಾರತೀಯ ಸಂಸತ್ತು ಅಂಗೀಕರಿಸಿದ ಬಲಯುತವಾದ ಕಾನೂನಾಗಿದ್ದು, ನಂತರ 1995ರಲ್ಲಿ ಸಮಗ್ರವಾಗಿ ತಿದ್ದುಪಡಿಯಾಗಿದೆ.

ಪ್ರಸ್ತುತ, ತಿದ್ದುಪಡಿ ಮಸೂದೆಯಲ್ಲಿ ಮಂಡಿಸಲಾದ ನಿಬಂಧನೆಗಳು ವಕ್ಫ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಸರ್ಕಾರಗಳಿಂದ ಅನೇಕ ಅಧಿಕಾರಗಳನ್ನು ಕಸಿದುಕೊಳ್ಳುತ್ತವೆ ಮತ್ತು ಸಂವಿಧಾನದ ಒಕ್ಕೂಟ ವ್ಯವಸ್ಥೆಯ ತತ್ವಗಳು ಮತ್ತು ವಕ್ಫ್‌ನ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವ ಮಂಡಳಿಗಳಿಗೆ ಸಂಪೂರ್ಣ ವಿರುದ್ಧವಾಗಿವೆ. ಈ ತಿದ್ದುಪಡಿಗೆ ಸಂಬಂಧಪಟ್ಟ ವಿಷಯದಲ್ಲಿ ವಕ್ಫ್ ಮತ್ತು ವಕ್ಫ್ ನ್ಯಾಯಮಂಡಳಿಯ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವ ಮಂಡಳಿಗಳ ಕಾರ್ಯಗಳು ಮತ್ತು ಅಧಿಕಾರಗಳನ್ನು ದುರ್ಬಲಗೊಳಿಸುತ್ತದೆ ಅಥವಾ ರದ್ದುಗೊಳಿಸುತ್ತದೆ ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ಜಾತ್ಯತೀತ ತತ್ವಗಳಿಗೆ ವಿರುದ್ಧವಾದ ದೃಷ್ಟಿಕೋನ ಹೊಂದಿದೆ.

ಈ ಕಾನೂನಿನ ತಿದ್ದುಪಡಿಯು ಕಾನೂನಿನ ಪ್ರಜಾಸತ್ತಾತ್ಮಕ ಸ್ವರೂಪವನ್ನು ಮೊಟಕುಗೊಳಿಸುತ್ತದೆ. ಏಕೆಂದರೆ ಮಂಡಳಿಯು ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸದಸ್ಯರನ್ನು ಹೊರತುಪಡಿಸಿ ನಾಮನಿರ್ದೇಶಿತ ಸದಸ್ಯರು ಮತ್ತು ನಾಮನಿರ್ದೇಶಿತ ಅಧ್ಯಕ್ಷರನ್ನು ಮಾತ್ರ ಹೊಂದಿರುತ್ತದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿದೆ.

ಅದೇ ರೀತಿ, ಹೊಸ ತಿದ್ದುಪಡಿಯು ಸಂವಿಧಾನವು ನೀಡಿರುವ ವಕ್ಫ್ ತತ್ವಗಳು, ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ ಒಕ್ಕೂಟ ವ್ಯವಸ್ಥೆ ಜಾತ್ಯತೀತತೆ, ಪ್ರಜಾಪ್ರಭುತ್ವ ನಾಗರಿಕ ನಂಬಿಕೆಯ ಹಕ್ಕಿನೊಂದಿಗೆ ಅಸಮಂಜಸತೆಯನ್ನು ಸೃಷ್ಟಿಸುತ್ತದೆ.

ಸಂವಿಧಾನವು ಅನುಮತಿಸುವ ಮೂಲಭೂತ ಹಕ್ಕುಗಳು, ಸ್ವಾತಂತ್ರ, ಒಕ್ಕೂಟ ವ್ಯವಸ್ಥೆ ಜಾತ್ಯತೀತತೆ ಪ್ರಜಾಪ್ರಭುತ್ವ ಮತ್ತು ನಾಗರಿಕರ ನಂಬಿಕೆಯ ಹಕ್ಕಿನ ಮೇಲೆ ಯಾವುದೇ ರಾಜಿ ಮಾಡಿಕೊಳ್ಳಬಾರದು. ಈ ಎಲ್ಲಾ

ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್ ಅವರನ್ನು ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ಮಾನ್ಯತೆ ನೀಡಲಾಯಿತು.

ಮಾನ್ಯ ಶಾಸಕರಾದ ಶ್ರೀ ಡಿ.ಎಸ್.ಅರುಣ್ ಅವರು ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡವು 12 ವರ್ಷಗಳ ತರುವಾಯ ವಿಜೇತರಾದ ಭಾರತೀಯ ಕ್ರಿಕೆಟ್ ತಂಡಕ್ಕೆ ಹಾಗೂ ಮಂಗಳೂರಿನಲ್ಲಿ ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲಿ ಶ್ರಮವಹಿಸಿರುವ ಗೃಹ ಇಲಾಖೆಯ ಪೊಲೀಸ್ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2024-25ನೇ ಸಾಲಿನ ಪೂರಕ ಅಂದಾಜುಗಳು (ಮೂರನೇ ಹಾಗೂ ಅಂತಿಮ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02 ಹಾಗೂ 03ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಮಾರ್ಚ್-2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ (2025ರ ವರದಿ ಸಂಖ್ಯೆ:1) ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಲಾಯಿತು.

2024ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯ ವರದಿ ಮತ್ತು 2024-25ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 103ನೇ ವರದಿಗಳನ್ನು ಒಪ್ಪಿಸಲಾಯಿತು.

ರಾಜ್ಯದಲ್ಲಿ 2020-21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಕೂಲವಾಗುಂತೆ ವಿವಿಧ ಕೇಂದ್ರ ಯೋಜನೆಗಳಗೆ ಹಣವನ್ನು ಒದಗಿಸಲು, ಸಂವಿಧಾನದ ಅನುಚ್ಛೇದ 46ರ ಅಡಿಯಲ್ಲಿ ಕೇಂದ್ರ ಕಾಯ್ದೆಯನ್ನು ಜಾರಿಗೆ ತರುವ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ".

8. ಕರ್ನಾಟಕವೂ ಸೇರಿದಂತೆ, ದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತದೃಷ್ಟಿಯಿಂದ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಒಕ್ಕೊರಲಿನಿಂದ ಮತ್ತು ಸರ್ವಾನುಮತದಿಂದ ಕೇಂದ್ರ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ನಿರ್ಣಯಗಳನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

**ಸಾರಾಂಶ**

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನ 155ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:03.03.2025 ರಿಂದ 21.03.2025ರವರೆಗೆ ಒಟ್ಟು 15 ದಿನಗಳು ಅಂದರೆ, 93 ಗಂಟೆ 45 ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 10 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ:07.03.2025ರಂದು ಮಾನ್ಯ ಮುಖ್ಯಮಂತ್ರಿಯವರು 2025–26ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ 7 ಗಂಟೆ 10 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ:21.03.2025 ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಮೀಸಲಿಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದಲ್ಲದೆ, ಈ ಕಾಯ್ದೆಯಲ್ಲಿ ಉಪ ಯೋಜನೆಯ ತಯಾರಿಕೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಸಾಂಸ್ಥಿಕ ಕಾರ್ಯವಿಧಾನವನ್ನು ಜಾರಿಗೆ ತರಲಾಗಿದೆ.

5. ಸದರಿ ಕಾಯ್ದೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 2024-25ನೇ ಸಾಲಿನಲ್ಲಿ SCSP ಮತ್ತು TSPಗೆ ರಾಜ್ಯ ಯೋಜನೆ/ಅಭಿವೃದ್ಧಿ ವೆಚ್ಚದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ರೂ.39121.46 ಕೋಟಿಗಳನ್ನು ಒದಗಿಸಲಾಗಿದೆ. 2025-26ರ ಆಯವ್ಯಯದಲ್ಲಿ ರೂ.42018.00 ಕೋಟಿಗಳನ್ನು ಮೀಸಲಿಡಲಾಗಿದೆ.

6. ಭಾರತ ಸರ್ಕಾರವು ರೂ.50.34 ಲಕ್ಷ ಕೋಟಿಗಳ ಬಜೆಟ್ ವೆಚ್ಚವನ್ನು (ಆದಾಯ ಮತ್ತು ಬಂಡವಾಳ ಎರಡೂ ಒಟ್ಟಾಗಿ) ಮಂಡಿಸಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ, ಕೇಂದ್ರ ಆಯವ್ಯಯದ ವೆಚ್ಚದಲ್ಲಿ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ- DAPSC ಗಾಗಿ ರೂ.1.68 ಲಕ್ಷ ಕೋಟಿ ಮತ್ತು ಬುಡಕಟ್ಟು ಉಪ ಯೋಜನೆಗಾಗಿ ರೂ.1.29 ಲಕ್ಷ ಕೋಟಿ ಒದಗಿಸಲಾಗಿದೆ. ವಾಸ್ತವವಾಗಿ, ಕೇಂದ್ರ ಆಯವ್ಯಯದ ಪ್ರಮಾಣವನ್ನು ನೋಡಿದರೆ, DAPSC ಮತ್ತು ಬುಡಕಟ್ಟು ಉಪ ಯೋಜನೆಗೆ ಮೀಸಲಿಟ್ಟ ಮೊತ್ತವು 2011ರ ಜನಗಣತಿಯಂತೆ ಕನಿಷ್ಠ ದೇಶದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಅನುಪಾತದಲ್ಲಿರಬಹುದಾಗಿತ್ತು ದೇಶದಲ್ಲಿ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆ 16.6% ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ 8.6%.

7. "ಭಾರತ ಸರ್ಕಾರವು ಸಂವಿಧಾನದ ಅನುಚ್ಛೇದ 46ರಂತೆ ಕೇಂದ್ರ ಬಜೆಟ್‌ನ ಒಂದು ಭಾಗವನ್ನು ಪರಿಶಿಷ್ಟ ಜಾತಿ ಉಪ ಯೋಜನೆ (ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಕ್ರಿಯಾ ಯೋಜನೆ-) ಮತ್ತು ಬುಡಕಟ್ಟು ಉಪ ಯೋಜನೆಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡಲು ಮತ್ತು

ಸಾಂವಿಧಾನಿಕ ಮೌಲ್ಯಗಳನ್ನು ನಾವು ರಕ್ಷಿಸಬೇಕಾದ್ದುದು ರಾಜ್ಯಗಳ ಕರ್ತವ್ಯವಾಗಿದೆ.

ಈ ಕಾಯ್ದೆಯು ದೇಶದ ಎಲ್ಲಾ ವರ್ಗಗಳ ಜನತೆಯ ಆಶೋತ್ತರಗಳನ್ನು ಮತ್ತು ಅವಕಾಶಗಳನ್ನು ಪ್ರತಿಬಿಂಬಿಸುವುದಿಲ್ಲ. ಕರ್ನಾಟಕ ನಾಡಿನ ಜನತೆಯ ಸರ್ವಾನುಮತದ ಅಪೇಕ್ಷೆ-ನಿರೀಕ್ಷೆಗಳಿಗೆ ಮತ್ತು ಜಾತ್ಯತೀತ ತತ್ವಗಳಿಗೆ ಸಂಪೂರ್ಣವಾದ ವಿರೋಧ ವ್ಯಕ್ತಪಡಿಸುವ ಕಾಯ್ದೆಯಾಗಿರುವುದರಿಂದ ಈ ಸದನವು ವಕ್ಫ್ ಕಾಯ್ದೆ ತಿದ್ದುಪಡಿಯನ್ನು ಸರ್ವಾನುಮತದಿಂದ ತಿರಸ್ಕರಿಸುತ್ತದೆ.

ಈ ಹಿನ್ನಲೆಯಲ್ಲಿ ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ತಕ್ಷಣ ಹಿಂಪಡೆಯುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಲು ಕೇಂದ್ರ ಸರ್ಕಾರವು ವಿಳಂಬವಿಲ್ಲದೇ ಕ್ರಮ ಕೈಗೊಳ್ಳಬೇಕೆಂದು ಈ ಸದನವು ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ಆಗ್ರಹಿಸುತ್ತದೆ.

## ನಿರ್ಣಯ-2

4. ಕರ್ನಾಟಕ ರಾಜ್ಯ ಸರ್ಕಾರವು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ, ಸಂವಿಧಾನದ ಅನುಚ್ಛೇದ 46ರಂತೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಂದಿನ ಭಾರತ ಸರ್ಕಾರದ ಯೋಜನಾ ಆಯೋಗದ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು, 2014-15ರ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಕರ್ನಾಟಕ ಅನುಸೂಚಿತ ಜಾತಿ ಉಪ ಯೋಜನೆ ಮತ್ತು ಅನುಸೂಚಿತ ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ಎಂಬ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಯೋಜನಾ ವೆಚ್ಚದ ಒಂದು ಭಾಗವನ್ನು ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಗೆ

ಅನುಮತಿ ನೀಡಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ:14.01.2025 ರಿಂದ 13.07.2025ರವರೆಗೆ ಆರು ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಕುರಿತು 3 ಗಂಟೆ 34 ನಿಮಿಷ ವಿಶೇಷ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಯಿತು.

ನಿಯಮ 59 ರಡಿಯಲ್ಲಿ ಒಟ್ಟು 03 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಉತ್ತರಿಸಲಾಯಿತು. ಉಳಿದ 02 ಸೂಚನೆಗಳನ್ನು ನಿಯಮ 330ಕ್ಕೆ ಪರಿವರ್ತಿಸಿ ಒಂದನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರಡಿಯಲ್ಲಿ 02 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1609 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 195 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 158 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1414 ಪ್ರಶ್ನೆಗಳ ಪೈಕಿ 1035 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಒಂದು ಸೂಚನೆಗೆ ಚರ್ಚಿಸಲು ಅವಕಾಶ ನೀಡಲಾಯಿತು.

ನಿಯಮ 72ರಡಿಯಲ್ಲಿ 133 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 10 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 49 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 78 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 12 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 137 ಸೂಚನೆಗಳ ಪೈಕಿ 03 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 75 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 21 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

**ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ಸದಸ್ಯರು ಮಾತನಾಡಿದ ನಂತರ:-**

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ರಾತ್ರಿ 8.00 ಗಂಟೆಯಲ್ಲಿ ರಾಷ್ಟ್ರಗೀತೆಯನ್ನು ನುಡಿಸುವುದರ ಮೂಲಕ ಮಾನ್ಯ ಸಭಾಪತಿಯವರು (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) **ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.**

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

*****

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ.18/ಪಿ5